ಸಂಪುಟ: 22, ಸಂಚಿಕೆ: 15, ಪುಟಗಳು: 8, ಗುರುವಾರ, 24 ಅಕ್ಟೋಬರ್ 2024 RNI NO. KARKAN/2002/08054
epaper: www.sanjemugilu.com



ವೇಣು ಸಾರಥ್ಯದಲ್ಲಿ...

ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ

₹3

ದಶಪ್ರಮತಿ ಮುದ್ರಣಾಲಯ
dashapramathi mudranalaya
PRE-PRESS PRINTERS
Contact: +91 9483589085 | e-mail: dashapramathimudranalaya@gmail.com
We Undertake Printing of Newspapers | Tabloids | Magazines

### ಸುಭಾಷಿತ

ಬದುಕಿ, ಇತರರನ್ನು ಬದುಕಲು ಬಿಡಿ ಎಂಬುದೇ ನಮ್ಮ ಜೀವನದ ಮಂತ್ರವಾಗಬೇಕು.

। ಮಹಾತ್ಮಗಾಂಧಿ

### ಪಂಚಾಂಗ

(ಗುರುವಾರ 24, ಅಕ್ಟೋಬರ್-2024)

- ಶ್ರೀ ಕ್ರೋಧಿನಾಮ ಸಂವತ್ಸರ,
- ದಕ್ಷಿಣಾಯಣ, ಶರದೃತು,
- ಆಶ್ವಯುಜ ಮಾಸ, ಕೃಷ್ಣ ಪಕ್ಷ,
- ಅಷ್ಟಮಿ, ಗುರುವಾರ, ಪುಷ್ಯ ನಕ್ಷತ್ರ.
- ರಾಹುಕಾಲ : 01:36 ರಿಂದ 03:04
- ಗುಳಿಕಕಾಲ : 09:11 ರಿಂದ 10:39
- ಯಮಗಂಡಕಾಲ : 06:14 ರಿಂದ 07:43

## ಸಂಕ್ಷಿಪ್ತ ಸುದ್ದಿ

## ಇಂದು ಸೇರಿ ಇನ್ನೂ 4 ದಿನ ಬೆಂಗಳೂರಿನಲ್ಲಿ ಮಳೆ



**ಬೆಂಗಳೂರು:** ಸಿಲಿಕಾನ್ ಸಿಟಿ ಬೆಂಗಳೂರಿನ ಜನರು ಈಗಾಗಲೇ ಮಳೆಯಿಂದ ಕಂಗಾಲಾಗಿದ್ದಾರೆ. ಈ ಬೆನ್ನಲ್ಲೇ ಇಂದು (ಗುರುವಾರ) ಸೇರಿ ಇನ್ನೂ ನಾಲ್ಕು 4 ದಿನ ಬೆಂಗಳೂರಿನಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಇಂದು ಬೆಳಗ್ಗೆಯೇ ಸತತ 3 ಗಂಟೆಗಳ ಕಾಲ ಭಾರೀ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದ್ದು, ಎಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಿದೆ.

ಪುಟ 2

## ಏರೋಸ್ಪೇಸ್ ಕಚೇರಿ ದಾಳಿಗೆ ಪ್ರತೀಕಾರ ಇರಾಕ್ ಏರ್‌ಸ್ಟ್ರೈಕ್



**ಅಂಕಾರಾ:** ಟರ್ಕಿಶ್ ಏರೋಸ್ಪೇಸ್ ಇಂಡಸ್ಟ್ರೀಸ್ ಪ್ರಧಾನ ಕಚೇರಿ ಮೇಲೆ ದಾಳಿ ನಡೆಸಿದ್ದಕ್ಕೆ ಪ್ರತಿಯಾಗಿ ಟರ್ಕಿ ವಾಯುಪಡೆಯು ಬುಧವಾರ ಇರಾಕ್ ಮತ್ತು ಸಿರಿಯಾದಲ್ಲಿನ ಕುರ್ದಿಶ್ ಉಗ್ರಗಾಮಿಗಳ ಮೇಲೆ ವಾಯು ದಾಳಿ ನಡೆಸಿದೆ.

ಈ ವೈಮಾನಿಕ ದಾಳಿಯಲ್ಲಿ 30ಕ್ಕೂ ಹೆಚ್ಚು ಗುರಿಗಳನ್ನು ನಾಶಗೊಳಿಸಲಾಗಿದೆ ಎಂದು ಟರ್ಕಿಯ ರಕ್ಷಣಾ ಸಚಿವಾಲಯ ಸಂಕ್ಷಿಪ್ತ ಹೇಳಿಕೆಯಲ್ಲಿ ತಿಳಿಸಿದೆ.

ಕುರ್ದಿಶ್ ಉಗ್ರಗಾಮಿಗಳು ಏರೋಸ್ಪೇಸ್ ಕಚೇರಿ ಮೇಲೆ ದಾಳಿ ನಡೆಸಿದ ಕೆಲವೇ ಗಂಟೆಗಳಲ್ಲಿ ಈ ದಾಳಿ ನಡೆದಿರುವುದು ವಿಶೇಷ. ರಕ್ಷಣಾ ಕಂಪನಿಯ ಮೇಲಿನ ದಾಳಿಯ ಹಿಂದೆ ಕುರ್ದಿಸ್ತಾನ್ ವರ್ಕರ್ಸ್ ಪಾರ್ಟಿ ಅಥವಾ ಪಿಕೆಕೆ ಕೈವಾಡವಿದೆ ಟರ್ಕಿ ರಕ್ಷಣಾ ಸಚಿವ ಯಾಸರ್ ಗುಲೇರ್ ಹೇಳಿದ್ದಾರೆ.

ಇರಾಕ್‌ನಲ್ಲಿ ನೆಲೆ ಹೊಂದಿರುವ ಪಿಕೆಕೆ ಮತ್ತು ಸಿರಿಯಾದಲ್ಲಿರುವ ಕುರ್ದಿಶ್ ಉಗ್ರರ ಮೇಲೆ ಟರ್ಕಿ ನಿಯಮಿತವಾಗಿ ವಾಯುದಾಳಿಗಳನ್ನು ನಡೆಸಿಕೊಂಡೇ ಬಂದಿದೆ.

ಪುಟ 2

# ರಾಜ್ಯದಲ್ಲಿ ಹೊಸ ಗೃಹ ಆರೋಗ್ಯ ಯೋಜನೆ ಜಾರಿ

**ಕೊಪ್ಪಳ:** ಇತ್ತೀಚೆಗೆ ಹೆಚ್ಚಿನ ಜನರಲ್ಲಿ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ. ಆಧುನಿಕ ಜೀವನ ಶೈಲಿ ಸೇರಿದಂತೆ ಅನೇಕ ಕಾರಣಗಳಿಂದ ಆರೋಗ್ಯ ಸಮಸ್ಯೆಗಳು ಗಂಭೀರವಾಗುತ್ತಿವೆ. ಇನ್ನು ಅನೇಕ ಆರೋಗ್ಯ ಸಮಸ್ಯೆಗಳಿಗೆ ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆ ಪ್ರಮುಖ ಕಾರಣವಾಗಿವೆ. ಆದರೆ ಹೆಚ್ಚಿನ ಜನರು ತಮಗೆ ಸಕ್ಕರೆ ಕಾಯಿಲೆ, ರಕ್ತದೊತ್ತಡ ಇದ್ದರೂ ತಪಾಸಣೆ ಮಾಡಿಸಿಕೊಳ್ಳುತ್ತಿಲ್ಲ, ಚಿಕಿತ್ಸೆ ಪಡೆದುಕೊಳ್ಳುತ್ತಿಲ್ಲ. ಇದಕ್ಕಾಗಿ ಆರೋಗ್ಯ ಇಲಾಖೆ, ರಾಜ್ಯದ ಜನರ ಆರೋಗ್ಯ ಕಾಪಾಡುವ ಉದ್ದೇಶದಿಂದ ಇಂದಿನಿಂದ ರಾಜ್ಯದಲ್ಲಿ ಹೊಸ ಯೋಜನೆಯನ್ನು ಜಾರಿಗೊಳಿಸುತ್ತಿದೆ.

**ಏನಿದು ಗೃಹ ಆರೋಗ್ಯ ಯೋಜನೆ:** ಹಳ್ಳಿ ಪ್ರದೇಶಗಳ




ಜನರ ಆರೋಗ್ಯದ ಮಟ್ಟ ಸುಧಾರಿಸುವ ಮತ್ತು ಸಾಂಕ್ರಾಮಿಕವಲ್ಲದ ರೋಗಗಳನ್ನು ನಿಯಂತ್ರಿಸುವ ಗುರಿಯನ್ನು ಹೊಂದಿರುವ ಯೋಜನೆಯೇ ಗೃಹ ಆರೋಗ್ಯ ಯೋಜನೆ. ಗೃಹ ಆರೋಗ್ಯ ಯೋಜನೆ ಮೂಲಕ ಆರೋಗ್ಯ ಇಲಾಖೆ ಸಿಬ್ಬಂದಿ ಮನೆಮನೆಗೆ ತೆರಳಿ ಜನರ ಆರೋಗ್ಯ ತಪಾಸಣೆ ಮಾಡಲಿದ್ದಾರೆ. ಬಿಪಿ, ಶುಗರ್ ಇದ್ದವರಿಗೆ ಇನ್ನು ಮುಂದೆ ಮನೆಗೆ ಔಷಧಗಳನ್ನು ಉಚಿತವಾಗಿ ತಲುಪಿಸಲಾಗುತ್ತದೆ.

ಈ ಮೊದಲು ರಕ್ತದೊತ್ತಡ, ಸಕ್ಕರೆ ಕಾಯಿಲೆ ಅಂದರೆ ಅದು ಶ್ರೀಮಂತರ ಕಾಯಿಲೆ ಅಂತ ಹೇಳುತ್ತಿದ್ದರು. ಆದರೆ ಇದೀಗ ಬಿಪಿ, ಶುಗರ್ ಜಾತಿ, ಮತ, ಧರ್ಮವೆನ್ನದೆ, ವಯಸ್ಸಿನ ಮಿತಿಯೂ ಇಲ್ಲದೇ ಎಲ್ಲರಲ್ಲಿಯೂ ಕಾಣಿಸಿಕೊಳ್ಳುತ್ತಿದೆ. ಆಧುನಿಕ ಜೀವನ ಶೈಲಿ, ಅತಿಯಾದ ಒತ್ತಡದಲ್ಲಿ ಕೆಲಸ ಮಾಡೋದು, ಆರೋಗ್ಯದ ಬಗ್ಗೆ ಹೆಚ್ಚಿನ ಜನರು ಕಾಳಜಿ ವಹಿಸದೇ ಇರೋದು, ನಿಯಮಿತವಾಗಿ ವ್ಯಾಯಾಮ, ಉತ್ತಮ ಆಹಾರ ಪದ್ದತಿಯನ್ನು ಅನುಸರಿಸದೇ ಇರೋದರಿಂದ ಹೆಚ್ಚಿನ ಜನರಿಗೆ ಬಿಪಿ, ಶುಗರ್ ಬರಲು ಕಾರಣವಾಗುತ್ತಿದೆ. ಅನೇಕರು ಆರಂಭದಲ್ಲಿಯೇ ತಪಾಸಣೆ ಮಾಡಿಸಿಕೊಂಡು, ಅದಕ್ಕೆ ಬೇಕಾದ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದಾರೆ.

**ಗ್ರಾಮೀಣ ಜನರ ಆರೋಗ್ಯ ಕಾಳಜಿಗಾಗಿ ಕ್ರಮ:** ರಾಜ್ಯದ ಗ್ರಾಮೀಣ ಭಾಗ ಸೇರಿದಂತೆ ಅನೇಕರು ತಮಗೆ ರಕ್ತದೊತ್ತಡ, ಸಕ್ಕರೆ ಖಾಯಿಲೆಯ ಲಕ್ಷಣಗಳು ಇದ್ದರು ಕೂಡಾ ತಪಾಸಣೆ ಮಾಡಿಸಿಕೊಳ್ಳದೆ ನಿರ್ಲಕ್ಷ್ಯ ಮಾಡುತ್ತಿದ್ದಾರೆ.

ಪುಟ 2

## ಬಾಬುಸಾಬ್ ಪಾಳ್ಯ ಕಟ್ಟಡ ಕುಸಿತ: ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ.

# ಪರಿಹಾರ ಘೋಷಿಸಿದ ಪ್ರಧಾನಿ

**ಬೆಂಗಳೂರು:** ಬೆಂಗಳೂರಿನ ಬಾಬುಸಾಬ್ ಪಾಳ್ಯ ಕಟ್ಟಡ ಕುಸಿತದಲ್ಲಿ ಮೃತಪಟ್ಟವರ ಕುಟುಂಬಗಳ ನೆರವಿಗೆ ಪ್ರಧಾನಿ ನರೇಂದ್ರ ಮೋದಿ ಧಾವಿಸಿದ್ದು, ತಲಾ 2 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ. ಈ ವಿಚಾರವಾಗಿ ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ಪ್ರಧಾನಿ ಕಾರ್ಯಾಲಯ ಸಂದೇಶ ಪ್ರಕಟಿಸಿದೆ.



ಮೃತ 8 ಜನರ ಕುಟುಂಬಸ್ಥರಿಗೆ ತಲಾ 2 ಲಕ್ಷ ರೂ. ಪರಿಹಾರ ಘೋಷಣೆ ಮಾಡಲಾಗಿದೆ. ಗಾಯಾಳುಗಳಿಗೆ ತಲಾ 50 ಸಾವಿರ ರೂಪಾಯಿ ಪರಿಹಾರ ಘೋಷಣೆ ಮಾಡಲಾಗಿದ್ದು, ಪ್ರಧಾನಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ಪರಿಹಾರ ನೀಡಲಾಗುತ್ತದೆ. ದುರಂತದಲ್ಲಿ ಮೃತಪಟ್ಟವರಿಗೆ ಸಂತಾಪ ಸೂಚಿಸಿದ ಪ್ರಧಾನಿ ಮೋದಿ, ಮೃತ ಕಾರ್ಮಿಕರ ಕುಟುಂಬಸ್ಥರ ದುಃಖದಲ್ಲಿ ನಾನು ಭಾಗಿ ಎಂದಿದ್ದಾರೆ. ಜತೆಗೆ, ಗಾಯಾಳುಗಳು ಬೇಗ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸಿದ್ದಾರೆ.

**ಮೃತರ ಸಂಖ್ಯೆ 8ಕ್ಕೆ ಏರಿಕೆ:** ಬೆಂಗಳೂರಿನ ಬಾಬುಸಾಬ್ ಪಾಳ್ಯದಲ್ಲಿ ನಡೆದಿರುವ ಭೀಕರ ಕಟ್ಟಡ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 8ಕ್ಕೆ ಏರಿಕೆಯಾಗಿದೆ. ಮಂಗಳವಾರ ಸಂಜೆಯಿಂದಲೂ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಇದುವರೆಗೆ 8ಕಾರ್ಮಿಕರ ಮೃತದೇಹಗಳನ್ನ ಹೊರಗೆ ತೆಗೆಯಲಾಗಿದೆ. ಸ್ಥಳದಲ್ಲೇ ಮೊಕ್ಕಾಂ ಹೂಡಿರುವ ಎನ್ ಡಿಆರ್ ಎಫ್, ಎಸ್ ಡಿಆರ್ ಎಫ್ ಸಿಬ್ಬಂದಿ ನಿರಂತರವಾಗಿ ಶೋಧ ಕಾರ್ಯ ನಡೆಸುತ್ತಿದ್ದಾರೆ. 14 ಜನರನ್ನು ರಕ್ಷಿಸಿದ್ದಾರೆ.

ಪುಟ 2



## ಮಳೆಯಿಂದ ಜಲಾವೃತವಾಗಿದ್ದ ಯಲಹಂಕದ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್‌ಗೆ

# ಬಿಬಿಎಂಪಿ ನೋಟಿಸ್

**ಬೆಂಗಳೂರು:** ಬೆಂಗಳೂರಿನಲ್ಲಿ ಸುರಿಯುತ್ತಿರುವ ಭಾರೀ ಮಳೆಯಿಂದ ಯಲಹಂಕವೊಂದರಲ್ಲೇ 1 ಸಾವಿರಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿತ್ತು. ಯಲಹಂಕದ ಕೇಂದ್ರೀಯ ವಿಹಾರ್ ಅಪಾರ್ಟ್ ಮೆಂಟ್ ಜಲಾವೃತವಾಗಿ ಅಲ್ಲಿಯ ನಿವಾಸಿಗಳನ್ನು ಬೇರೆಡೆ ಸ್ಥಳಾಂತರಿಸಲಾಗಿತ್ತು. 10 ದಿನಗಳಲ್ಲಿ 3ನೇ ಬಾರಿ ಜಲಾವೃತವಾಗಿದ್ದ ಈ ಅಪಾರ್ಟ್ ಮೆಂಟ್ ಗೆ ಬಿಬಿಎಂಪಿ ನೋಟಿಸ್ ಜಾರಿ ಮಾಡಿದೆ.

ಪುಟ 2




# ದರ್ಶನೋತ್ಸವಕ್ಕೆ ಕ್ಷಣಗಣನೆ

**ಹಾಸನ:** ವರ್ಷಕ್ಕೊಮ್ಮೆ ದರ್ಶನ ಭಾಗ್ಯ ಕರುಣಿಸುವ ಹಾಸನದ ಅಧಿದೇವತೆ, ಶಕ್ತಿದೇವತೆ ಹಾಸನಾಂಬೆಯ ದರ್ಶನೋತ್ಸವ ಆರಂಭಕ್ಕೆ ಕ್ಷಣಗಣನೆ ಶುರುವಾಗಿದೆ. ಆಶ್ವೀಜ ಮಾಸದ ಮೊದಲವಾದ ಇಂದು ಮಧ್ಯಾಹ್ನ 12 ಗಂಟೆ ನಂತರ ದೇವಿಯ ಗರ್ಭಗುಡಿ ಬಾಗಿಲು ಶಾಸ್ತ್ರೋಕ್ತವಾಗಿ ತೆರೆಯಲಿದೆ. ನ.3ರ ಬೆಳಿಗ್ಗೆವರೆಗೆ ದೇವಿಯ ದರ್ಶನೋತ್ಸವಕ್ಕೆ ಅವಕಾಶವಿದ್ದು, ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ.

**» ಇಂದು ಮಧ್ಯಾಹ್ನ ತೆರೆಯಲಿದೆ ಹಾಸನಾಂಬೆ ಗರ್ಭಗುಡಿ ಬಾಗಿಲು**

ವರ್ಷಕ್ಕೊಮ್ಮೆ ದರ್ಶನ ನೀಡಲು ಹಾಸನಾಂಬೆ ದರ್ಶನೋತ್ಸವಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಈ ಬಾರಿ ದಿನದ 24 ಗಂಟೆಯೂ ದೇವಿಯ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಭಕ್ತರ ದರ್ಶನಕ್ಕೆ



ಅಗತ್ಯವಿರುವ ಮೂಲಭೂತ ಸೌಕರ್ಯಗಳಾದ ಮಳೆ-ಬಿಸಿಲಿನಿಂದ ಭಕ್ತರು ಆಶ್ರಯ ಪಡೆಯಲು ಜರ್ಮನ್ ಟೆಂಟ್ ನಿರ್ಮಾಣ ಮಾಡಲಾಗಿದೆ.

ಹಾಸನಾಂಬೆ ದೇವಾಲಯದ ಒಳ-ಹೊರಗೆ ವಿಶೇಷ ರೀತಿಯಲ್ಲಿ ಹೂವಿನ ಅಲಂಕಾರ ಮಾಡಲಾಗಿದೆ. ಹಾಸನಾಂಬೆಯ ಬಾಗಿಲ ಮುಂಭಾಗ ಕಲಶದ ರೀತಿಯ ಹೂವಿನ ಕುಂಡ ಎಲ್ಲರ ಗಮನ ಸೆಳೆಯುತ್ತಿದೆ.

ಪುಟ 2

## ಕರ್ನಾಟಕದ ಬೀಚ್‌ಗಳಲ್ಲಿಯೂ ಗೋವಾ ರೀತಿ ಮದ್ಯಪಾನ, ಮಾರಾಟಕ್ಕೆ ಅವಕಾಶ

# ಪ್ರವಾಸೋದ್ಯಮ ಇಲಾಖೆ ಚಿಂತನೆ

**ಮಂಗಳೂರು:** ಕರ್ನಾಟಕದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಗೋವಾದ ಮಾದರಿಯಲ್ಲಿ ರಾಜ್ಯದ ಬೀಚ್‌ಗಳಲ್ಲಿ ಟೆಂಟ್‌ಗಳನ್ನು ಹಾಕುವುದು ಮತ್ತು ಮದ್ಯ ಮಾರಾಟ, ಮದ್ಯಪಾನಕ್ಕೆ ಅನುಮತಿ ನೀಡುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ಪ್ರವಾಸೋದ್ಯಮ ಇಲಾಖೆ ತಿಳಿಸಿದೆ. ಮಂಗಳೂರಿನಲ್ಲಿ ನಡೆದ 'ಕನೆಕ್ಟ್ 2024'ನಲ್ಲಿ ಮಾತನಾಡಿದ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕ ರಾಜೇಂದ್ರ ಕೆವಿ, ಬೀಚ್‌ಗಳಲ್ಲಿ ಮದ್ಯ ಬಳಕೆಯ ಮೇಲೆ ಇರುವ ನಿರ್ಬಂಧಗಳನ್ನು ಸಡಿಲಿಸುವ ಅಗತ್ಯವಿದೆ ಎಂದರು.

ಪುಟ 2



## ಕಾಂಗ್ರೆಸ್‌ಗೆ ಮರುಜೀವ ನೀಡಿದ ಕರ್ನಾಟಕ, ಕೇರಳ

# ಗಾಂಧಿ ಕುಟುಂಬಕ್ಕೆ ಸಂಜೀವಿನಿ ದಕ್ಷಿಣ ಭಾರತ

**ಬೆಂಗಳೂರು:** ರಾಮಾಯಣದ ಲಂಕಾ ಯುದ್ಧದ ಸಮಯದಲ್ಲಿ ರಾವಣನ ಮಗ ಮೇಘನಾದನ ದಿವ್ಯ ಆಯುಧದಿಂದ ಮೂರ್ಛೆ ಹೋದ ಲಕ್ಷ್ಮಣನ ಪ್ರಾಣವನ್ನು ಉಳಿಸಲು ಹನುಮಂತ ಉತ್ತರದ ಹಿಮಾಲಯದಿಂದ ದಕ್ಷಿಣದ ಲಂಕೆಗೆ ಸಂಜೀವಿನಿ ಗಿಡಮೂಲಿಕೆಯನ್ನು ತಂದಿದ್ದನೆಂಬ ಕತೆಯನ್ನು ನಾವೆಲ್ಲರೂ ಕೇಳಿರುತ್ತೇವೆ. ಇದಾದ ನಂತರವಷ್ಟೇ ಲಕ್ಷ್ಮಣನಿಗೆ ಎರಡನೇ ಬದುಕು ಸಿಕ್ಕಿತು. ಆದರೆ, ಭಾರತದ ರಾಜಕೀಯದಲ್ಲಿ ಕಾಂಗ್ರೆಸ್‌ಗೆ ಬಿಕ್ಕಟ್ಟು ಹೆಚ್ಚಾದಾಗಲೆಲ್ಲಾ ಅದಕ್ಕೆ ಪರಿಹಾರ ಸಿಕ್ಕಿದ್ದು ಉತ್ತರ ಭಾರತದಿಂದಲ್ಲ. ಅದರ ಬದಲು ದಕ್ಷಿಣ ಭಾರತದಿಂದ ಕಾಂಗ್ರೆಸ್ ನ ಗಾಂಧಿ ಕುಟುಂಬಕ್ಕೆ ಹಲವು ಬಾರಿ ರಾಜಕೀಯದಲ್ಲಿ ಮರುಜೀವ ಸಿಕ್ಕಿದೆ. ಕಾಂಗ್ರೆಸ್ ಇತಿಹಾಸದಲ್ಲಿ ದಕ್ಷಿಣ ಭಾರತ ಬಹಳ ಮುಖ್ಯ ಪಾತ್ರ ವಹಿಸಿದೆ. ರಾಜಕೀಯ ಸಂಕಷ್ಟಕ್ಕೆ ಸಿಲುಕಿದ್ದ ಇಂದಿರಾ ಗಾಂಧಿಯಿಂದ ಹಿಡಿದು ಸೋನಿಯಾ ಗಾಂಧಿ, ರಾಹುಲ್ ಗಾಂಧಿಯವರೆಗೆ ಎಲ್ಲರಿಗೂ ಹೊಸ ಶಕ್ತಿ ನೀಡಿರುವ ದಕ್ಷಿಣ ಭಾರತದ ರಾಜ್ಯಗಳಾದ ಕರ್ನಾಟಕ ಮತ್ತು ಕೇರಳ ಗಾಂಧಿ



ಕುಟುಂಬದ ರಾಜಕೀಯ ಪ್ರತಿಷ್ಠೆ ಉಳಿಸುವ ಕೆಲಸ ಮಾಡಿದೆ. ಇದೀಗ ಪ್ರಿಯಾಂಕಾ ಗಾಂಧಿ ಕೂಡ ದಕ್ಷಿಣ ಭಾರತದಿಂದಲೇ ತಮ್ಮ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ.

ದಕ್ಷಿಣ ಭಾರತ ಮೊದಲಿನಿಂದಲೂ ಕಾಂಗ್ರೆಸ್ ಗೆ ಸುರಕ್ಷಿತ ಮಾರ್ಗವಾಗಿದೆ. 2 ಸ್ಥಾನಗಳಲ್ಲಿ ಸಂಸದರಾಗಿ ಸ್ಪರ್ಧಿಸಿದ್ದ ರಾಹುಲ್ ಗಾಂಧಿ ರಾಜೀನಾಮೆಯಿಂದ ವಯನಾಡ್ ಕ್ಷೇತ್ರ ತೆರವಾಗಿತ್ತು. ಈ ಹಿನ್ನಲೆಯಲ್ಲಿ ಪ್ರಿಯಾಂಕಾ ಗಾಂಧಿ ವಾದ್ರಾ, ದಕ್ಷಿಣ ಭಾರತದ ವಯನಾಡ್ ಕ್ಷೇತ್ರದಿಂದ ಚುನಾವಣಾ ಪಾದಾರ್ಪಣೆ ಮಾಡಿದ್ದಾರೆ. ವಯನಾಡ್ ಸ್ಥಾನವನ್ನು ಬಿಟ್ಟುಕೊಟ್ಟ ರಾಹುಲ್ ಗಾಂಧಿ ಅಲ್ಲಿನ ಜನರೊಂದಿಗೆ ಭಾವನಾತ್ಮಕ ಸಂಬಂಧವನ್ನು ವ್ಯಕ್ತಪಡಿಸಿದ್ದರು. ಅವರು ಕಷ್ಟದ ಸಂದರ್ಭಗಳನ್ನು ಎದುರಿಸುತ್ತಿರುವಾಗ ಅವರಿಗೆ ಶಕ್ತಿ ನೀಡಲು ವಯನಾಡಿನ ಜನರು ಶ್ರಮಿಸಿದ್ದರು ಎಂದು ಅವರು ಹೇಳಿದರು. ಆದರೆ, ಗಾಂಧಿ ಕುಟುಂಬಕ್ಕೆ ಮತ್ತು ಕಾಂಗ್ರೆಸ್‌ಗೆ ದಕ್ಷಿಣ ಭಾರತ ರಾಜಕೀಯ ಜೀವದಾನ ನೀಡಿರುವುದು ಇದೇ ಮೊದಲಲ್ಲ. ಈ ಹಿಂದೆ ಸೋನಿಯಾ ಗಾಂಧಿ, ಇಂದಿರಾ ಗಾಂಧಿ ಕೂಡ ದಕ್ಷಿಣ ಭಾರತವನ್ನೇ ತಮ್ಮ ಸ್ಪರ್ಧೆಗೆ ಆಯ್ಕೆ ಮಾಡಿಕೊಂಡಿದ್ದರು.

1977ರಲ್ಲಿ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ನ ಇತಿಹಾಸದಲ್ಲಿಯೇ ಅತ್ಯಂತ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗಿತ್ತು. ಉತ್ತರ ಭಾರತದ ರಾಜ್ಯಗಳಲ್ಲಿ ಕಾಂಗ್ರೆಸ್ ನುಚ್ಚುನೂರಾಗಿತ್ತು. ಆದರೆ ದಕ್ಷಿಣ ಭಾರತದಲ್ಲಿ ಕಾಂಗ್ರೆಸ್ ಪಕ್ಷ ತನ್ನ ಪ್ರಸಿದ್ಧಿಯನ್ನು ಉಳಿಸಿಕೊಂಡಿತ್ತು. 1977ರ ಚುನಾವಣೆಯಲ್ಲಿ ಜನತಾ ಪಕ್ಷ ಶೇ.41.32 ಮತಗಳೊಂದಿಗೆ 295 ಸ್ಥಾನಗಳನ್ನು ಗೆದ್ದುಕೊಂಡರೆ, ಕಾಂಗ್ರೆಸ್ ಶೇ.34.52 ಮತಗಳೊಂದಿಗೆ 154 ಸ್ಥಾನಗಳನ್ನು ಗೆದ್ದುಕೊಂಡಿತು. ಒಟ್ಟು 154 ಸ್ಥಾನಗಳ ಪೈಕಿ ಕೇರಳ, ಆಂಧ್ರಪ್ರದೇಶ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಿಂದ ಕಾಂಗ್ರೆಸ್ 92 ಸ್ಥಾನಗಳನ್ನು ಗೆದ್ದಿತ್ತು.

**ಇಂದಿರಾ ಗಾಂಧಿ ಅದೃಷ್ಟ ಬದಲಾಯಿಸಿದ ಚಿಕ್ಕಮಗಳೂರು:** ತುರ್ತು ಪರಿಸ್ಥಿತಿಯ ನಂತರ ಇಂದಿರಾಗಾಂಧಿ ರಾಯ್ ಬರೇಲಿ ಕ್ಷೇತ್ರದಿಂದ ಗೆಲ್ಲಲು ಕಷ್ಟವಾದಾಗ, ಕರ್ನಾಟಕದ ಚಿಕ್ಕಮಗಳೂರು ಕ್ಷೇತ್ರವು ಅವರ ರಾಜಕೀಯ ಜೀವನಕ್ಕೆ ಜೀವಸೆಲೆಯಾಗಿತ್ತು. ಸ್ವತಃ ಇಂದಿರಾ ಗಾಂಧಿಯವರು ಸಮಾಜವಾದಿ ನಾಯಕ ರಾಜ್ ನಾರಾಯಣ್ ವಿರುದ್ಧ ರಾಯ್ ಬರೇಲಿ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕದ ಚಿಕ್ಕಮಗಳೂರು ಕ್ಷೇತ್ರ ಇಂದಿರಾಗಾಂಧಿಯವರಿಗೆ ಮಾತ್ರವಲ್ಲದೆ ಕಾಂಗ್ರೆಸ್ಸಿಗೂ ರಾಜಕೀಯ ಭದ್ರಕೋಟೆಯಾಗಿ ಪರಿಣಮಿಸಿತು.

ಪುಟ 2

# 12 ಕೋಟಿ ರೂ. ಆಸ್ತಿ ಎರಡು ಎಫ್‌ಐಆರ್

## ಪ್ರಿಯಾಂಕಾ ಗಾಂಧಿ ಬಳಿ ಚಿನ್ನ, ಭೂಮಿ ಎಷ್ಟಿದೆ?

**ವಯನಾಡು:** ಪ್ರಿಯಾಂಕಾ ಗಾಂಧಿ ವಾದ್ರಾ, ಸುಮಾರು 12 ಕೋಟಿ ರೂ. ಮೌಲ್ಯದ ಆಸ್ತಿ ಹೊಂದಿದ್ದರೆ, ಅವರ ಪತಿ ರಾಬರ್ಟ್ ವಾದ್ರಾ, ಅವರು ಸುಮಾರು 66 ಕೋಟಿ ರೂ. ಮೌಲ್ಯದ ಆಸ್ತಿ ಹೊಂದಿದ್ದಾರೆ.

ವಯನಾಡು ಲೋಕಸಭಾ ಉಪಚುನಾವಣಾ ಕಣದಲ್ಲಿರುವ ಪ್ರಿಯಾಂಕಾ ಗಾಂಧಿ ಬುಧವಾರ ನಾಮಪತ್ರ ಸಲ್ಲಿಕೆ ಮಾಡಿದ್ದು ಅಫಿಡವಿತ್‌ನಲ್ಲಿ ಆಸ್ತಿ ಘೋಷಣೆ ಮಾಡಿದ್ದಾರೆ. ಈ ಮೂಲಕ ಇದೇ ಮೊದಲ ಬಾರಿಗೆ ವಾದ್ರಾ ದಂಪತಿಯ ಆಸ್ತಿ ಮೌಲ್ಯ ಬಹಿರಂಗವಾಗಿದೆ.

ಬಾಡಿಗೆ, ಬ್ಯಾಂಕ್ ಬಡ್ಡಿ ದರ, ಇತರ ಹೂಡಿಕೆಯಿಂದ 2023-24ರ ಹಣಕಾಸು ವರ್ಷದಲ್ಲಿ 46.39 ಲಕ್ಷ ರೂ. ಆದಾಯ ಬಂದಿದೆ ಎಂದು ಪ್ರಿಯಾಂಕಾ ಗಾಂಧಿ ತಿಳಿಸಿದ್ದಾರೆ. ಪ್ರಿಯಾಂಕಾ 4.24 ಕೋಟಿ ರೂ. ಚರಾಸ್ತಿ,



7.74 ಕೋಟಿ ರೂ. ಸ್ಥಿರಾಸ್ತಿಯನ್ನು ಹೊಂದಿದ್ದಾರೆ.

ಪ್ರಿಯಾಂಕಾ ಅವರ ಅತ್ಯಮೂಲ್ಯ ಆಸ್ತಿ ಶಿಮ್ಲಾ ಬಳಿಯಿರುವ ಅವರ 12,000 ಚದರ ಅಡಿ ಫಾರ್ಮ್‌ಹೌಸ್ ಆಗಿದೆ. ಅಫಿಡವಿಟ್ ಪ್ರಕಾರ ಇದರ ಪ್ರಸ್ತುತ ಮಾರುಕಟ್ಟೆ ಮೌಲ್ಯ 5.64 ಕೋಟಿ ರೂ. ಆಗಿದೆ. 8 ಲಕ್ಷ ರೂ. ಮೌಲ್ಯದ

ಪುಟ 2

# ವರುಣಾ ಜನರ ಆಶೀರ್ವಾದದಿಂದ ಎರಡು ಬಾರಿ ಸಿಎಂ ಆದೆ



**ತಾಂಡವಪುರ:** ರಾಜ್ಯದ ಜನತೆ ನನ್ನ ಜೊತೆಗೆ ಇರುವವರೆಗೂ ನಾನು ಃಏಕ-ಎಆಖ ಷಡ್ಯಂತ್ರಕ್ಕೆ ಹೆದರದಲ್ಲ. ಎಲ್ಲಾ ಷಡ್ಯಂತ್ರ ಸೋಲಿಸುತ್ತೇನೆ. ಅವರ ಆಟಗಳಿಗೆ ಜಗ್ಗಲ್ಲ, ಬಗ್ಗಲ್ಲ. ಸಾಮಾಜಿಕ ನ್ಯಾಯದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದರು.

ವರುಣಾ ವಿಧಾನಸಭಾ ಕ್ಷೇತ್ರದಲ್ಲಿ 501.81 ಕೋಟಿ ರೂ ಮೌಲ್ಯದ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ನೆರವೇರಿಸಿ ಹಲವಾರು ಯೋಜನೆಗಳ ಫಲಾನುಭವಿಗಳಿಗೆ ಸವಲತ್ತು ವಿತರಣೆ ಮಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾತನಾಡುತ್ತಾ

ವರುಣಾ ಜನರ ಆಶೀರ್ವಾದದಿಂದ ಎರಡು ಬಾರಿ ಸಿಎಂ ಆಗಿದ್ದೇನೆ. ವರುಣಾ ಕಾಂಗ್ರೆಸ್ಸಿನ ಭದ್ರ ಕೋಟೆ. ಲೋಕಸಭಾ ಚುನಾವಣೆಯಲ್ಲೂ ಬಿಜೆಪಿಗಿಂತ ಹೆಚ್ಚು ಮತ ಕೊಟ್ಟಿದ್ದೀರಿ. ನನಗೆ ವಿಶೇಷವಾಗಿ ಆಶೀರ್ವಾದ ಮಾಡಿದ್ದಕ್ಕಾಗಿ ನಾನು ಕ್ಷೇತ್ರದ ಮತದಾರರಿಗೆ ಅನಂತ ಅನಂತ ಧನ್ಯವಾದ ಅರ್ಪಿಸಿದರು.

ವರುಣಾ ಕ್ಷೇತ್ರದ ಅಭಿವೃದ್ಧಿಗೆ ನಿರಂತರವಾಗಿ ಅನುದಾನ ಕೊಡಲಾಗುತ್ತಿದೆ. ನಾನು ಉಪಕಾರ ಮಾಡುತ್ತಿಲ್ಲ. ಕ್ಷೇತ್ರದ ಪ್ರತಿನಿಧಿಯಾಗಿ ಅಭಿವೃದ್ಧಿ ಮಾಡುವ ನನ್ನ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿದ್ದೇನೆ ಎಂದರು.

ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೆಲ್ಲಾ ವರುಣ ಕ್ಷೇತ್ರ ಮಾತ್ರವಲ್ಲದೆ ರಾಜ್ಯದ ಎಲ್ಲ ಬಡವರಿಗೆ ಆರ್ಥಿಕ ಶಕ್ತಿ ತುಂಬುವ ಕಾರ್ಯಕ್ರಮಗಳನ್ನು ಜಾರಿ ಮಾಡಿದ್ದೇನೆ. ಹತ್ತು ಹಲವು ಭಾಗ್ಯಗಳನ್ನು ಕೊಡುವ ಜೊತೆಗೆ ಹಲವು ನಿಗಮಗಳ ಸಾಲ ಮನ್ನಾ ಮಾಡಿದ್ದೇನೆ. ಅಂಬೇಡ್ಕರ್ ಅವರ ಆಶಯದಂತೆ ಬಡವರಿಗೆ ಆರ್ಥಿಕ ಶಕ್ತಿ ಕೊಡುವ ಕಾರ್ಯಕ್ರಮ ರೂಪಿಸಿ ಜಾರಿ ಮಾಡಿದ್ದೇನೆ. ಎರಡನೇ ಬಾರಿ ಮುಖ್ಯಮಂತ್ರಿ ಆದಾಗಲೂ ಎಲ್ಲಾ ಜಾತಿ, ಎಲ್ಲಾ ಧರ್ಮದ ಬಡವರ, ಮಧ್ಯಮ ವರ್ಗದವರ ಬದುಕಿಗೆ ಆಸರೆ ಆಗುವ ಐದೂ ಗ್ಯಾರಂಟಿ ಯೋಜನೆಗಳನ್ನು ಜನಪರವಾಗಿ ರೂಪಿದಿ ಜಾರಿ ಮಾಡಿದ್ದೇವೆ. ಪ್ರತೀ ವರ್ಷ ಈ ಗ್ಯಾರಂಟಿಗಳ ಮೂಲಕ 56 ಸಾವಿರ ಕೋಟಿ ರೂಪಾಯಿಗಳನ್ನು ಜನರ ಖಾತೆಗೆ ನೇರವಾಗಿ ಹಾಕುತ್ತಿದ್ದೇವೆ. ಹೀಗೆ ದೇಶದಲ್ಲಿ ನುಡಿದಂತೆ ನಡೆದುಕೊಂಡಿರುವ ಪಕ್ಷ ನಿಮ್ಮ ಪಕ್ಷ. ನಿಮ್ಮದೇ ಕಾಂಗ್ರೆಸ್ ಪಕ್ಷ ಎಂದರು. ರಾಜ್ಯಕ್ಕೆ ವಿಶೇಷ ಅನುದಾನದ ಜೊತೆಗೆ ನೀರಾವರಿ ಯೋಜನೆಗೆ 5495 ಕೋಟಿ ನೀಡಲು ಶಿಫಾರಸ್ಸು ಮಾಡಿದ್ದ ನಿರ್ಮಲಾ ಸೀತಾರಾಮನ್ ಈ ಹಣವನ್ನೂ ಕೊಡಲಿಲ್ಲ. ರಾಜ್ಯದ ಫೆರಿಫೆರಲ್ ರಸ್ತೆಗೆ, ಕೆರೆಗಳ ಅಭಿವೃದ್ಧಿಗೆ 3 ಸಾವಿರ ಕೋಟಿ ಕೊಡ್ತೀವಿ ಅಂದು ಘೋಷಿಸಿದರು. ಆದರೆ ನಯಾಪೈಸೆ ಕೊಡಲಿಲ್ಲ. ಈ ಅನ್ಯಾಯಗಳ ವಿರುದ್ಧ ರಾಜ್ಯದ ಜನತೆ ಮಾತನಾಡಿದರೆ ತಪ್ಪಾ, ನಾವು ಪ್ರತಿಭಟಿಸಿದರೆ ತಪ್ಪಾ ಎಂದು ಗುಡುಗಿದರು. ನನ್ನ ಮೇಲಿನ ಸುಳ್ಳು ಆರೋಪ ಸಹಿಸ್ತೀರಾ ಎಂದು ಪ್ರಶ್ನಿಸಿದರು. ನಾನು ಮಂತ್ರಿಯಾಗಿ 45 ವರ್ಷ ಆಯ್ತು. ನನ್ನ ಮೇಲೆ ಸಣ್ಣ ಕಪ್ಪುಚುಕ್ಕೆ ಇಲ್ಲ. ಹಿಂದುಳಿದ ವರ್ಗದ ನಾನು ಎರಡು ಬಾರಿ ಸಿಎಂ ಆದೆ ಅಂತ ಬಿಜೆಪಿಗೆ ಹೊಟ್ಟೆಕಿಚ್ಚು. ಇದನ್ನು ನೀವು ಸಹಿಸ್ತೀರಾ ಎಂದು ಮರು ಪ್ರಶ್ನಿಸಿದರು. ನಾನು ಎರಡು ಬಾರಿ ಸಿಎಂ ಆಗಿ ಮೈಸೂರಲ್ಲಿ ಒಂದೂ ಮನೆ ಇಲ್ಲ. ಮರಿಸ್ವಾಮಿ ಮನೇಲಿ ಇದೀನಿ. ಕುವೆಂಪು ರಸ್ತೇಲಿ 3 ವರ್ಷದಿಂದ ಮನೆ ಕಟ್ಟುತ್ತಲೇ ಇದ್ದೀನಿ. ಇದುವರೆಗೂ ಪೂರ್ತಿ ಆಗಿಲ್ಲ. ನನಗೆ ವರ್ಚಸ್ಸು ಕೊಡುವವರು ನೀವು. ನಿಮ್ಮ ಎದುರಿಗೆ ಪ್ರಾಮಾಣಿಕವಾಗಿ ಇದ್ದೇನೆ ಎಂದರು. ನೀವೇ ನನ್ನ ಮಾಲೀಕರು. ನೀವೇ ನನ್ನ ಯಜಮಾನರು. ನಿಮ್ಮ ಆಶೀರ್ವಾದವೇ ನನಗೆ ಶ್ರೀರಕ್ಷೆ ಎಂದರು. ಬಿಜೆಪಿ-ಜೆಡಿಎಸ್ ನಾಯಕರ ಹೊಟ್ಟೆಕಿಚ್ಚಿನಿಂದ ನನ್ನ ವರ್ಚಸ್ಸು ಕಡಿಮೆ ಆಗಲ್ಲ. ನನ್ನ ವರ್ಚಸ್ಸು ವರುಣಾ ಜನತೆ, ನನ್ನ ವರ್ಚಸ್ಸು ರಾಜ್ಯದ ಜನತೆ ಎಂದರು.

# ಪಡಿತರ ಗುಣಮಟ್ಟವಿರಲಿ

**ಮಂಡ್ಯ:** ಜಿಲ್ಲೆಯಲ್ಲಿ ಪಡಿತರ ಆಹಾರಧಾನ್ಯ, ವಸತಿ ಶಾಲೆ, ಶಾಲೆಗಳಲ್ಲಿ ನೀಡುವ ಮಧ್ಯಾಹ್ನದ ಬಿಸಿ ಊಟದಲ್ಲಿ ಕಳಪೆಯಿದ್ದಲ್ಲಿ ಅಂತಹವರ ವಿರುದ್ಧಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು ಎಂದು ಆಹಾರ ಆಯೋಗದ ಅಧ್ಯಕ್ಷ ಡಾ. ಹೆಚ್‌ಕೃಷ್ಣ ತಿಳಿಸಿದರು.

ಮಂಡ್ಯ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನುಕುರಿತು ಮಾತನಾಡಿದರು. ಗೋದಾಮುಗಳಿಂದ ನಿಗದಿತ ಪ್ರಮಾಣದಲ್ಲಿ ನ್ಯಾಯಬೆಲೆ ಅಂಗಡಿಗಳಿಗೆ ಆಹಾರಧಾನ್ಯರವಾನೆಯಾಗುತ್ತಿಲ್ಲ ಹಾಗೂ ನ್ಯಾಯಬೆಲೆ ಅಂಗಡಿಗಳಲ್ಲೂ ತೂಕದಲ್ಲಿ ವ್ಯತ್ಯಾಸವಾಗುತ್ತಿದೆಎಂದುದೂರು ಅರ್ಜಿಗಳು ಬಂದಿವೆ. ಹೀಗಾಗಿ ಗೋದಾಮು, ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ, ಅವ್ಯವಹಾರಕಂಡುಬಂದರೆತಪ್ಪಿತಸ್ಥರ ವಿರುದ್ಧಕಠಿಣಕ್ರಮ ಕೈಗೊಳ್ಳುತ್ತೇವೆ ಎಂದರು.

ಗೋಧಿ ಬಳಕೆ: ಹಾಸ್ಟೆಲ್ ಗಳಲ್ಲಿ ಚಪಾತಿ ತಯಾರಿಸಿ ನೀಡಲುಕಷ್ಟಕರವಾಗುತ್ತದೆ. ಚಪಾತಿತಯಾರಿಸುವ ಯಂತ್ರ ನೀಡಲು ಚಿಂತಿಸಲಾಗುತ್ತಿದೆ. ಇದರೊಂದಿಗೆಗೋಧಿಯನ್ನು ಪಯಾಸ ಹಾಗೂ ಮುದ್ದೆಯನ್ನುತಯಾರಿಸಲು ಬಳಸಲು ಆದ್ಯತೆ ನೀಡಲಾಗುವುದು.ಗೋಧಿ ಬೇಡಿಕೆಯನ್ನು ಹೆಚ್ಚಿಸುವ ಅವಶ್ಯಕತೆ ಇದೆಎಂದರು

ಈಗಾಗಲೇ ಬೆಂಗಳೂರು ನಗರ ಮತ್ತುಗ್ರಾಮೀಣ, ತುಮಕೂರು ಸೇರಿದಂತೆ ನಾಲ್ಕು ಜಿಲ್ಲೆಗಳಲ್ಲಿ ಪ್ರವಾಸ ಮಾಡಿ, ಜನರಿಂದ ಅಹವಾಲು ಸ್ವೀಕರಿಸಿದ್ದೇವೆ. ಆಹಾರ ಮತ್ತುಆರೋಗ್ಯ,ಒಂದೇ ನಾಣ್ಯದಎರಡು ಮುಖಗಳಿದ್ದಂತೆ ಆಹಾರಉತ್ತಮವಾಗಿದ್ದರೆ ಆರೋಗ್ಯವೂ ಉತ್ತಮವಾಗಿರುತ್ತದೆ. ಕಳಪೆ ಆಹಾರ ಮತ್ತು ಕಲಬೆರಕೆಆಹಾರದ ಬಗ್ಗೆ ದೂರುಗಳು ಬಂದರೆ ನಿರ್ದಾಕ್ಷಿಣ್ಯಕ್ರಮ ಕೈಗೊಳ್ಳುತ್ತೇವೆ ಎಂದರು.

ನಾಲ್ಕು ದಿನಗಳ ಕಲ ಮಂಡ್ಯಜಿಲ್ಲೆಯಲ್ಲಿ ,ಅಂಗನವಾಡಿ, ಹಾಸ್ಟೆಲ್, ಬೇಕರಿ, ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತೇವೆ. ಆಯೋಗದ ವ್ಯಾಪ್ತಿಗೆಆಹಾರ, ಕೃಷಿ, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಸಮಾಜಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರಕಲ್ಯಾಣ, ಕಾನೂನು ಮಾಪನ ಶಾಸ್ತ್ರ ಸೇರಿದಂತೆ 14 ಇಲಾಖೆಗಳು ಬರುತ್ತವೆ. ಈ ಇಲಾಖೆಗಳಲ್ಲಿ ಯಾವುದೇ ಸಮಸ್ಯೆ, ಕುಂದುಕೊರತೆಇದ್ದರೆಆಯೋಗದ ಗಮನಕ್ಕೆ ತಂದರೆ ಪರಿಹರಿಸಲುಕ್ರಮ ಕೈಗೊಳ್ಳುತ್ತೇವೆ ಎಂದರು.

ಆದಾಯತೆರಿಗೆದಾರರು ಎಂಬ ಕಾರಣದಿಂದ ಅನೇಕ ಬಡವರ ಬಿಪಿಎಲ್ ಕಾರ್ಡ್‌ರದ್ದಾಗಿರುವುದು ಗಮನಕ್ಕೆ ಬಂದಿದೆ. ಬಡವರು ಸೌಲಭ್ಯದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಪುನರ್ ಪರಿಶೀಲಿಸಿ, ರದ್ದಾಗಿರುವ ಬಿಪಿಎಲ್ ಕಾರ್ಡ್‌ಗಳನ್ನು ಬಡವರಿಗೆಕೊಡಿಸಲುಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಆಲೆಮನೆ ಮಾಲೀಕರು ಬೆಲ್ಲವನ್ನು ಪಡಿತರದಲ್ಲಿ ಸೇರಿಸಲಯ ಮನವಿ ಸಲ್ಲಿಸಿದ್ದಾರೆ. ಬೆಲ್ಲವನ್ನು ಪಡಿತರದಲ್ಲಿ ಸೇರಿಸಿದರೆ ಬೆಳಗಾವಿ, ಮಂಡ್ಯ ಸೇರಿದಂತೆಕಬ್ಬು ಬೆಳೆಯುವ ಜಿಲ್ಲೆಗಳ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ.ಈ ಬಗ್ಗೆ ಸಂಬಂಧಪಟ್ಟ ಸಚಿವರಜತೆಚರ್ಚಿಸುತ್ತೇನೆಎಂದರು.

ಇದೇ ಸಂದರ್ಭದಲ್ಲಿಕರ್ನಾಟಕರಾಜ್ಯಆಹಾರಆಯೋಗದ ಸದಸ್ಯರುಗಳಾದ ಲಿಂಗರಾಜುಕೋಟೆ, ಸುಮಂತ್‌ರಾವ್, ಮಾರುತಿ ಎಂ, ದೊಡ್ಡಲಿಂಗಣ್ಣ, ರೋಹಿಣಿ ಪ್ರಿಯ, ಕೆ.ಎಸ್ ವಿಜಯಲಕ್ಷ್ಮಿ ಅವರುಗಳು ಸೇರಿದಂತೆಇನ್ನಿತರರು ಉಪಸ್ಥಿತರಿದ್ದರು.



## ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ ಪದ್ಮಾವತಿ ಸಲಹೆ

# ಸೇವಾ ಮನೋಭಾವ ಇರಲಿ



**ಮಂಡ್ಯ:** ಪ್ರತಿಯೊಬ್ಬ ಮಹಿಳೆಯು ಶಕ್ತಿಯುತರಾಗಿ ಸ್ವಾವಲಂಬಿಯಾಗಬೇಕು. ಸರ್ಕಾರಿ ಅಧಿಕಾರಿಗಳು ಮಹಿಳೆಯರ ಸಬಲೀಕರಣಕ್ಕಾಗಿ ಇರುವ ಯೋಜನೆಗಳನ್ನು ಮಹಿಳೆಯರಿಗೆ ಪ್ರಾಮಾಣಿಕವಾಗಿ ತಲುಪಿಸುವ ಕೆಲಸ ಮಾಡಬೇಕು. ಯೋಜನೆಗಳನ್ನು ಪಡೆಯಲು ಮಹಿಳೆಯರನ್ನು ಅಲೆದಾಡಿಸಬೇಡಿ. ಮಹಿಳೆಯರಿಗೆ ಯೋಜನೆಗಳ ಬಗ್ಗೆ ಸ್ಪಷ್ಟ ಮಾಹಿತಿ ನೀಡಿ ಅಧಿಕಾರಿಗಳು ಸೇವಾ ಮನೋಭಾವದಿಂದ ಕಾರ್ಯ ನಿರ್ವಹಿಸಿ ಎಂದು ಮಹಿಳಾ ಅಭಿವೃದ್ಧಿ ನಿಗಮದಅಧ್ಯಕ್ಷೆ ಜಿ ಪದ್ಮಾವತಿ ತಿಳಿಸಿದರು.

ಜಿಲ್ಲಾಆರೋಗ್ಯ ಮತ್ತುಕುಟುಂಬ ಕಲ್ಯಾಣಇಲಾಖೆಯ ಡಾ.ಜೆ.ಎಲ್ ಜವರೇಗೌಡ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕರ್ನಾಟಕರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರುಗಳ ಸಂಯುಕ್ತಾಶ್ರಯದಲ್ಲಿ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನ ಸಭೆ ನಡೆಸಿ ಮಾತನಾಡಿದರು.

ಬೆಂಗಳೂರು ಮಹಿಳಾ ಅಭಿವೃದ್ಧಿ ನಿಗಮವು ದೇವದಾಸಿಯರಿಗೆ ಪಿಂಚಣಿ, ಹೆಚ್ ಐ ವಿ ಸೋಂಕಿತರಿಗೆ ಸಹಾಯಧನ, ಧಮನಿತ ಮಹಿಳೆಯರಿಗೆ ಹಾಗೂ ವಿಕಲಚೇತನ ಮಹಿಳೆಯರಿಗೆ ಸಾಕಷ್ಟುರೀತಿಯ ಸಹಾಯಧನವನ್ನು ನೀಡುತ್ತಿದೆ. ಕಳೆದ ವರ್ಷಉದ್ಯೋಗಿನಿ ಯೋಜನೆಯಡಿಯಲ್ಲಿ 83,000 ಮಹಿಳೆಯರು ಅರ್ಜಿಗಳನ್ನು ಸಲ್ಲಿಸಿದ್ದು, ಅನುದಾನಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.ಉದ್ಯೋಗಿನಿ ಯೋಜನೆಯಡಿಯಲ್ಲಿ ಗುರಿ ಜಾಸ್ತಿ ಮಾಡುವಂತೆ ಈಗಾಗಲೇ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆಎಂದರು.

ಸಾಕಷ್ಟು ಬ್ಯಾಂಕ್ ಗಳಲ್ಲಿ ಸಾರ್ವಜನಿಕರಿಗೆ ಅನೇಕ ತೊಂದರೆಗಳು ಉಂಟಾಗುವುದು ನಮ್ಮ ಗಮನಕ್ಕೆ ಬಂದಿದೆ.ಜನರು ಬ್ಯಾಂಕ್ ನಲ್ಲಿ ಸಾಲ ಪಡೆಯಲು ಮುಂದದಾಗ ಅನೇಕ ಕಷ್ಟಗಳನ್ನು ಎದುರಿಸುತ್ತಿದ್ದು, ಬ್ಯಾಂಕ್‌ಅವರು ಮಧ್ಯಮ ವರ್ಗದ ಹೆಣ್ಣು ಮಕ್ಕಳನ್ನು ಅಲೆದಾಡುವಂತೆ ಮಾಡುತ್ತಿದ್ದಾರೆ. ಬ್ಯಾಂಕ್ ನ ಈ ವ್ಯವಸ್ಥೆ ಬದಲಾಗಬೇಕು.ಮಹಿಳೆಯರ ಅಲೆದಾಟ ನೋಡಲಾಗದಕಾರಣದಿಂದ ಬೆಂಗಳೂರಿನಲ್ಲಿ ಮಹಿಳಾ ಕೋ ಆಪರೇಟಿವ್ ಬ್ಯಾಂಕ್‌ಅನ್ನು ಪ್ರಾರಂಭಿಸಲಾಗಿದೆಎಂದರು.

ಮಹಿಳೆಯರ ಸಬಲೀಕರಣಕ್ಕಾಗಿ ಕಿರುಸಾಲ ಯೋಜನೆ, ಮಾರುಕಟ್ಟೆ ನೆರವು ಹಾಗೂ ಸ್ತ್ರೀಶಕ್ತಿ ಸಂಘಗಳ ಒಕ್ಕೂಟಕ್ಕೆ ಕೈಸಾಲ ನೀಡುವಂತೆಒಟ್ಟು 3 ಮನವಿಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಎಂದರು.

ರಾಜ್ಯದಲ್ಲಿ ಆಸೀಡ್ ದಾಳಿಗೆ ಒಳಗಾದ ಸಾಕಷ್ಟು ಮಹಿಳೆಯರಿಗೆ ಕರ್ನಾಟಕರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ 5 ಲಕ್ಷ ಸಾಲವನ್ನು ಫ್ಯಾನ್ಸಿ ಸ್ಟೋರ್, ಪ್ರಾವಿಜನ್ ಸ್ಟೋರ್, ಬಳೆ ಅಂಗಡಿ ಹಾಗೂ ಇನ್ನಿತರೆ ವ್ಯಾಪಾರಕ್ಕಾಗಿ ಪಡೆಯಲು ಅವಕಾಶ ಕಲ್ಪಿಸಿದ್ದೇವೆ. ಮಹಿಳೆಯರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದರು ಎಲ್ಲಾ ರಂಗದಲ್ಲಿಯೂ ಮುನ್ನುಗ್ಗಿತನ್ನಛಾಪನ್ನು ಮೂಡಿಸಿದ್ದಾರೆ. ಮಂಡ್ಯಜಿಲ್ಲೆಯಲ್ಲಿ ಹೆಣ್ಣು ಮಕ್ಕಳು ಸ್ವಾವಲಂಬಿಗಳಾಗಿದ್ದಾರೆ. ಜೊತೆಗೆಜಿಲ್ಲೆಯ ಆಡಳಿತವು ಉತ್ತಮರೀತಿಯಲ್ಲಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾಜಮೂರ್ತಿಅವರು ಮಾತನಾಡಿ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಸುಮಾರು 42 ಯೋಜನೆಗಳನ್ನು ಅನು?ಾನಗೊಳಿಸಲಾಗುತ್ತಿದೆ. ಇದರಉದ್ದೇಶವೆಂದರೆ ಸಮಾಜದಲ್ಲಿ ಮಹಿಳೆಯರನ್ನು ಸಮಾನವಾಗಿಕಾಣುವುದಾಗಿದೆ. ಹೆಣ್ಣು ಮಕ್ಕಳ ಮೇಲೆ ಆಗುವಂತಹದೌರ್ಜನ್ಯ, ದಬ್ಬಾಳಿಕೆ, ಶೋಷಣೆ, ಬಾಲ್ಯ ವಿವಾಹ, ಅತ್ಯಾಚಾರ, ವರದಕ್ಷಿಣೆಇನ್ನಿತರೆ ಅಂಶಗಳಿಂದ ಮಹಿಳೆಯರನ್ನು ರಕ್ಷಣೆ ಮಾಡಬೇಕು ಎಂದರು.

ಉದ್ಯೋಗಿನಿ ಯೋಜನೆ, ಧನಶ್ರೀ ಯೋಜನೆ, ಚೇತನಾಯೋಜನೆ, ಲಿಂಗತ್ವಅಲ್ಪಸಂಖ್ಯಾತರ ಪುನರ್ವಸತಿಯೋಜನೆ, ಮಹಿಳಾ ತರಬೇತಿಯೋಜನೆ ಸೇರಿದಂತೆ ಸರ್ಕಾರವು ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ಉದ್ಯೋಗಿನಿ ಯೋಜನೆಯಡಿಯಲ್ಲಿ 3,334 ಫಲಾನುಭವಿಗಳಿಗೆ 5,24,44,380ರೂ ಸಹಾಯಧನ ಬಿಡುಗಡೆಯಾಗಿದೆ. ಕಿರುಸಾಲ ಯೋಜನೆಯಡಿಯಲ್ಲಿ 94 ಫಲಾನುಭವಿಗಳಿಗೆ 1,71,85,000 ರೂ, ಸಮೃದ್ಧಿ ಯೋಜನೆ - 1227 ಫಲಾನುಭವಿಗಳಿಗೆ 1,22,70000 ರೂ, ಲಿಂಗತ್ವಅಲ್ಪಸಂಖ್ಯಾತರ ಪುನರ್ವಸತಿಯೋಜನೆಯಡಿಯಲ್ಲಿ - 163 ಫಲಾನುಭವಿಗಳಿಗೆ 53,03,880 ರೂ, ಧನಶ್ರೀ ಯೋಜನೆಅಡಿಯಲ್ಲಿ 158 ಫಲಾನುಭವಿಗಳಿಗೆ 71,33,700 ರೂ ಹಾಗೂ ಚೇತನಯೋಜನೆಅಡಿಯಲ್ಲಿ 93 ಫಲಾನುಭವಿಗಳಿಗೆ 42,36,100 ರೂ ಸಹಾಯಧನವನ್ನು ಬಿಡುಗಡೆಗೊಳಿಸಲಾಗಿದೆ ಎಂದು ತಿಳಿಸಿದರು.

## ವಿವಿಧ ಕ್ಷೇತ್ರಗಳ ಸಾಧಕರಿಗೆ ಕನ್ನಡ ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿ : ಅರ್ಜಿ

**ಚಾಮರಾಜನಗರ:** ಕನ್ನಡ ರಾಜ್ಯೋತ್ಸವ-2024ರ ಅಂಗವಾಗಿ ಜಿಲ್ಲಾ ವ್ಯಾಪ್ತಿಗೆ ಒಳಪಡುವ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ನೀಡಲಾಗುವ ಜಿಲ್ಲಾಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಜಿಲ್ಲಾಡಳಿತವು ಅರ್ಜಿ ಆಹ್ವಾನಿಸಿದೆ. ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಚಾಮರಾಜನಗರ ಜಿಲ್ಲೆಯ ಸಾಧಕರನ್ನು ಗುರುತಿಸಿ ನವೆಂಬರ್ 1ರಂದು ನಡೆಯುವ ಜಿಲ್ಲಾ ಕನ್ನಡ ರಾಜ್ಯೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಜಾನಪದ ಕಲೆ, ಸಾಹಿತ್ಯ, ಜಾನಪದ ವೈದ್ಯ, ಕನ್ನಡ ಸಾಹಿತ್ಯ ಸೇವೆ, ಕನ್ನಡಪರ ಹೋರಾಟ, ವೈದ್ಯಕೀಯ ಸೇವೆ, ಸೈನಿಕ ಸೇವೆ, ಸಿನಿಮಾ, ಸಂಗೀತ, ನಾಟಕ, ಗಾಯನ, ಗಮಕ, ಕನ್ನಡ ಭಾಷೆ ಮತ್ತು ಲಿಪಿ ಬಳಕೆ, ಗಡಿನಾಡ ಸೇವೆ, ಮಕ್ಕಳ ಸಾಹಸ ಮತ್ತು ರಕ್ಷಣೆ, ಸಮಾಜಸೇವೆ, ಪತ್ರಿಕೋದ್ಯಮ, ಮಹಿಳಾ ಸಬಲೀಕರಣ, ಇತರ ಅರ್ಹ ಸೇವೆ ಸಲ್ಲಿಸಿರುವ ಸಾಧಕರಿಗೆ ಜಿಲ್ಲಾಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಸನ್ಮಾನಿಸಲಾಗುತ್ತದೆ. ಆಸಕ್ತರು ತಮ್ಮ ಹೆಸರು, ವಿಳಾಸ (ಆಧಾರ್ ಕಾರ್ಡ್ ಲಗತ್ತಿಸಬೇಕು), ಮೊಬೈಲ್ ಸಂಖ್ಯೆ, ಜನ್ಮ ದಿನಾಂಕ, ಪಡೆದಿರುವ ಪ್ರಶಸ್ತಿಗಳ ವಿವರ, ತೊಡಗಿಸಿಕೊಂಡಿರುವ ಸೇವಾ ವಿವರಗಳನ್ನೊಳಗೊಂಡ ಅರ್ಜಿಯನ್ನು ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕೊಠಡಿ ಸಂಖ್ಯೆ: 218, ಎರಡನೇ ಮಹಡಿ, ಜಿಲ್ಲಾಡಳಿತ ಭವನ, ಚಾಮರಾಜನಗರ ಇವರಿಗೆ ಖುದ್ದಾಗಿ ಅಥವಾ ಇ-ಮೇಲ್ ವಿಳಾಸ ddnc.pue@gmail.com ಗೆ ಅಕ್ಟೋಬರ್ 27ರೊಳಗೆ ತಲುಪಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹರ್ಷಿ ವಾಲ್ಮೀಕಿ ಆದರ್ಶ ಅಳವಡಿಸಿಕೊಳ್ಳಿ



**ಮೈಸೂರು:** ತಾಲ್ಲೂಕಿನ ಕೆಂಚಲಗೂಡುವಿನ ಶ್ರೀ ಮಹರ್ಷಿ ವಾಲ್ಮೀಕಿ ನಾಯಕ ಜನಾಂಗದ ಕ್ಷೇಮಾಭಿವೃದ್ಧಿ ಸಂಘದಿಂದ ಗ್ರಾಮದಲ್ಲಿ ಇತ್ತೀಚೆಗೆ ಶ್ರೀ ವಾಲ್ಮೀಕಿ ಜಯಂತಿ ಆಯೋಜಿಸಲಾಗಿತ್ತು. ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷರಾದ ದ್ಯಾವಪ್ಪ ನಾಯಕ ಅವರು ಮಾತನಾಡಿ, ದೇಶಕ್ಕೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನ ನೀಡಿದರೆ, ಜಗತ್ತಿಗೆ ಮೊಟ್ಟ ಮೊದಲ ಸಂವಿಧಾನ ನೀಡಿದ್ದು ಮಹರ್ಷಿ ವಾಲ್ಮೀಕಿ. ಈ ಇಬ್ಬರು ಮಹಾನ್ ನಾಯಕರು ಜಗತ್ತಿಗೆ ಬೆಳಕಾಗಿರುವುದು ನಮ್ಮ ದೇಶದ ಹೆಮ್ಮೆ ಎಂದು ಅಭಿಪ್ರಾಯಿಸಿದರು.

ಪ್ರತಿಯೊಬ್ಬರಿಗೂ ಆತ್ಮ ಚರಿತ್ರೆ ಎನ್ನುವುದು ಇರುತ್ತದೆ. ಆದರೆ, ನಮ್ಮ ದೇಶದ ಆತ್ಮ ಚರಿತ್ರೆ ಎಂದರೆ ಅದು ವಾಲ್ಮೀಕಿ ಬರೆದ ಮಹಾನ್ ಕಾವ್ಯ ರಾಮಾಯಣ. ಬುದ್ಧ, ಬಸವ, ಅಂಬೇಡ್ಕರ್, ಕನಕದಾಸ, ಕೆಂಪೇಗೌಡ, ಬಾಬು ಜಗಜೀವನ ರಾಮ್ ಇವರೆಲ್ಲರೂ ಯಾವುದೇ ಜಾತಿಗೆ ಸೀಮಿತವಾಗದೇ ಜಗತ್ತಿಗೆ ಬೆಳಕು ನೀಡುವ ಜ್ಯೋತಿಯಾಗಿದ್ದಾರೆ. ಆದ್ದರಿಂದ ಈ ಮಹಾನ್ ನಾಯಕರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ವಾಲ್ಮೀಕಿ ರಾಮಾಯಣವನ್ನು ಜಗತ್ತಿನ ಹಲವಾರು ದೇಶಗಳು ತಮ್ಮ ದೇಶದ ಭಾಷೆಗಳಿಗೆ ತರ್ಜುಮೆ ಮಾಡಿಕೊಂಡು ಅಭಿವೃದ್ಧಿ ಹೊಂದುತ್ತಿವೆ. ಅದರಲ್ಲಿ ಜಪಾನ್, ಜರ್ಮನ್, ಇಟಲಿ ಇನ್ನೂ ಮುಂತಾದ ದೇಶಗಳು ಒಳಗೊಂಡಿವೆ ಎಂದರು. ವೇದಿಕೆಯಲ್ಲಿ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಪ್ರಭಾಕರ ಹುಣಸೂರು, ನಾಯಕರ ಉದ್ಬೂರು ಎಂ.ಸೋಮಣ್ಣ, ಪ್ರಮುಖರಾದ ಕೋಟೆ ಹುಂಡಿ ಮಹದೇವ, ಧನಗಳ್ಳಿ ನಿಂಗರಾಜು, ಜಯಣ್ಣ, ಸಾಲುಂಡಿ ಭಾಸ್ಕರ, ಮಂಚನಾಯಕ, ಜಯಪುರ ಜವರನಾಯಕ, ಪ್ರಿನ್ಸ್, ಸಿದ್ದನಾಯಕ, ನಂದೀಶ್, ಸಿದ್ದರಾಜು ಮಹೇಶ್, ಬಸಪ್ಪ ನಾಯಕ, ಬೀರೇಶ್, ಅರ್ಜುನ ಇದ್ದರು.

## ಅಫ್‌ಲೈನ್ ಪ್ರವೇಶಕ್ಕಾಗಿ ಅರ್ಜಿ

**ಮಂಡ್ಯ:** ಶ್ರೀರಂಗಪಟ್ಟಣ ಸರ್ಕಾರಿಕೈಗಾರಿಕಾತರಬೇತಿ ಸಂಸ್ಥೆಯಆಗಸ್ಟ್ 2024 ನೇ ಸಾಲಿಗೆ ಪ್ರವೇಶಕ್ಕಾಗಿ ಬಾಕಿ ಉಳಿದಿರುವ ಸ್ಥಾನಗಳನ್ನು ಪಟ್ಟಿ ಮಾಡಲಾಗಿದ್ದು, ಖಾಲಿ ಉಳಿದಿರುವ 26ಸ್ಥಾನಗಳಿಗೆ ಎಸ್‌ಎಸ್‌ಎಲ್ ಸಿ ಉತ್ತೀರ್ಣರಾದ ಅಭ್ಯರ್ಥಿಗಳು ಪ್ರವೇಶಕ್ಕಾಗಿಆಫ್ ಲೈನ್ ಮುಖಾಂತರ ಅರ್ಜಿಗಳನ್ನು ಅಕ್ಟೋಬರ್ 31 ರವರೆಗೆಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿದೂ. ಸಂ: 08236-295224 ನ್ನು ಸಂಪರ್ಕಿಸಬಹುದುಎಂದು ಶ್ರೀರಂಗಪಟ್ಟಣ ಸರ್ಕಾರಿಕೈಗಾರಿಕಾತರಬೇತಿ ಸಂಸ್ಥೆಯಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನ.1ರಂದು ಕನ್ನಡ ರಾಜ್ಯೋತ್ಸವ ಸಮಾರಂಭ

**ಮೈಸೂರು:** ಜಿಲ್ಲಾಡಳಿತದ ವತಿಯಿಂದ ನವೆಂಬರ್ 1 ರಂದು ನಗರದ ಓವೆಲ್ ಮೈದಾನದಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಹಮ್ಮಿಕೊಂಡಿದ್ದು, ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ ಮಹದೇವಪ್ಪ ಅವರು ಧ್ವಜಾರೋಹಣ ನೆರವೇರಿಸಿ, ಭುವನೇಶ್ವರಿ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಕನ್ನಡ ರಾಜ್ಯೋತ್ಸವ ಸಂದೇಶವನ್ನು ನೀಡುವರು ಎಂದು ಅಪರ ಜಿಲ್ಲಾಧಿಕಾರಿಗಳಾದ ಡಾ.ಪಿ.ಶಿವರಾಜ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಾ ಜಿ .ವಿ .ವೆಂಕಟಶೆಟ್ಟಿ ನಿಧನ

**ಚಾಮರಾಜನಗರ:** ಬಡವರ ಡಾಕ್ಟರೆಂದೇ ಜನಪ್ರಿಯವಾಗಿದ್ದ ಡಾ ಜಿ .ವಿ .ವೆಂಕಟಶೆಟ್ಟಿ (97) (ಯಳಂದೂರು ಡಾಕ್ಟರ್) ನಿಧನರಾದರು. ಚಾಮರಾಜನಗರದಲ್ಲಿ 55 ವರ್ಷಗಳ ಸುದೀರ್ಘಕಾಲ ವೈದ್ಯಸೇವೆಯಲ್ಲಿ ಲಕ್ಷಾಂತರ ಬಡವರಿಗೆ ದೇವರಾಗಿ ಕಾಣಿಸಿಕೊಂಡಿದ್ದ ಡಾ ಜಿ ವಿ ವೆಂಕಟಶೆಟ್ಟಿ ಬಹು ಜನಪ್ರಿಯ ರಾಗಿದ್ದರು. ಆಫ್ರಿಕಾದ



ಗಾನ ,ಕರ್ನಾಟಕದ ಕೆಜಿಎಫ್, ತಮಿಳುನಾಡಿನ ವೆಲ್ಲೂರು ಗಳಲ್ಲಿ ವೈದ್ಯ ವೃತ್ತಿ ನಿರ್ವಹಿಸಿ ಸೇವೆ ಸಲ್ಲಿಸಿದ್ದರು. ಹಣದ ಸಮಸ್ಯೆಯಲ್ಲಿದ್ದ ನೂರಾರು ರೋಗಿಗಳಿಗೆ ಉಚಿತವಾಗಿ ಸೇವೆ ಸಲ್ಲಿಸಿ ಜೀವ ಉಳಿಸಿದ ಮಹಾತ್ಮರು . ಇವರ ನಿಧನಕ್ಕೆ ಹಲವಾರು ಸಂಘ ಸಂಸ್ಥೆಗಳು , ನಾಗರಿಕರು ,ಕೆ ರಾಷ್ಟ್ರ ಯುವ ಪ್ರಶಸ್ತಿ ಪುರಸ್ಕೃತ ಸುರೇಶ್ ಎನ್ ಋಗ್ವೇದಿ, ಸಮಾಜ ಸೇವಕರಾದ ಗುರುನಾಥ್, ಶ್ರೀನಿವಾಸ್ ಶೆಟ್ಟಿ , ರಾಮಣ್ಣ ಸಂತಾಪ ವ್ಯಕ್ತಪಡಿಸಿದ್ದಾರೆ.,ಎರಡು ಹೆಣ್ಣು ಮಕ್ಕಳು ಹಾಗು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಪತ್ನಿ ಕಳೆದ ವರ್ಷ ನಿಧನ ಹೊಂದಿದ್ದರು.

## ಸ್ನಾತಕ, ಸ್ನಾತಕೋತ್ತರ ಕೋರ್ಸ್‌ಗಳ ಸಂಯೋಜನೆಗೆ ಅರ್ಜಿ ಆಹ್ವಾನ

**ಚಾಮರಾಜನಗರ:** ಚಾಮರಾಜನಗರ ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು 2025-26ನೇ ಶೈಕ್ಷಣಿಕ ಸಾಲಿಗೆ ಆಯಾ ಕಾಲೇಜುಗಳ ಸ್ನಾತಕ, ಸ್ನಾತಕೋತ್ತರ ಕೋರ್ಸುಗಳ ತಾತ್ಕಾಲಿಕ ಸಂಯೋಜನೆ ನವೀಕರಿಸಲು, ಹೊಸ ಕೋರ್ಸು, ವಿ?ಯ, ಭಾ?ಗಳು ಹಾಗೂ ವಿದ್ಯಾರ್ಥಿಗಳ ಪ್ರಮಾಣವನ್ನು ವಿಸ್ತರಿಸಲು ಈಗಿರುವ ತಾತ್ಕಾಲಿಕ ಸಂಯೋಜನೆಗೆ ಶಾಶ್ವತ ಸಂಯೋಜನೆ ಮಂಜೂರು ಮಾಡಲು ಮತ್ತು ಹೊಸ ಕಾಲೇಜು ಆರಂಭಿಸಲು ಹಾಗೂ ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಕೋರಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ವೆಬ್‌ಸೈಟ್ https://UUCMSkarnataka.gov.in ಮೂಲಕ ನವೆಂಬರ್ 7ರವರೆಗೆ ದಂಡ ರಹಿತವಾಗಿ ಅರ್ಜಿ ಸಲ್ಲಿಸಬಹುದು. ನವೆಂಬರ್ 8 ರಿಂದ 11ರೊಳಗೆ 22,687 ರೂ. ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬಹುದು. ಯು.ಯು.ಸಿ.ಎಂ.ಎಸ್ (ಗಗಅಒಖ) ತಂತ್ರಾಂಶದಲ್ಲಿ ನಮೂದಿಸಿದ ಎಲ್ಲಾ ಮಾಹಿತಿಯನ್ನು ಡೌನ್‌ಲೋಡ್ ಮಾಡಿ 3 ಪ್ರತಿಗಳನ್ನು ಸಂಯೋಜನಾ ವಿಭಾಗಕ್ಕೆ ನವೆಂಬರ್ 15ರೊಳಗೆ ಸಲ್ಲಿಸಬೇಕು. ಸ್ಥಾನಿಕ ವಿಚಾರಣಾ ಸಮಿತಿಯು ಮಹಾವಿದ್ಯಾಲಯಕ್ಕೆ ನವೆಂಬರ್ 20ರಿಂದ 25 ರವರೆಗೆ ರಜಾ ದಿನ ಸಹಿತವಾಗಿ ಭೇಟಿ ನೀಡುವ ಅವಧಿಯನ್ನು ನಿಗದಿಪಡಿಸಲಾಗಿದೆ. ಅರ್ಜಿಯನ್ನು ಕುಲಸಚಿವರು, ಚಾಮರಾಜನಗರ ವಿಶ್ವವಿದ್ಯಾನಿಲಯ, ಚಾಮರಾಜನಗರ-571313 ಇವರ ಹೆಸರಿನಲ್ಲಿ ಪಡೆದು ಹಾರ್ಡ್ ಕಾಪಿಯನ್ನು ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಚಾಮರಾಜನಗರ, ಸುವರ್ಣಗಂಗೋತ್ರಿ, ಇವರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿ ಹಾಗೂ ನಿಗದಿತ ಅರ್ಜಿ ಸಲ್ಲಿಸಬೇಕಾದ ಸಂಯೋಜನಾ ಶುಲ್ಕದ ವಿವರ, ಸಂಯೋಜನೆಗೆ ಸಂಬಂಧಪಟ್ಟ ನಿಯಮಗಳನ್ನು ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರ ಕಚೇರಿ, ಚಾಮರಾಜನಗರ ವಿಶ್ವವಿದ್ಯಾನಿಲಯ, ಸುವರ್ಣಗಂಗೋತ್ರಿ, ಚಾಮರಾಜನಗರ-571313 (ದೂ.ಸಂ, ಇ-ಮೇಲ್ ವಿಳಾಸ) ಇವರಿಂದ ಪಡೆದುಕೊಳ್ಳಬಹುದಾಗಿದೆ.

## ನ.1ರೊಳಗೆ ನಾಮಫಲಕಗಳಲ್ಲಿ ಶೇ. 60 ಕನ್ನಡ ಭಾಷೆ ಪ್ರದರ್ಶನ ಕಡ್ಡಾಯ

**ಚಾಮರಾಜನಗರ:** ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ-2024ರ ಅನ್ವಯ ಜಿಲ್ಲಾ ವ್ಯಾಪ್ತಿಯಲ್ಲಿ ಪರವಾನಗಿ (ಅನುಮತಿ) ಪಡೆದು ನಡೆಸುವ ಸಂಸ್ಥೆಗಳು, ವಾಣಿಜ್ಯ ಸಂಸ್ಥೆಗಳು, ಕೈಗಾರಿಕೆಗಳು, ಶಿಕ್ಷಣ ಸಂಸ್ಥೆಗಳು, ಎಲ್ಲ ರೀತಿಯ ಸಾರ್ವಜನಿಕ ಹಾಗೂ ಖಾಸಗಿ ಸಂಘ ಸಂಸ್ಥೆಗಳು ನಾಮಫಲಕಗಳಲ್ಲಿನ ಮೇಲ್ಭಾಗದಲ್ಲಿ ಶೇ. 60ರಷ್ಟು ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕೆಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ತಿಳಿಸಿದ್ದಾರೆ. ನಾಮಫಲಕಗಳಲ್ಲಿ ಶೇ. 60ರಷ್ಟು ಕನ್ನಡ ಭಾಷೆ ಬಳಕೆ ಮಾಡದೇ ಇದ್ದಲ್ಲಿ ಗಂಭೀರವಾಗಿ ಪರಿಗಣಿಸಿ ಸಂಬಂಧಪಟ್ಟ ಕೈಗಾರಿಕೆ, ಅಂಗಡಿ ಮುಂಗಟ್ಟು, ವಾಣಿಜ್ಯ ಸಂಸ್ಥೆ, ಶಿಕ್ಷಣ ಸಂಸ್ಥೆ ಸೇರಿದಂತೆ ಇನ್ನಿತರೆ ಉದ್ಯಮ ಸಂಘ ಸಂಸ್ಥೆಗಳ ಪರವಾನಗಿಯನ್ನು ರದ್ದುಪಡಿಸಲಾಗುತ್ತದೆ. ನವೆಂಬರ್ 1 ರೊಳಗಾಗಿ ನಾಮಫಲಕಗಳ ಮೇಲ್ಭಾಗದಲ್ಲಿ ಶೇ. 60 ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು.

# ಧೈರ್ಯ, ಸ್ಥೈರ್ಯ, ದೇಶ ಪ್ರೇಮ ಬೆಳೆಸಿಕೊಳ್ಳಬೇಕು



**ಬೆಂಗಳೂರು:** ಯುವ ಪೀಳಿಗೆ ಧೈರ್ಯ, ಸ್ಥೈರ್ಯ, ದೇಶ ಪ್ರೇಮ ಜೊತೆಗೆ ಇತಿಹಾಸದ ಜ್ಞಾನ ಬೆಳೆಸಿಕೊಳ್ಳಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್. ತಂಗಡಗಿ ಅವರು ತಿಳಿಸಿದರು.

ಇಂದು ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಸಮಾರಂಭದಲ್ಲಿ ಮಾತನಾಡಿದ ಸಚಿವರು ಕಿತ್ತೂರು ವಿಜಯವಾಗಿ 200 ವರ್ಷವಾಗಿದೆ. ನಾಡಪ್ರೇಮ, ದೇಶಪ್ರೇಮ, ಸ್ವಾಭಿಮಾನಕ್ಕೆ ಮತ್ತೊಂದು ಹೆಸರು ಕಿತ್ತೂರುರಾಣಿ ಚೆನ್ನಮ್ಮ. ಬ್ರಿಟಿಷರ ವಿರುದ್ಧ ನೇರ ಸವಾಲೊಡ್ಡಿದ ದಿಟ್ಟ ಮಹಿಳೆ. ಸಂಗೊಳ್ಳಿ ರಾಯಣ್ಣ, ಒಡ್ಡರ ಯಲ್ಲಪ್ಪ ಕೂಡ ರಾಣಿ ಚೆನ್ನಮ್ಮ ಸೈನ್ಯದಲ್ಲಿದ್ದರು. ಅವರ ಸೈನ್ಯದಲ್ಲಿ ಮೇಧಾವಿಗಳು, ಜಾಣತನ ಇರುವ ಸೈನಿಕರಿದ್ದರು. ಇದರಿಂದ ರಾಣಿ ಚೆನ್ನಮ್ಮ ಅವರಿಗೆ ಬ್ರಿಟಿಷರ ವಿರುದ್ಧ ಹೋರಾಡಲು ಸಹಾಯವಾಯಿತು. ಹೆಣ್ಣು ಮಕ್ಕಳು ಅಡಿಗೆ ಮನೆಗೆ ಮಾತ್ರ ಸೀಮಿತವಾಗಿದ್ದ ಕಾಲದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಅವರು ಬ್ರಿಟಿಷರ ವಿರುದ್ಧ ಹೋರಾಡಿದ ವೀರ ಮಹಿಳೆ ಎಂದು ತಿಳಿಸಿದರು. ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಸಮಾರೋಪ ಸಮಾರಂಭವನ್ನು ಅಕ್ಟೋಬರ್ 25ರಂದು ಕಿತ್ತೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಗವಹಿಸಲಿದ್ದಾರೆ. ಮುಖ್ಯಮಂತ್ರಿಗಳು ಎಲ್ಲಾ ಜಯಂತಿಗಳಲ್ಲೂ ಭಾಗವಹಿಸುತ್ತಿರುವುದು ಸಂತಸದ ವಿಷಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಶ್ರೀ ಬೇಲಿ ಮಠದ ಶ್ರೀ ಶ್ರೀ ಶ್ರೀ ಶಿವರುದ್ರ ಮಹಾಸ್ವಾಮಿಗಳು ಮಾತನಾಡಿ, ಭಾರತದ ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿಚುಕ್ಕೆಯಾಗಿ ಐತಿಹಾಸಿಕ ಪುಟಗಳಲ್ಲಿ ರಾರಾಜಿಸುತ್ತಿರುವ ವೀರವನಿತೆ ಕಿತ್ತೂರು ರಾಣಿ ಚೆನ್ನಮ್ಮ. ಅವರು ಸ್ವಾಭಿಮಾನದ ಶಕ್ತಿ. ಇತರರಿಗೆ ಸ್ಫೂರ್ತಿದಾಯಕರಾಗಿದ್ದರು ಎಂದು ತಿಳಿಸಿದರು.

ಬೆಂಗಳೂರು ನಗರ ಜಿಲ್ಲೆಯ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಕೆ.ವಿ. ನಾಗರಾಜಮೂರ್ತಿ ಅವರು ಮಾತನಾಡಿ, ನಮ್ಮ ನಾಡಿನ ಯೋಧರ ಶೌರ್ಯ, ದೇಶ ಭಕ್ತಿ ಆದರ್ಶವನ್ನು ಮೈಗೂಡಿಸಿಕೊಳ್ಳಬೇಕೆಂದರು.

ಕಾರ್ಯಕ್ರಮದಲ್ಲಿ ವೀರಶೈವ-ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಹುನಗುಂದ ವಿಧಾನ ಸಭಾಕ್ಷೇತ್ರದ ಶಾಸಕ ವಿಜಯಾನಂದ ಕಾಶಪ್ಪನವರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ, ಮಾಜಿ ಸಚಿವರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಾದ ಡಾ.ಎಂ.ಎನ್. ಅಜಯ್ ನಾಗಭೂಷಣ್, ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಡಾ.ಧರಣೀದೇವಿ ಮಾಲಗತ್ತಿ , ದೂರದರ್ಶನ ಕೇಂದ್ರದ ನಿವೃತ್ತ ಅಧಿಕಾರಿ ಶ್ರೀಮತಿ ನಿರ್ಮಲಾ ಸಿ ಎಲಿಗಾರ, ಸೇರಿದಂತೆ ಹಿರಿಯ ಗಣ್ಯರು ಉಪಸ್ಥಿತರಿದ್ದರು.

# ಮಹಿಳೆಯರ ಕಾರ್ಯಕ್ಕೆ ಶ್ಲಾಘನೆ



**ಮಧುಗಿರಿ :** ನಗರದಲ್ಲಿ ಸಂಜೀವಿನಿ - ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ''ಸಂಜೀವಿನಿ ಮಾಸಿಕ ಸಂತೆ''ಯನ್ನು ಪುರಸಭೆ ಮುಖ್ಯಾಧಿಕಾರಿ ಸುರೇಶ್ ಹಾಗೂ ನಲ್ಮ್ ಯೋಜನೆಯ ಸಮುದಾಯ ಸಂಘಟಕರಾದ ವರಲಕ್ಷ್ಮೀ ಬಿ.ಆರ್ ಅವರು ಉದ್ಘಾಟಿಸಿದರು.

ನಂತರ ಸಂತೆಯಲ್ಲಿ ಇಡಲಾಗಿದ್ದ ವಿವಿಧ ಉತ್ಪನ್ನಗಳನ್ನು ವೀಕ್ಷಿಸಿ ಪುರಸಭೆ ಮುಖ್ಯಾಧಿಕಾರಿ ಸುರೇಶ್ ಅವರು ಮಾತನಾಡಿ, ಎನ್‌ಆರ್‌ಎಲ್‌ಎಂ ಯೋಜನೆಯಡಿ ಸ್ವ ಸಹಾಯ ಗುಂಪಿನ ಮಹಿಳೆಯರು ವಿವಿಧ ಬಗೆಯ ಸ್ವಚ್ಛ ಹಾಗೂ ರುಚಿಯಾದ ಉತ್ಪನ್ನಗಳನ್ನು ತಯಾರಿಸಿ ಗ್ರಾಹಕರಿಗೆ ನೀಡುತ್ತಿರುವುದು ಶ್ಲಾಘನೀಯ. ಹೀಗೆ ಹೆಚ್ಚು ಹೆಚ್ಚು ಮಹಿಳೆಯರು ಮೇಳಗಳ ಮೂಲಕ ತಮ್ಮ ಉತ್ಪನ್ನಗಳನ್ನು ಗ್ರಾಹಕರಿಗೆ ಪರಿಚಯಿಸುವ ಮೂಲಕ ಹೆಚ್ಚಿನ ಆದಾಯ ಗಳಿಸಿ ಸ್ವಾವಲಂಬಿ ಬದುಕು ರೂಪಿಸಿಕೊಳ್ಳಬೇಕು ಎಂದು ಸ್ವ ಸಹಾಯ ಗುಂಪಿನ ಮಹಿಳಾ ಉದ್ಯಮಿಗಳಿಗೆ ಸಲಹೆ ನೀಡಿದರು. ಸ್ವಸಹಾಯ ಗುಂಪಿನ ಮಹಿಳೆಯರು ಮನೆಯಲ್ಲಿ ತಮ್ಮ ಕೈಯ್ಯಾರೆ ತಯಾರಿಸಿದ ಹಪ್ಪಳ, ಉಪ್ಪಿನಕಾಯಿ, ಗಾಣದಲ್ಲಿ ತಯಾರಾದ ಕಡಲೆಕಾಯಿ, ಕೊಬ್ಬರಿ, ಹರಳೆಣ್ಣೆ, ರಾಗಿ ಮಿಲೇಟ್, ಅರಿಶಿಣ ಪುಡಿ, ಮಸಾಲೆ ಪದಾರ್ಥಗಳು, ಶೇಂಗಾಬೀಜದ ಚಟ್ನಿ ಇನ್ನೂ ವಿವಿಧ ಬಗೆಯ ಆಹಾರ ಪದಾರ್ಥಗಳು ಪ್ರದರ್ಶನಕ್ಕೆ ಇಡಲಾಗಿತ್ತು. ಈ ವೇಳೆ ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರಾದ ತಿಪ್ಪೇಸ್ವಾಮಿ, ತಾಲ್ಲೂಕು ವ್ಯವಸ್ಥಾಪಕರಾದ ವಿಷ್ಣುವರ್ಧನ ನಾಯ್ಕ ಹಾಗೂ ರಂಗರಾಜು, ವಲಯ ಮೇಲ್ವಿಚಾರಕರಾದ ನಾಗರಾಜ ಜೆ.ಸಿ, ಸಮಗ್ರ ಕೃಷಿ ಸಮೂಹ ನಿರೂಪಕರಾದ ದಿವ್ಯ, ನಲ್ಮ್ ಯೋಜನೆಯ ಸಮುದಾಯ ಸಂಪನ್ಮೂಲ ವ್ಯಕ್ತಿ ನೇತ್ರಾವತಿ, ಎಸ್‌ಬಿಐ ಬ್ಯಾಂಕ್‌ನ ಆರ್ಥಿಕ ಸಾಕ್ಷರತಾ ಸಲಹೆಗಾರರಾದ ಹೆಚ್.ವಿ.ಶಿವನಂದ್, ಬಿಆರ್‌ಪಿ-ಇಪಿ ಕಮಲಮ್ಮ, ಒಕ್ಕೂಟ ಎಂಬಿಕೆ, ಎಲ್‌ಸಿಆರ್‌ಪಿ, ಪಶು ಸಖಿ, ಕೃಷಿ ಸಖಿ ಹಾಗೂ ಸ್ವ ಸಹಾಯ ಗುಂಪಿನ ಮಹಿಳೆಯರ ಹಾಜರಿದ್ದರು.

## ವಿಧಾನಸಭೆಯ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಸಭೆ

ಬೆಂಗಳೂರು: ಸಭಾಧ್ಯಕ್ಷರಾದ ಯು.ಟಿ.ಖಾದರ್ ಅವರು ನೂತನವಾಗಿ ರಚಿಸಲ್ಪಟ್ಟ ವಿಧಾನ ಮಂಡಲದ / ವಿಧಾನ ಸಭೆಯ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳ ಸಭೆಯನ್ನು ನಡೆಸಿದರು. ನಂತರ ಅವರು, ಸಮಿತಿ ಪದ್ಧತಿಯನ್ನು ಬಲಪಡಿಸುವ ಬಗ್ಗೆ ಸಮಿತಿ ಅಧ್ಯಕ್ಷರುಗಳ ಸಹಕಾರವನ್ನು ಕೋರಿ, ಅಗತ್ಯ ಸೂಚನೆಗಳನ್ನು ನೀಡಿದರು. ವಿಧಾನ ಮಂಡಲದ/ವಿಧಾನ ಸಭೆಯ ಸಮಿತಿಗಳ ವರದಿಗಳ ಪ್ರಾಮುಖ್ಯತೆಯನ್ನು ಅರಿಯಲು ಹಾಗೂ ವರದಿಗಳಲ್ಲಿ ಶಿಫಾರಸ್ಸುಗಳ ಅನು?ಾನದ ಬಗ್ಗೆ ಕಾರ್ಯಾಂಗದ ಗಮನಕ್ಕೆ ತರಲು ಅನುಕೂಲವಾಗುವಂತೆ ಅವುಗಳನ್ನು ಸದನದಲ್ಲಿ ಚರ್ಚಿಸಲು ದಿನ ನಿಗದಿಪಡಿಸಿ ಸಮಿತಿಗಳ ಪ್ರಾಮುಖ್ಯತೆಯನ್ನು ಹೆಚ್ಚಿಸಲಾಗುವುದು ಎಂದು ತಿಳಿಸಿದರು.ಸಮಿತಿ ಸಭೆಗಳು ಪ್ರತಿ ತಿಂಗಳಲ್ಲಿ ನಾಲ್ಕು ದಿನಗಳು ನಡೆಯುತ್ತಿರುವುದರಿಂದ ಒಂದು ಸಭೆಯನ್ನು ಕಡ್ಡಾಯವಾಗಿ ಸಮಿತಿಯ ಶಿಫಾರಸ್ಸುಗಳ ಅನು?ಾನದ ಬಗ್ಗೆ ಮೀಸಲಿಟ್ಟು ವರದಿಯಲ್ಲಿನ ಶಿಫಾರಸ್ಸುಗಳನ್ನು ಜಾರಿಗೊಳಿಸಿ ಕಾರ್ಯಾಂಗವು ಶಾಸಕಾಂಗಕ್ಕೆ ಜವಾಬ್ದಾರಿಯಾಗಿದೆ ಎಂದರು. ಎಲ್ಲಾ ಸಮಿತಿ ಸಭೆಗಳಿಗೆ ಸರ್ಕಾರದ ಇಲಾಖಾ ಮುಖ್ಯಸ್ಥರು ಅಂದರೆ ಸರ್ಕಾರದ ಕಾರ್ಯದರ್ಶಿ ಹಾಗೂ ಮೇಲ್ಪಟ್ಟ ಅಧಿಕಾರಿಗಳು ಭಾಗವಹಿಸಿ ಸಮಿತಿಗಳಿಗೆ ಸಹಕರಿಸುವಂತೆ ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಮುಖ್ಯ ಕಾರ್ಯದರ್ಶಿಯವರಿಗೆ ಸೂಚನೆಯನ್ನು ನೀಡಿದರು. ಸಮಿತಿ ಸಭೆಗಳಿಗೆ ಅಗತ್ಯವಿರುವ ಮಾಹಿತಿಗಳನ್ನು ಕನಿಷ್ಠ ಸಭೆಯ ಮೂರು ದಿನಗಳಿಗೆ ಮುಂಚಿತವಾಗಿ ಒದಗಿಸಿ ಸಮಿತಿ ಸದಸ್ಯರುಗಳು ಸಕ್ರೀಯವಾಗಿ ಭಾಗವಹಿಸಲು ಅನುಕೂಲವಾಗುವಂತೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು. ಸಮಿತಿಗಳ ಯಶಸ್ವಿ ಕಾರ್ಯನಿರ್ವಹಣೆಗೆ ವಿಧಾನ ಸಭೆ ಸಚಿವಾಲಯದಲ್ಲಿ ಒಬ್ಬ ಸಮನ್ವಯಾಧಿಕಾರಿಯನ್ನು ಅವರನ್ನು ನೇಮಿಸುವ ಬಗ್ಗೆ ಸಮಿತಿಯ ಅಧ್ಯಕ್ಷರುಗಳ ಗಮನಕ್ಕೆ ತರಲಾಯಿತು. ಅಂತಿಮವಾಗಿ ಸಭಾಧ್ಯಕ್ಷರು ವಿಧಾನ ಮಂಡಲದ/ವಿಧಾನ ಸಭೆಯ ಸಮಿತಿಗಳು ಅತ್ಯಂತ ಕ್ರೀಯಾಶೀಲವಾಗಿ ಕಾರ್ಯನಿರ್ವಹಿಸಿ ಜವಾಬ್ದಾರಿಯುತವಾಗಿರುವುದನ್ನು ಶಾಸಕಾಂಗಕ್ಕೆ ಅನು?ಾನಗೊಳಿಸಿ ಸಂಸದೀಯ ಕಾರ್ಯಾಂಗ ಪದ್ದತಿಯನ್ನು ಬಲಿಷ್ಠಗೊಳಿಸಬೇಕೆಂದು ವಿನಂತಿಸಿದರು.

## ಬೇಕರಿ ಟೆಕ್ನಾಲಜಿ ಸರ್ಟಿಫಿಕೇಟ್ ಕೋರ್ಸ್‌ಗೆ ಅರ್ಜಿ ಆಹ್ವಾನ

**ಬೆಂಗಳೂರು:** ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆ ವತಿಯಿಂದ ಹದಿನಾಲ್ಕು ವಾರಗಳ ಬೇಕರಿ ಟೆಕ್ನಾಲಜಿ ಸರ್ಟಿಫಿಕೇಟ್ ಕೋಸ್ ್ಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಎಸ್. ಎಸ್.ಎಲ್.ಸಿ. ಪಾಸ್/ಫೇಲ್ ಆಗಿರುವವರು ರೂ.10-00 ಸಂದಾಯಿಸಿ ಅರ್ಜಿ ಫಾರಂಗಳನ್ನು ಸಂಯೋಜಕರು ಮತ್ತು ಮುಖ್ಯಸ್ಥರು, ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆ, ಕೃಷಿ ವಿಶ್ವ ವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು-560 065 ಇವರಿಂದ ಪಡೆದುಕೊಂಡು, ಭರ್ತಿ ಮಾಡಿದ ಅರ್ಜಿಯನ್ನು ಅಕ್ಟೋಬರ್ 25 ರ ಸಂಜೆ 4 ಗಂಟೆಯೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080-23513370 ಗೆ ಸಂಪರ್ಕಿಸಬಹುದು ಎಂದು ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶಕರು ತಿಳಿಸಿದ್ದಾರೆ.

## ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

**ಬೆಂಗಳೂರು:** ಕರ್ನಾಟಕ ಲಲಿತಕಲಾ ಅಕಾಡೆಮಿಯು ಚಿತ್ರಕಲೆಯನ್ನು ಉತ್ತೇಜಿಸುವ ದೃಷ್ಟಿಯಿಂದ 2024-25 ನೇ ಸಾಲಿನ ಗಿರಿಜನ ಉಪಯೋಜನೆಯಡಿಯಲ್ಲಿ ಚಿತ್ರಕಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವಿದ್ಯಾಭ್ಯಾಸದ ಅವಧಿಯಲ್ಲಿ ಕಲಾಶಿಬಿರ, ತರಬೇತಿ ಕಾರ್ಯಾಗಾರ / ಕಮ್ಮಟದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲು ನಿರ್ಧರಿಸಿದ್ದು, ಕರ್ನಾಟಕದ ಅಂಗೀಕೃತಗೊಂಡ ಚಿತ್ರಕಲಾ ಶಿಕ್ಷಣಕ್ಕೆ ಸಂಬಂಧಪಟ್ಟ, ವ್ಯಾಸಂಗ ಮಾಡುತ್ತಿರುವ ಚಿತ್ರಕಲಾ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿ ಸಲ್ಲಿಸ ಬಯಸುವ ವಿದ್ಯಾರ್ಥಿಗಳು 18 ವರ್ಷ ಮೇಲ್ಪಟ್ಟಿದ್ದು, ಕರ್ನಾಟಕದವರಾಗಿರಬೇಕು. ಅರ್ಜಿಯನ್ನು ತಮ್ಮ ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿ, ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಎರಡು ಭಾವಚಿತ್ರ, ಹಾಗೂ 5ಥಿ6 ಅಳತೆಯ ನಾಲ್ಕು ಚಿತ್ರಕಲಾಕೃತಿಗಳ ಛಾಯಾಚಿತ್ರಗಳನ್ನು ಲಗತ್ತಿಸಿ ನವೆಂಬರ್ 15 ರ ಒಳಗಾಗಿ ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-560002 ಇವರಿಗೆ ಸಲ್ಲಿಸುವುದು. ಹೆಚ್ಚಿನ ವಿವರಗಳಿಗಾಗಿ ಅಕಾಡೆಮಿಯ ಇ-ಮೇಲ್: ಇಟಚಿ. ಇಚಿಡಿಟಿಚಿಣಚಿಇಚಿರಟಚಿಟ.ಛಿಟ ಅಥವಾ ದೂರವಾಣಿ ಸಂಖ್ಯೆ 080-22480297ಗೆ ಸಂಪರ್ಕಿಸಬಹುದು ಎಂದು ಕರ್ನಾಟಕ ಲಲಿತಕಲಾ ಅಕಾಡೆಮಿ ರಿಜಿಸ್ಟ್ರಾರ್ ತಿಳಿಸಿದ್ದಾರೆ.

## ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರ ಪ್ರವಾಸ

**ಬೆಂಗಳೂರು:** ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅಕ್ಟೋಬರ್ 25 ಮತ್ತು 26 ರಂದು ಬೆಳಗಾವಿ ಜಿಲ್ಲೆಯ ಪ್ರವಾಸ ಕೈಗೊಂಡು ಅಕ್ಟೋಬರ್ 26 ರಂದು ರಾತ್ರಿ ಕೇಂದ್ರ ಸ್ಥಾನಕ್ಕೆ ಪ್ರಯಾಣಿಸುವರು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು ತಿಳಿಸಿದ್ದಾರೆ.

## ಗ್ರಾಮೀಣಾಭಿವೃದ್ಧಿ ಸಚಿವರ ಪ್ರವಾಸ

**ಬೆಂಗಳೂರು;** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು, ಅಕ್ಟೋಬರ್ 25 ಮತ್ತು 26 ರಂದು ಕಲಬುರಗಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ತಿಳಿಸಿದ್ದಾರೆ.

### ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್ ಮುನಿಯಪ್ಪ ಹೇಳಿಕೆ

# ನ.22 ರೊಳಗೆ 2500 ನಿವೇಶನ ನೀಡುವ ಗುರಿ

**ಬೆಂಗಳೂರು ಗ್ರಾಮಾಂತರ:** ದೇವನಹಳ್ಳಿ ತಾಲ್ಲೂಕಿನ 24 ಗ್ರಾಮ ಪಂಚಾಯಿತಿಗಳಲ್ಲಿ 4,557 ನಿವೇಶನ ರಹಿತರಿದ್ದು ಮೊದಲ ಹಂತದಲ್ಲಿ2500 ನಿವೇಶನ ನೀಡುವ ಗುರಿ ಇದೆ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್ ಮುನಿಯಪ್ಪ ಹೇಳಿದರು.



ದೇವನಹಳ್ಳಿ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ದೇವನಹಳ್ಳಿ ತಾಲ್ಲೂಕು ತ್ರೈಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಲ್ಲೂಕುವಾರು ಹಲವರು ನಿವೇಶನ ರಹಿತ, ವಸತಿ ರಹಿತ ಜನರಿದ್ದಾರೆ. ಸರ್ಕಾರ ವು ಅವರನ್ನು ಗುರ್ತಿಸಿ ನಿವೇಶನ, ವಸತಿ ನೀಡಲು ಕಾರ್ಯಕ್ರಮ ರೂಪಿಸಿದೆ. ದೇವನಹಳ್ಳಿಯಲ್ಲಿ 4557 ನಿವೇಶನ ರಹಿತರಿದ್ದು ಈಗಾಗಲೇ 296 ಜನರಿಗೆ ಹಕ್ಕು ಪತ್ರ ನೀಡಲು ಕ್ರಮವಹಿಸಲಾಗುತ್ತಿದೆ. ಉಳಿದ 4261 ಜನರಿಗೆ ತುರ್ತಾಗಿ ನಿವೇಶನ ನೀಡಲು ಕ್ರಮ ಕೈಗೊಳ್ಳಲಾಗುವುದು. ಒಂದು ತಿಂಗಳ ಒಳಗೆ ಸರ್ಕಾರಿ ಜಮೀನು ನಿವೇಶನಗಳನ್ನು ಗುರುತುಪಡಿಸಿ, ವಸತಿ ರಹಿತರ ಪಟ್ಟಿಯನ್ನು ಸಿದ್ದಪಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಕಂದಾಯ ಇಲಾಖೆಯವರು ಅಧಿಕಾರಿಗಳು ಹಾಗೂ ಪಂಚಾಯಿತಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸಚಿವರು ಸೂಚಿಸಿದರು.

ನವೆಂಬರ್ ಅಂತ್ಯದೊಳಗೆ ಮೊದಲ ಹಂತದಲ್ಲಿ ಕನಿಷ್ಟ 2500 ನಿವೇಶನ ಹಂಚಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಯಾವುದೇ ಗ್ರಾಮದಲ್ಲಿ ರೈತರ ಜಮೀನುಗಳಿಗೆ ತೆರಳಲು , ಸ್ಮಶಾನ ಕ್ಕೆ ಹೋಗಲು ರಸ್ತೆ ಇಲ್ಲದಿದ್ದಲ್ಲಿ ಅಂತಹ ರೈತರು , ಸಾರ್ವಜನಿಕರು ತಾಲ್ಲೂಕು ಕಚೇರಿಗೆ ಒಂದು ವಾರದೊಳಗೆ ಅರ್ಜಿ ಸಲ್ಲಿಸಿ, ಅರ್ಜಿಯನ್ನು ಅಧಿಕಾರಿಗಳು ಪರಿಶೀಲಿಸಿ ಶೀಘ್ರ ಕ್ರಮ ಕೈಗೊಳ್ಳುವರು ಎಂದರು.

ಜೆ.ಜೆ.ಎಂ.ಯೋಜನೆಯಡಿ ಮನೆ ಮನೆಗೂ ಕೊಳವೆ ನಲ್ಲಿಗಾಗಿ ರಸ್ತೆ ಅಗೆದಿದ್ದು, ಅದನ್ನು ಮುಚ್ಚಿದ ನಂತರವೇ ಗುತ್ತಿಗೆದಾರರಿಗೆ ಬಿಲ್ಲು ಪಾವತಿಸುವಂತೆ ಸೂಚಿಸಲಾಯಿತು. ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯಾರಂಭ ಮಾಡುತ್ತಿದ್ದು ದುರಸ್ಥಿಯಾಗಬೇಕಿರುವ ಘಟಕಗಳನ್ನು ತುರ್ತಾಗಿ ದುರಸ್ಥಿಗೊಳಿಸುವಂತೆ ಸೂಚಿಸಿದರು.

ಗುಣಾತ್ಮಕ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುವ ಮೂಲಕ ಸಿ.ಎಸ್.ಆರ್ ಅನುದಾನದಲ್ಲಿ 10 ಶಾಲೆಗಳನ್ನು ಉನ್ನತಿಕರಿಸಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗಿದೆ. ಶಾಲೆಗಳು ಸಣ್ಣ ಹಾಗೂ ದೊಡ್ಡ ಪ್ರಮಾಣದ ದುರಸ್ಥಿ ಇದ್ದಲ್ಲಿ ತಾಲ್ಲೂಕು ಪಂಚಾಯಿತಿ ಅನುದಾನದಲ್ಲಿ ಬಳಕೆ ಮಾಡಿ, ಗ್ರಾಮ ಪಂಚಾಯಿತಿಗಳ ಅನುದಾನ ಬಳಕೆ ಮಾಡಿ ಕೂಡಲೇ ದುರಸ್ಥಿಗೊಳಿಸಬೇಕು. 17 ವಿವೇಕ್ ಶಾಲೆಗಳ ಕೊಠಡಿಗಳ ಪ್ರಾರಂಭವಾಗಿದ್ದು ಮಕ್ಕಳಿಗೆ ಬಳಕೆಯಾಗುತ್ತಿವೆ. ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ನೀಡಲು ಶಿಕ್ಷಕರು ಹೆಚ್ಚು ಶ್ರಮ ವಹಿಸಬೇಕಿದೆ. ಸಿ.ಆರ್.ಪಿ./ ಬಿ.ಆರ್.ಪಿ. ಗಳು ಶಾಲೆಗಳಿಗೆ ಹೆಚ್ಚಿನ ಭೇಟಿ ನೀಡಿಗುಣಾತ್ಮಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕೆಂದರು.

ಎಸ್.ಎಸ್.ಎಲ್.ಸಿ / ಪಿ.ಯು.ಸಿ. ಪರೀಕ್ಷೆ ಫಲಿತಾಂಶ ಶೇ.100 ಆಗಬೇಕಿದ್ದು ಈಗಿನಿಂದಲೇ ಕ್ರಿಯಾಯೋಜನೆ ರೂಪಿಸಿಕೊಂಡು ಜಿಲ್ಲೆಗೆ ಉತ್ತಮ ಹೆಸರು ತರಲು ಶಿಕ್ಷಕರು ಶ್ರಮಿಸಬೇಕು.

ತಾಲ್ಲೂಕಿನ 24 ಗ್ರಾಮ ಪಂಚಾಯಿತಿಗಳಿಂದ 2,556 ಮನೆಗಳ ಬೇಡಿಕೆ ಇದ್ದು ಈಗಾಗಲೇ 1,500 ಮನೆಗಳ ಮಂಜೂರಾತಿಗಾಗಿ ವಸತಿ ಸಚಿವರಿಗೆ ಮನವಿ ಮಾಡಲಾಗಿದೆ.

ಮನೆ ನಿರ್ಮಾಣದ ಘಟಕ ವೆಚ್ಚ ಸಾಮಾನ್ಯರಿಗೆ ರೂ. 1.20 ಲಕ್ಷ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡರವರಿಗೆ ರೂ. 1.75 ಲಕ್ಷವಿದ್ದು ರಾಜ್ಯ ಸರ್ಕಾರದಿಂದ ಅಂಬೇಡ್ಕರ್ ಯೋಜನೆಯಡಿ ರೂ. 2.00 ಲಕ್ಷ ಇದ್ದು ಘಟಕ ವೆಚ್ಚ ಹೆಚ್ಚಿಸಲು ಸರ್ಕಾರ ಕ್ಕೆ ಮನವಿ ಮಾಡಲಾಗಿದೆ ಎಂದರು.

ಗ್ರಾಮೀಣ ಭಾಗಗಳಲ್ಲಿ ಅನಧಿಕೃತವಾಗಿ ಕಿರಾಣಿ ಅಂಗಡಿಯಲ್ಲಿ ಮದ್ಯ ಮಾರಾಟ ತಡೆಯಲು ಅಬಕಾರಿ ಅಧಿಕಾರಿಗಳು ಕಾಲಕಾಲಕ್ಕೆ ದಾಳಿಗಳನ್ನು ನಡೆಸಿ ಅಕ್ರಮ ಮಾರಾಟ ತಡೆಗಟ್ಟಲು ಕ್ರಮವಹಿಸಿ ಎಂದರು.

ಪೋಡಿ ಮುಕ್ತ ತಾಲ್ಲೂಕು ಹಾಗೂ ಜಿಲ್ಲೆಯನ್ನಾಗಿ ಮಾಡಲು ಜಿಲ್ಲಾಡಳಿತದಿಂದ ಕಾರ್ಯ ನಡೆಯುತ್ತಿದ್ದು , ರಾಜ್ಯದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಪೋಡಿ ಮುಕ್ತ ವಾಗುವ ಜಿಲ್ಲೆಗಳಲ್ಲಿ ಮೊದಲ ಸ್ಥಾನದಲ್ಲಿ ಇದೆ. ಕಂದಾಯ ಅಧಿಕಾರಿಗಳು ಈ ನಿಟ್ಟಿನಲ್ಲಿ ಸಾಕಷ್ಟು ಕಾರ್ಯ ಪ್ರವೃತ್ತರಾಗಿದ್ದಾರೆ ಎಂದರು.

ಗುಣಮಟ್ಟದ ಆಹಾರ ಪದಾರ್ಥಗಳನ್ನು, ತರಕಾರಿಗಳನ್ನು ಬೆಳೆಯಲು ರೈತರಿಗೆ ಅರಿವು ಮೂಡಿಸಿ , ರೈತರು ಪಾಲಿಹೌಸ್ ಕೃಷಿ ಪದ್ಧತಿ ಅಳವಡಿಸಿಕೊಳ್ಳುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ಮನವರಿಕೆ ಮಾಡಿ ಎಂದು ಕೃಷಿ, ತೋಟಗಾರಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಗ್ಯಾರಂಟಿ ಅನುಷ್ಠಾನಸಮಿತಿ ಜಿಲ್ಲಾ ಅಧ್ಯಕ್ಷರಾದ ರಾಜಣ್ಣ ,ತಾಲ್ಲೂಕು ಗ್ಯಾರಂಟಿ ಅನುಷ್ಠನ ಅಧ್ಯಕ್ಷರಾದ ಜಗನ್ನಾಥ್,ಬಯ್ಯಪ್ಪಾ ಸದಸ್ಯರಾದ ಮಂಜುನಾಥ್, ಕಾರ್ಯನಿರ್ವಹಣಾಧಿಕಾರಿ ಶ್ರೀನಾಥ್ ಗೌಡ,ತಹಶಿಲ್ದಾರ್ ಬಾಲಕೃಷ್ಣ, ಸಚಿವರ ಆಪ್ತ ಕಾರ್ಯದರ್ಶಿ ಡಾ.ಹೆಚ್.ನಟರಾಜ್ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಕಾಲುಬಾಯಿ ರೋಗ ತಡೆಯಲು 6ನೇ ಸುತ್ತಿನ ಲಸಿಕೆ ಅಭಿಯಾನ

**ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಜಾನುವಾರಗಳ ಕಾಲು ಬಾಯಿ ರೋಗ ತಡೆಯಲು 6ನೇ ಸುತ್ತಿನ ಕಾಲುಬಾಯಿ ರೋಗ ಲಸಿಕಾ ಅಭಿಯಾನಕ್ಕೆ ದೇವನಹಳ್ಳಿ ಪಶು ಆಸ್ಪತ್ರೆ ಬಳಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಹೆಚ್. ಮುನಿಯಪ್ಪ ಅವರು ಚಾಲನೆ ನೀಡಿದರು. ಜಿಲ್ಲೆಯಾದ್ಯಂತ ಅಕ್ಟೋಬರ್ 21 ರಿಂದ ನವೆಂಬರ್ 21 ರವರೆಗೆ ಕಾಲುಬಾಯಿ ರೋಗ ಲಸಿಕಾ ಕಾರ್ಯಕ್ರಮವನ್ನು ಬಮೂಲ್ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದು ಜಾನುವಾರುಗಳಿಗೆ (ದನ ಮತ್ತು ಎಮ್ಮೆ) ಲಸಿಕೆ ಹಾಕಲಾಗುವುದು. ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಪಶು ಆಸ್ಪತ್ರೆ, ದೇವನಹಳ್ಳಿ ವತಿಯಿಂದ 50% ಸಹಾಯಧನದೊಂದಿಗೆ (ರೂ.16700/-) ಒಟ್ಟು 20 ಫಲಾನುಭವಿಗಳಿಗೆ 02 ಹೆಚ್.ಪಿ ಮೇವು ಕಟಾವು ಯಂತ್ರಗಳನ್ನು ವಿತರಿಸಲಾಗಿದೆ. ಕುರಿ/ಮೇಕೆ ಆಕಸ್ಮಿಕ ಮರಣದ ಅನುಗ್ರಹ ಯೋಜನೆಯಡಿ ದೇವನಹಳ್ಳಿ ತಾಲ್ಲೂಕಿನಲ್ಲಿ ಒಟ್ಟು 65 ಫಲಾನುಭವಿಗಳಿಗೆ ತಲಾ 5000 ರೂಪಾಯಿಗಳಂತೆ ವಿತರಿಸಲಾಯಿತು. ಜಾನುವಾರು ಆಕಸ್ಮಿಕ ಮರಣದ ಅನುಗ್ರಹ ಯೋಜನೆ ಯೋಜನೆಯಡಿ ದೇವನಹಳ್ಳಿ ತಾಲ್ಲೂಕಿನಲ್ಲಿ ಒಟ್ಟು 58 ಫಲಾನುಭವಿಗಳಿಗೆ ತಲಾ 10,000 ರೂಪಾಯಿಗಳಂತೆ ವಿತರಿಸಲಾಯಿತು. ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಜಿಲ್ಲಾ ಉಪನಿರ್ದೇಶಕರಾದ ಡಾ. ಜಗದೀಶ್, ತಾಲ್ಲೂಕು ಪಶು ವೈದ್ಯಾಧಿಕಾರಿ ಡಾ, ಅನಿಲ್ ಕುಮಾರ್, ತಹಶಿಲ್ದಾರ್ ಬಾಲಕೃಷ್ಣ, ಬಯ್ಯಪ್ಪಾ ಸದಸ್ಯರಾದ ಮಂಜುನಾಥ್, ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.**

## ಸಾಕ್ಷರತಾ ಕೇಂದ್ರದಿಂದ ಉಚಿತ ಆರೋಗ್ಯ ಶಿಬಿರ

**ಹುಳಿಯಾರು:** ಬೆಂಗಳೂರಿನ ಭಗವಾನ್ ಮಹಾರ್ ಜೈನ್ ಆಸ್ಪತ್ರೆ ಹಾಗೂ ಚಿಕ್ಕನಾಯಕನಹಳ್ಳಿ ಆರ್ಥಿಕ ಸಾಕ್ಷರ ಕೇಂದ್ರ ಅವರಿಂದ ಹುಳಿಯಾರು ಸುಪದ ಚೌಳಕಟ್ಟೆ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಗ್ರಾಮ ಪಂಚಾುತಿಯ ಸಂಜೀನಿ ಒಕ್ಕೂಟದ ಆವರಣದಲ್ಲಿ ಏರ್ಪಡಿಸಲಾಗಿತ್ತು.



ಚೌಳಕಟ್ಟೆ ಗ್ರಾಮವು ತುಂಬಾ ಂದುಳಿದ ಗ್ರಾಮವಾಗಿದ್ದು ಅಲ್ಲಿಯ ಬಡ ಜನರಿಗೆ ಉಚಿತವಾಗಿ ಆರೋಗ್ಯ ಶಿಬಿರವನ್ನು ಏರ್ಪಡಿಸಿದಲ್ಲಿ ಅನುಕೂಲವಾಗುವದೆಂಬ ದೃ್ಟಂದ ಈ ಆರೋಗ್ಯ ಶಿಬಿರ ಏರ್ಪಡಿಸಿದ್ದು ಶಿಬಿರದಲ್ಲಿ ಅಧಿಕ ರಕ್ತದ ಒತ್ತಡ, ಮಧುಮೇಹ ಅಥವಾ ಡಯಾಬಿಟಿಸ್, ಪಾದ ಸಂರಕ್ಷಣ ಹಾಗೂ ಹೃದಯಕ್ಕೆ ಸಂಬಂಧಿಸಿದ ಇಸಿಜಿ ಪರೀಕ್ಷೆಗಳನ್ನು ನಡೆಸಿ ಉಚಿತ ಸಲಹೆ ಸೂಚನೆಗಳನ್ನು ಅಂದರೆ ಯಾವ ರೀತಿ ಆಹಾರ ತೆಗೆದುಕೊಳ್ಳಬೇಕು ಯಾವ ಪಾದರಕ್ಷೆಗಳನ್ನು ಉಪಯೋಗಿಸಬೇಕು ಎಂಬುದರ ಬಗ್ಗೆ ತಿಳಿಸಿಕೊಡಲಾುತು.

ಆಸ್ಪತ್ರೆಯ ಖ್ಯಾತ ವೈದ್ಯರಾದ ಡಾ.ಸುರೇಶ್ ರವರ ತಂಡದ ಜೈನ್ ಇನ್ಸಿಟ್ಯೂಟ್ ಆಫ್ ವ್ಯಾಸ್ಕುಲರ್ ಭಾಗದಿಂದ ಸುಮಾರು 80 ಕ್ಕೂ ಹೊರರೋಗಿಗಳನ್ನು ತಪಾಸಣೆ ಮಾಡಲಾುತು. ಡಾ.ನಯ್ ಮತ್ತು ಸಿಬ್ಬಂದಿಗಳಾದ ಮಂಜುನಾಥ ಆರಾಧ್ಯ, ಸುರೇಶ್, ಅಜಯ್, ಮಲಾ ಹಾಗೂ ಲೋಕೇಶ್, ಚಿಕ್ಕನಾಯಕನಹಳ್ಳಿ ಆರ್ಥಿಕ ಸಾಕ್ಷರ ಕೇಂದ್ರದ ಆರ್ಥಿಕ ಸಾಕ್ಷರತಾ ಸಲಹೆಗಾರರ ಆರ್.ಎಂ. ಕುಮಾರಸ್ವಾ, ತಿಪಟೂರು ಆರ್ಥಿಕ ಸಾಕ್ಷರತಾ ಕೇಂದ್ರದ ಕುಸುಮ, ಸಂಜೀನಿ ಒಕ್ಕೂಟದ ಕಾಂತಮ್ಮ, ಎಲ್‌ಸಿಆರ್‌ಪಿ ಶಶಿಕಲಾ ಹಾಗೂ ಚೌಳಕಟ್ಟೆ ಗ್ರಾಮ ಪಂಚಾುತಿ ಪಿಡಿಒ ನೇನ್, ಕಾರ್ಯದರ್ಶಿ ರಂಗಸ್ವಾ, ಬಾಲರಾಜ್ ಸದಸ್ಯರಾದ ಶಿವಣ್ಣ ಊರಿನ ಯುವ ಮುಖಂಡ ಶ್ರೀನಿವಾಸ್ ಹಾಗೂ ಕರ್ನಾಟಕ ಗ್ರಾೀಣ ಬ್ಯಾಂಕ್ ಮತ್ತಿಘಟ್ಟ ಶಾಖೆಯ ಮಂಜುನಾಥ್ ಹಾಗೂ ಸುದರ್ಶನ್ ಮತ್ತಿತರರು ಇದ್ದರು.

## ಪ್ರತಿಯೊಬ್ಬರೂ ಸಂವಿಧಾನ ಗೌರವಿಸಿ

**ಚಾಮರಾಜನಗರ:** ವಿಶ್ವದಲ್ಲಿ ಅತಿಹೆಚ್ಚು ಶ್ರೇಷ್ಠವಾದದ್ದು ಸಂವಿಧಾನ ಆದ್ದರಿಂದ ಪ್ರತಿಯೊಬ್ಬ ನಾಗರಿಕರು ಸಂವಿಧಾನವನ್ನು ಗೌರವಿಸಬೇಕು ಎಂದು ನಗರಸಭೆ ಅಧ್ಯಕ್ಷ ಎಸ್ ಸುರೇಶ್ ತಿಳಿಸಿದರು



ನಗರದ ಜೋಡಿ ರಸ್ತೆಯಲ್ಲಿರುವ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಜನ ಹಿತಾ ಶಕ್ತಿ ಹೋರಾಟ ವೇದಿಕೆ, ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಏರ್ಪಡಿಸಿದ ಸಂವಿಧಾನ ಅರಿವು ಕಾರ್ಯಕ್ರಮವನ್ನು ಚಾಲನೆ ನೀಡಿ ಮಾತನಾಡಿದ ಅವರು ಸಂವಿಧಾನ ಅಡಿಯಲ್ಲಿ ಲಕ್ಷಾಂತರ ಮಂದಿ ವಿದ್ಯಾಭ್ಯಾಸ ಕಲಿತು ತಮ್ಮ ಭವಿಷ್ಯ ಉಜ್ವಲ ಮಾಡಿಕೊಂಡಿದ್ದಾರೆ ಆದ್ದರಿಂದ ಬಿಡುವಿನ ಸಂದರ್ಭದಲ್ಲಿ ವಿದ್ಯಾರ್ಥಿಗಳು ಗ್ರಂಥಾಲಯ ಗೆ ಭೇಟಿ ನೀಡಿ ಸಂವಿಧಾನ ಓದುವ ಅಭಿರುಚಿ ಬಳಸಿಕೊಳ್ಳಬೇಕು ಎಂದು ಮನವಿ ಮಾಡಿದರು . ಜೆಎಸ್‌ಎಸ್ ಮಹಿಳಾ ಕಾಲೇಜ್ ಉಪನ್ಯಾಸಕಿ ಡಾಕ್ಟರ್ ಏಆರ್ ಸುಷ್ಮಾ ಮಾತನಾಡಿ ಸಂವಿಧಾನ ಜ್ಞಾನ ಪಡೆದಿದ್ದರೆ ವಿಶ್ವದ ಯಾವುದೇ ಭಾಗದಲ್ಲಿ ಉತ್ತಮ ಪ್ರಜೆಯಾಗಿ ಉನ್ನತಮಠದ ಅಧಿಕಾರಿಯಾಗಿ ನಿಮ್ಮದಿಯಿಂದ ಜೀವನ ಮಾಡಲು ಸಾಧ್ಯ ಎಂದು ತಿಳಿಸಿದರು. ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಜಯಣ್ಣ ಅಧ್ಯಕ್ಷತೆ ವಹಿಸಿದ್ದರು . ಉಪನ್ಯಾಶಕರಾದ ಸೈಲೇಶ್ ಕುಮಾರ್, ದೀಪ, ಜನ ಹಿತಾ ಶಕ್ತಿ ಹೋರಾಟ ವೇದಿಕೆ ಅಧ್ಯಕ್ಷ ರಾಮ್ ಸಮುದ್ರ ಸುರೇಶ್, ಸಿದ್ದಾರ್ಥ ಕಾಲೇಜ್ ಪಿ ಯು ಪ್ರಾಂಶುಪಾಲ, ರಂಗಸ್ವಾಮಿ, ಸಾಹಿತಿ ಅಂಕಶಟ್ಟಿಪುರ ಶಂಕರ್ ಹಾಜರಿದ್ದರು.

## ಕಿತ್ತೂರು ರಾಣಿ ಚೆನ್ನಮ್ಮ ಅವರ ಧೈರ್ಯ, ಸಾಹಸ ಸ್ಪೂರ್ತಿ

**ಚಾಮರಾಜನಗರ:** ಬ್ರಿಟೀಷರ ವಿರುದ್ಧ ದೇಶದ ರಕ್ಷಣೆಗಾಗಿ ಕೆಚ್ಚೆದೆಯಿಂದ ಹೋರಾಡಿದ ವೀರನಾರಿ ಕಿತ್ತೂರು ರಾಣಿ ಚೆನ್ನಮ್ಮ ಅವರ ಧೈರ್ಯ, ಸಾಹಸ, ಆದರ್ಶಗಳು ನಮ್ಮೆಲ್ಲರಿಗೂ ಸ್ಪೂರ್ತಿಯಾಗಿವೆ ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ತಿಳಿಸಿದರು.



ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಚೆನ್ನಮ್ಮ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು. ಕರ್ನಾಟಕಕ್ಕೆ, ಕನ್ನಡಕ್ಕೆ ಕಿತ್ತೂರು ರಾಣಿ ಚೆನ್ನಮ್ಮ ಅವರ ಕೊಡುಗೆ ಅಪಾರವಾಗಿದೆ. ದೇಶಪ್ರೇಮಿಯಾಗಿದ್ದ ರಾಣಿ ಚೆನ್ನಮ್ಮನವರು ನಾಡು, ನುಡಿಯ ಬಗ್ಗೆ ಗೌರವ ಹೊಂದಿದ್ದರು. ದೇಶದ ಜನರ ರಕ್ಷಣೆಗಾಗಿ ತನ್ನ ಪ್ರಾಣದ ಹಂಗನ್ನು ತೊರೆದು ಬ್ರಿಟಿಷರ ವಿರುದ್ಧ ಹೋರಾಡಿದ ದಿಟ್ಟ ಮಹಿಳೆ ಚೆನ್ನಮ್ಮ ಅವರ ಧೈರ್ಯ, ಶೌರ್ಯ, ಸಾಹಸಗಾಥೆ ಎಲ್ಲಾ ಮಹಿಳೆಯರಿಗೂ ಮಾದರಿಯಾಗಿದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಕಿತ್ತೂರು ರಾಣಿ ಚೆನ್ನಮ್ಮ ಅವರ ಆದರ್ಶಗಳನ್ನು ಪ್ರತಿಯೊಬ್ಬರು ಪಾಲಿಸುವ ಮೂಲಕ ಸರ್ಕಾರಿ ನೌಕರರು ಜನಸಾಮಾನ್ಯರಿಗೆ ಸೌಲಭ್ಯಗಳನ್ನು ದೊರಕಿಸುವ ನಿಟ್ಟಿನಲ್ಲಿ ಉತ್ತಮ ಆಡಳಿತದ ವಾತಾವರಣ ಕಲ್ಪಿಸಬೇಕು. ನಿಗದಿತ ಗುರಿ ಸಾಧನೆಗೆ ಎಲ್ಲರೂ ಕಾರ್ಯೋನ್ಮುಖರಾಗಬೇಕು. ಅದೇ ರಾಣಿ ಚೆನ್ನಮ್ಮ ಅವರಿಗೆ ನಾವುಗಳು ಸಲ್ಲಿಸುವ ಗೌರವವಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಹೇಳಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ತಹಶೀಲ್ದಾರ್ ಗಿರಿಜ, ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ರಾಜು, ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ದೈಹಿಕ, ಮಾನಸಿಕ ಆರೋಗ್ಯ ಅತೀ ಮುಖ್ಯ

**ಚಾಮರಾಜನಗರ:** ಮನುಷ್ಯನು ಪ್ರತಿದಿನ ಆರೋಗ್ಯ ಹಾಗೂ ಉಲ್ಲಾಸಯುಕ್ತ ಜೀವನ ನಡೆಸಲು ದೈಹಿಕ ಹಾಗೂ ಮಾನಸಿಕ ಆರೋಗ್ಯ ಅತೀ ಮುಖ್ಯವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ್ ಅವರು ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಘಟಕದ ಸಂಯುಕ್ತಾಶ್ರಯದಲ್ಲಿ 'ವಿಶ್ವ ಮಾನಸಿಕ ದಿನಾಚರಣೆ' ಅಂಗವಾಗಿ ಒತ್ತಡ ನಿರ್ವಹಣೆ ಬಗ್ಗೆ ವೈದ್ಯಾಧಿಕಾರಿಗಳಿಗೆ ಏರ್ಪಡಿಸಲಾಗಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರು ಉತ್ತಮ ಆರೋಗ್ಯ ಹೊಂದಲು ದಿನನಿತ್ಯ ಹಸಿರು ಸೊಪ್ಪು, ತರಕಾರಿಗಳು, ಕಾಳುಗಳು, ವಿಟಮಿನ್‌ಗಳು ಹೆಚ್ಚಾಗಿ ಇರುವ ಆಹಾರ ಪದಾರ್ಥಗಳನ್ನು ಸೇವಿಸಬೇಕು. ಪ್ರತಿಯೊಬ್ಬ ವ್ಯಕ್ತಿಯು ದಿನಕ್ಕೆ ಕನಿಷ್ಠ 8 ಗಂಟೆ ನಿದ್ರೆಯನ್ನು ಮಾಡಬೇಕು. ವೈದ್ಯ ವೃತ್ತಿ ಒತ್ತಡದಾಯಕ ಕೆಲಸವಾಗಿದೆ. ರೋಗಿಗಳ ಚಿಕಿತ್ಸೆ ನೀಡುವಾಗ ಎಚ್ಚರದಿಂದಿರಬೇಕಾಗುತ್ತದೆ ಎಂದು ನ್ಯಾಯಾಧೀಶರು ಸಲಹೆ ಮಾಡಿದರು.

ಸಮಾಜದಲ್ಲಿ ಮಾನಸಿಕ ರೋಗಿಗಳನ್ನು ಕೀಳಾಗಿ ಕಾಣದೇ ಮಾನವೀಯತೆಯಿಂದ ನಡೆಸಿಕೊಳ್ಳಬೇಕು. ಅವರುಗಳ ಬಗ್ಗೆ ಉದಾಸೀನ ತೋರಬಾರದು. ಉತ್ತಮ ಚಿಕಿತ್ಸೆಯಿಂದ ಮಾನಸಿಕ ರೋಗಿಗಳನ್ನು ಗುಣ ಪಡಿಸಿಕೊಳ್ಳಬಹುದು. ಈ ನಿಟ್ಟಿನಲ್ಲಿ ವೈದ್ಯರಿಗೆ ಸಹನೆ, ತಾಳ್ಮೆ ಅವಶ್ಯವಾಗಿದೆ. ಒತ್ತಡದಲ್ಲಿ ಕಾರ್ಯನಿರ್ವಹಿಸುವ ವೈದ್ಯರು ತಮ್ಮ ಆರೋಗ್ಯದ ಕಡೆಗೂ ಗಮನ ಹರಿಸಬೇಕು. ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ನ್ಯಾಯಾಧೀಶರಾದ ಈಶ್ವರ್ ಅವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಎಸ್. ಚಿದಂಬರ ಅವರು ವೈದ್ಯರು ಕಣ್ಣಿಗೆ ಕಾಣುವ ದೇವರುಗಳಿದ್ದ ಹಾಗೆ, ದಿನಂಪ್ರತಿ ಸಾಕಷ್ಟು ಒತ್ತಡದ ಸನ್ನವೇಶದಲ್ಲಿ ಕಾರ್ಯನಿರ್ವಹಿಸುವ ವೈದ್ಯರು ತಮ್ಮ ವೃತ್ತಿಯಲ್ಲಿ ಸ್ವಲ್ಪ ವಿರಾಮ ತೆಗೆದುಕೊಂಡು ತಮ್ಮ ಆರೋಗ್ಯದ ಕಡೆಗೆ ಗಮನ ಹರಿಸಬೇಕು ಎಂದರು. ಮೈಸೂರಿನ ಟಿ.ನರಸೀಪುರ ತಾಲ್ಲೂಕಿನ ಮಾಲಂಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಎನ್. ಮಧೂಸೂದನ್ ಅವರು ಒತ್ತಡ ನಿರ್ವಹಣೆ ಕುರಿತು ವೈದ್ಯರಿಗೆ ವಿಶೇಷ ಉಪನ್ಯಾಸ ನೀಡಿದರು.

## ಕುಷ್ಠರೋಗ ಪ್ರಕರಣಗಳ ಪತ್ತೆ ಹಚ್ಚುವ ಅಭಿಯಾನ



**ಬೆಂಗಳೂರು:** ಕುಷ್ಠರೋಗ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಜಿಲ್ಲೆಯಾದ್ಯಂತ ನವೆಂಬರ್ 4 ರಿಂದ 21 ವರೆಗೆ ಕುಷ್ಠರೋಗ ಪ್ರಕರಣ ಪತ್ತೆ ಹಚ್ಚುವ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಕುಷ್ಠರೋಗ ರೋಗ ಮುಕ್ತ ದೇಶ ನಿರ್ಮಾಣಕ್ಕೆ ಪ್ರತಿಯೊಬ್ಬರು ಶ್ರಮಿಸಬೇಕು ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್.ಜಿ ಅವರು ಕರೆ ನಿಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಕುಷ್ಠರೋಗ ಪತ್ತೆ ಹಚ್ಚುವ ಅಭಿಯಾನದ ಕಾರ್ಯಕ್ರಮದ ಕುರಿತು ಅಂತರ ಇಲಾಖಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಕುಷ್ಠ ರೋಗ ನಿಯಂತ್ರಣಕ್ಕೆ ಹೆಚ್ಚಿನ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಅಭಿಯಾನವನ್ನು ಯಶಸ್ವಗೊಳಿಸಲು ಸರ್ವ ರೀತಿಯ ಕ್ರಮಗಳನ್ನು ಕೈಗೊಳ್ಳುವದರ ಮೂಲಕ ಜಿಲ್ಲೆಯನ್ನು ಕುಷ್ಠರೋಗ ಮುಕ್ತ ಜಿಲ್ಲೆಯನ್ನಾಗಿಸುವ ದಿಶೆಯಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು ಮುಂದಾಗಬೇಕು ಎಂದು ತಿಳಿಸಿದರು.

ಕುಷ್ಠರೋಗ ಪ್ರಕರಣ ಪತ್ತೆಗಾಗಿ ಆರೋಗ್ಯ ಇಲಾಖೆ ಸಿಬ್ಬಂದಿಗಳೊಂದಿಗೆ ಅಗತ್ಯವಿದ್ದಲ್ಲಿ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಸೇವೆಯನ್ನು ಪಡೆದುಕೊಂಡು ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕು ಎಂದರು.

ಜಿಲ್ಲೆಯಲ್ಲಿ ಹೆಚ್ಚಿನ ಪ್ರಕರಣಗಳು ಕಂಡು ಬರುವಂತಹ ಪ್ರದೇಶಗಳಲ್ಲಿ ಗುರುತಿಸಿ, ಜನಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಜಿಲ್ಲೆಯಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಪರೀಕ್ಷೆಗೆ ಬೇಕಾಗುವಂತಹ ಸಿಬ್ಬಂದಿಗಳ ಪಟ್ಟಿಯನ್ನು ತಯಾರಿಸಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕುಷ್ಠರೋಗ ಪ್ರಕರಣ ಪತ್ತೆ ಹಚ್ಚುವ ಅಭಿಯಾನ ಕುರಿತ ಪ್ರಚಾರ ಸಾಮಗ್ರಿ ಹಾಗೂ ಭಿತ್ತಿ ಪತ್ರಗಳನ್ನು ಜಿಲ್ಲಾಧಿಕಾರಿಗಳು ಬಿಡುಗಡೆ ಗೊಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಜಗದೀಶ್ ನಾಯಕ್ ಜಿಲ್ಲಾ ಆರೋಗ್ಯಾಧಿಕಾರಿ ಡಾ.ರವೀಂದ್ರನಾಥ್ ಮೇಟಿ, ಜಿಲ್ಲಾ ಕುಷ್ಠರೋಗ ನಿರ್ಮೂಲನ ಅಧಿಕಾರಿ ಡಾ. ನಾಗರಾಜ ಎಂ.ನಿ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ನದೀಮ ಅಹಮದ್, ತಾಲ್ಲೂಕು ಮಟ್ಟದ ಆರೋಗ್ಯಾಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಅರಿಶಿಣವನ್ನು ಲಾಭದಾಯಕ ಬೆಳೆಯಾಗಿ ಪರಿವರ್ತಿಸಿಕೊಳ್ಳಿ

**ಚಾಮರಾಜನಗರ:** ವಾಣಿಜ್ಯ ಬೆಳೆಯಾಗಿರುವ ಅರಿಶಿಣವನ್ನು ಲಾಭದಾಯಕ ಬೆಳೆಯಾಗಿ ಪರಿವರ್ತಿಸಿಕೊಂಡು ರೈತರು ಆರ್ಥಿಕವಾಗಿ ಸಬಲರಾಗಬೇಕು ಎಂದು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ (ಕೆಪೆಕ್) ನಿಯಮಿತ ಅಧ್ಯಕ್ಷರಾದ ಬಿ.ಎಚ್. ಹರೀಶ ಅವರು ತಿಳಿಸಿದರು.



ತಾಲೂಕಿನ ಹರದನಹಳ್ಳಿಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರ(ಕೆವಿಕೆ)ದ ತರಬೇತಿ ಸಭಾಂಗಣದಲ್ಲಿಂದು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ, ಬೆಂಗಳೂರಿನ ಭಾರತೀಯ ತೋಟಗಾರಿಕಾ ವ್ಯವಸ್ಥಾಪಕ ಸಂಸ್ಥೆ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಾಗೂ ಹರದನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ಎರಡು ದಿನಗಳ ಕಾಲ ಹಮ್ಮಿಕೊಳ್ಳಲಾಗಿರುವ 'ಅರಿಶಿಣ ಮೌಲ್ಯ ಹೆಚ್ಚಿಸುವುದು-ಸಂಸ್ಕರಣೆ ಹಾಗೂ ರಫ್ತು ಅವಕಾಶಗಳು' ಕುರಿತ ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಪ್ರದಾನ ದೇಶವಾಗಿರುವ ಭಾರತದಲ್ಲಿ ಬೆಳೆಯುವ ವೈವಿಧ್ಯಮಯ ಬೆಳೆಗಳಲ್ಲಿ ಅರಿಶಿಣವು ಸಹ ಒಂದಾಗಿದೆ. ಅಷ್ಟೇ ಮೌಲ್ಯವರ್ಧಿತ ಬೆಳೆಯೂ ಆಗಿದೆ. ಸೌಂದರ್ಯವರ್ಧಕ ತಯಾರಿಕೆಗಳಲ್ಲಿ ಹೆಚ್ಚಾಗಿ ಬಳಕೆಯಾಗುವ ಅರಿಶಿಣ ಆರೋಗ್ಯ ಸಮಸ್ಯೆಗಳಾದ ಕಫ, ಕೆಮ್ಮು, ಇತರೆ ಕಾಯಿಲೆಗಳ ನಿವಾರಣೆಗೂ ಸಹಕಾರಿಯಾಗಿದೆ. ರೈತರಿಗೆ ಉತ್ತಮ ಆದಾಯ ತರುವ ಅರಿಶಿಣ ಬೆಳೆಯಾಗಿರುವುದರಿಂದ ಅರಿಶಿಣ ಬೆಳೆಯನ್ನು ಪ್ರೋತ್ಸಾಹಿಸಬೇಕಾಗಿದೆ ಎಂದರು.

ಅರಿಶಿಣ ಬೆಳೆ ಬೆಳೆಯುವಲ್ಲಿ ಕರ್ನಾಟಕ ದೇಶದಲ್ಲಿ 4ನೇ ಸ್ಥಾನ ಪಡೆದಿದೆ. ಚಾಮರಾಜನಗರ ಜಿಲ್ಲೆ ರಾಜ್ಯದಲ್ಲಿಯೇ 3ನೇ ಸ್ಥಾನದಲ್ಲಿದೆ. ಕರ್ನಾಟಕದ ಅರಿಶಿಣಕ್ಕೆ ಎಲ್ಲೆಡೆ ಬೇಡಿಕೆ ಇದೆ. ಇಲ್ಲಿನ ಅರಿಶಿಣ 7-8 ಹೊರದೇಶಗಳಿಗೂ ರಫ್ತಾಗುತ್ತಿದೆ. ಜಿಲ್ಲೆಯಲ್ಲಿ ಅರಿಶಿಣ ಬೆಳೆಗೆ ವಾತಾವರಣವೂ ಅನುಕೂಲವಾಗಿದೆ. ಅರಿಶಿಣ ಸಂಸ್ಕರಣೆ ಮಾಡಿ ಮಾರಾಟ ಮಾಡಲು ಉತ್ತಮ ಮಾರುಕಟ್ಟೆ ಸೌಲಭ್ಯ ಕಲ್ಪಿಸಬೇಕಾಗಿದೆ ಎಂದರು. ಜಿಲ್ಲೆಯಲ್ಲಿ ಬೆಳೆಯುವ ಹೆಚ್ಚಿನ ಅರಿಶಿಣ ತಮಿಳುನಾಡಿನ ಈರೋಡ್‌ಗೆ ತಲುಪಲಿದೆ. ಅಲ್ಲಿ ಕೇಳಿದಷ್ಟು ಬೆಲೆಗೆ ನೀಡುವ ಪರಿಪಾಠ ರೈತರಿದ್ದಾಗಿದೆ. ಇದು ತಪ್ಪಬೇಕು. ಇಲ್ಲಿಯೇ ಬೆಳೆದು ಇಲ್ಲಿಯೇ ಮಾರಾಟ ಮಾಡುವಂತಾಗಬೇಕು. ಇದರಿಂದ ಸ್ಥಳೀಯವಾಗಿ ಸಾಕಷ್ಟು ಉದ್ಯೋಗ ಸೃಷ್ಠಿಯಾಗಲಿದೆ. ಈ ನಿಟ್ಟಿನಲ್ಲಿ ಅರಿಶಿಣ ಸಂಸ್ಕರಣೆ ಹಾಗೂ ರಫ್ತು ಅವಕಾಶಗಳ ಬಗ್ಗೆ ಏರ್ಪಡಿಸಲಾಗಿರುವ ಎರಡು ದಿನಗಳ ಕಾರ್ಯಾಗಾರವನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕು. ಜಿಲ್ಲೆಯ ರೈತರು ಆರ್ಥಿಕ ಸಬಲತೆ ಹೊಂದಬೇಕು ಎಂದು ನಿಗಮದ ಅಧ್ಯಕ್ಷರಾದ ಬಿ.ಎಚ್. ಹರೀಶ ಅವರು ಸಲಹೆ ಮಾಡಿದರು.

ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಎಚ್.ಕೆ. ಶಿವಕುಮಾರ್, ಚಾಮರಾಜನಗರ ಕೃಷಿ ವಿಶ್ವವಿದ್ಯಾಲಯದ ವಿಶೇಷ ಅಧಿಕಾರಿ ಡಾ. ಸಿ. ದೊರೆಸ್ವಾಮಿ, ಹರದನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು ಹಾಗೂ ಹಿರಿಯ ವಿಜ್ಞಾನಿ ಡಾ. ಈ.ಎಸ್. ಯೋಗೇಶ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಅಬೀದ್ ಅವರು ಅರಿಶಿಣ ಮೌಲ್ಯ ಹೆಚ್ಚಿಸುವುದು, ಸಂಸ್ಕರಣೆ ಹಾಗೂ ರಫ್ತು ಅವಕಾಶಗಳ ಕುರಿತು ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತೀಯ ತೋಟಗಾರಿಕೆ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕರಾದ ಡಾ. ಕೆ. ಶಿಲ್ಪ, ತೋಟಗಾರಿಕೆ ವಿಜ್ಞಾನಿ ಡಾ. ಎ.ಬಿ. ಮೋಹನ್‌ಕುಮಾರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಕಿತ್ತೂರು ರಾಣಿ ಚೆನ್ನಮ್ಮ ಭಾರತೀಯ ನಾರಿ ಶಕ್ತಿಯ ಪ್ರತೀಕ

**ಚಾಮರಾಜನಗರ:** ಕಿತ್ತೂರು ರಾಣಿ ಚೆನ್ನಮ್ಮ ಭಾರತೀಯ ನಾರಿ ಶಕ್ತಿಯ ಪ್ರತೀಕವಾಗಿದ್ದರು. ಸ್ವಾಭಿಮಾನ, ಕಿಚ್ಚು, ದೇಶಭಕ್ತಿಯ ಸಂಕೇತ ಕಿತ್ತೂರು ರಾಣಿ ಚೆನ್ನಮ್ಮ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷರು ಹಾಗೂ ಸಂಸ್ಕೃತಿ ಚಿಂತಕರು ಆದ ಸುರೇಶ್ ಎನ್ ಋಗ್ವೇದಿ ತಿಳಿಸಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ ಸಭಾಂಗಣದಲ್ಲಿ ನಡೆದ ಕಿತ್ತೂರು ರಾಣಿ ಚೆನ್ನಮ್ಮ ರವರ ಕೊಡುಗೆಗಳ ಕುರಿತು ಮಾತನಾಡುತ್ತಾ ಬ್ರಿಟಿಷರ ವಿರುದ್ಧ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಹೋರಾಟ ನಡೆಸಿದ ವೀರ ವನಿತೆ ,ಕನ್ನಡದ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ ಸದಾ ಕಾಲ ಸ್ಮರಣೀಯರು, ಅಮರರು. ಬ್ರಿಟಿಷರ ವಿರುದ್ಧ ಗೆದ್ದ ವಿಜಯದ ಸಂಕೇತವಾಗಿ ಕಿತ್ತೂರು ವಿಜಯೋತ್ಸವವನ್ನು ಆಚರಿಸುತ್ತಿರುವ ಸರ್ಕಾರ ಹಾಗೂ ಸಂಘ ಸಂಸ್ಥೆಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ ಇತಿಹಾಸದ ಸಮಗ್ರವಾದ ಕನ್ನಡದ ನೆಲವನ್ನು, ಸ್ವಾಭಿಮಾನದ ಪ್ರತೀಕವಾಗಿ ಉಳಿಸಿ ಹೋರಾಟ ನಡೆಸಿದ ಕಿತ್ತೂರು ರಾಣಿ ಚೆನ್ನಮ್ಮ ಭಾರತೀಯರೆಲ್ಲರ ಹೆಮ್ಮೆಯ ಮಹಿಳೆ. ಕಿತ್ತೂರು ಸಂಸ್ಥಾನ ಚಿಕ್ಕದಾದರೂ ಬ್ರಿಟಿಷರ ವಿರುದ್ಧ ತೋರಿದ ಪ್ರತಿಭಟನೆ ವಿಶೇಷವಾದದ್ದು. ಕಿತ್ತೂರಿನ ಕೆಲವು ದೇಶ ದ್ರೋಹಿಗಳು ಬ್ರಿಟಿಷರ ಪರವಾಗಿ ಆಸೆ ಆಮಿಷಗಳಿಗೆ ಬಲಿಯಾಗಿ ಕಿತ್ತೂರಿನ ರಹಸ್ಯಗಳನ್ನು ಶತ್ರುಗಳಿಗೆ ತಿಳಿಸಿ ಕಿತ್ತೂರು ನಾಶವಾಗಲು ಕಾರಣವಾದರು .ಆದರೂ ನೂರಾರು ಕಿತ್ತೂರಿನ ನಿಷ್ಠಾವಂತ ಸೈನಿಕರು ಹೋರಾಡಿ ಕಿತ್ತೂರು ಸಂಸ್ಥಾನವನ್ನು ಉಳಿಸಿದ ಹೆಮ್ಮೆ ನಮ್ಮದು .ದಿಟ್ಟ ತನದಿಂದ ಕೊನೆ ಕ್ಷಣದವರೆಗೂ ಹೋರಾಟ ನಡೆಸಿದ ಕಿತ್ತೂರು ರಾಣಿ ಚೆನ್ನಮ್ಮ ಬಂಧನಕ್ಕೆ ಒಳಗಾಗಿ ಅಂತಿಮವಾಗಿ ಮರಣ ಅಪ್ಪಿದರು . ಕೋಟಿ ಕೋಟಿ ಭಾರತೀಯರಲ್ಲಿ ವಿಶೇಷವಾಗಿ ಕನ್ನಡಿಗರಲ್ಲಿ ಮನೆ ಮಾತಾಗಿದ್ದಾರೆ. ಝಾನ್ಸಿ ರಾಣಿ ಲಕ್ಷ್ಮೀಬಾಯಿ ಹೋರಾಡುವ ಮೂರು ದಶಕಗಳ ಹಿಂದೆಯೇ ಕಿತ್ತೂರು ಚೆನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಡಿದ ಪ್ರಥಮ ಭಾರತೀಯ ಮಹಿಳೆ ಎಂಬುದು ವಿಶೇಷವಾದದ್ದು. ಕಿತ್ತೂರು ರಾಣಿ ಚೆನ್ನಮ್ಮರ ಬಲಗೈಯಾಗಿ ಹೋರಾಟ ನಡೆಸಿದ ನಂಬಿಕಸ್ತ ವೀರ ಸಂಗೊಳ್ಳಿ ರಾಯಣ್ಣ ಕನ್ನಡಿಗರ ಮತ್ತೊಬ್ಬ ಅಪ್ಪಟ ದೇಶಭಕ್ತ. ಕಿತ್ತೂರು ರಾಣಿ ಚೆನ್ನಮ್ಮಳ ಹೋರಾಟದಲ್ಲಿ ಪಾಲ್ಗೊಂಡು ಕಿತ್ತೂರು ಸಂಸ್ಥಾನವನ್ನು ಉಳಿಸುವುದಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿದ ಸಂಗೊಳ್ಳಿ ರಾಯಣ್ಣ ಬ್ರಿಟಿಷರಿಂದ ಗಲ್ಲು ಶಿಕ್ಷೆಗೆ ಒಳಗಾಗಿ ಕನ್ನಡಿಗರ ಹೆಮ್ಮೆಯ ವೀರರಾಗಿದ್ದಾರೆ.ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣನನ್ನು ಕನ್ನಡಿಗರು ಎಂದೆಂದೂ ಮರೆಯಲಾರರು ಎಂದು ತಿಳಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರು ,ಮಾಜಿ ನಗರಸಭಾ ಸದಸ್ಯರಾದ ಪದ್ಮ ಪುರುಷೋತ್ತಮ್, ಝಾನ್ಸಿ ಮಕ್ಕಳ ಪರಿಷತ್ತಿನ ಗೌರವ ಅಧ್ಯಕ್ಷರು ,ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾದ ಕುಸುಮ ಋಗ್ವೇದಿ, ಶಿವಲಿಂಗ ಮೂರ್ತಿ, ಪರಮೇಶ್ವರಪ್ಪ, ರವಿಚಂದ್ರಪ್ರಸಾದ್, ಕಾರ್ತಿಕ್, ಉಮೇಶ್ ಉಪಸ್ಥಿತರಿದ್ದರು.



## ಉಪನೋಂದಣಾಧಿಕಾರಿಗಳಿಂದ ನೋಂದಣಿ ಸಗಿತ : ವದಂತಿಗೆ ಸ್ಪಷ್ಟನೆ

**ಬೆಂಗಳೂರು:** ರಿಜಿಸ್ಟ್ರೇಷನ್ ಕಾಯ್ದೆ 1908 ರ ನಿಯಮ 22(8) ತಿದ್ದುಪಡಿ ವಿರೋಧಿಸಿ ಉಪ ನೋಂದಣಾಧಿಕಾರಿಗಳು ನೋಂದಣಿ ಸ್ಥಗಿತಗೊಳಿಸಿರುವುದಾಗಿ ಸಾಮಾಜಿಕ ಜಾಲತಾಣ ಮತ್ತು ಮಾಧ್ಯಮಗಳಲ್ಲಿ ವರದಿಯಾದ ಹಿನ್ನೆಲೆಯಲ್ಲಿ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರಾದ ಕೆ.ಎ ದಯಾನಂದ ಅವರು ವದಂತಿಯನ್ನು ನಿರಾಕರಿಸಿ ಸ್ಪಷ್ಟೀಕರಣ ನೀಡಿದ್ದಾರೆ. ಅಕ್ಟೋಬರ್ 21 ರಂದು ರಿಜಿಸ್ಟ್ರೇಷನ್ ಕಾಯ್ದೆ 1908 ರ ನಿಯಮ 22(ಃ) ತಿದ್ದುಪಡಿ ವಿರೋಧಿಸಿ ಐದಾರು ಉಪ ನೋಂದಣಾಧಿಕಾರಿಗಳು ನೋಂದಣಿಯನ್ನು ಕೆಲಕಾಲ ಸ್ಥಗಿತಗೊಳಿಸಿದ್ದು ಸರಿಯಿರುತ್ತದೆ. ಆದರೆ, ನಂತರ ಉಪ ನೋಂದಣಾಧಿಕಾರಿಗಳೊಂದಿಗೆ ಚರ್ಚಿಸಿ ನೋಂದಣಿ ಕಾರ್ಯ ಎಂದಿನಂತೆಯೇ ಮುಂದುವರೆಸಲು ಕ್ರಮ ವಹಿಸಲಾಗಿದೆ ಎಂದಿರುವ ಅವರು, ಪ್ರಸ್ತುತ ಯಾವುದೇ ಸಮಸ್ಯೆ ಇರುವುದಿಲ್ಲ. ಯಾರೇ ನೋಂದಣಿ ಮಾಡಿಸಿಕೊಳ್ಳಲು ಇಚ್ಛಿಸುವವರು ನೋಂದಣಿ ಮಾಡಿಸಬಹುದು ಎಂದು ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

## ಜಿಲ್ಲಾ ತಂಬಾಕು ನಿಯಂತ್ರಣ ಘಟಕ ದಾಳಿ: 3900 ರೂ. ಗಳ ದಂಡ ಸಂಗ್ರಹ

**ಬೆಂಗಳೂರು ಗ್ರಾಮಾಂತರ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನಲ್ಲಿ ಕೋಟ್ಪಾ-2003 ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ವಿವಿಧ ಅಂಗಡಿಗಳ ಮೇಲೆ ಕೋಟ್ಪಾ ದಾಳಿಯನ್ನು ನಡೆಸಿದ್ದು, ಸೆಕ್ಷನ್ 4 ರ ಅಡಿಯಲ್ಲಿ 20 ಪ್ರಕರಣಗಳನ್ನು ದಾಖಲಿಸಿ 3900 ರೂ. ಗಳ ದಂಡವನ್ನು ಸಂಗ್ರಹಿಸಲಾಗಿದೆ. ಜಿಲ್ಲಾ ತಂಬಾಕು ನಿಯಂತ್ರಣ ಘಟಕದ ಜಿಲ್ಲಾ ಸಲಹೆಗಾರರಾದ ಡಾ. ವಿದ್ಯಾರಾಣಿ ಪಿ.ಎಸ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ರವಿಕುಮಾರ್, ಪೋಲಿಸ್ ಸಿಬ್ಬಂದಿಯಾದ ಸಲ್ಮಾ ಬೇಗಂ, ಸಮಾಜ ಸೇವಕ ವೆಂಕಟೇಶ್ ಉಪಸ್ಥಿತರಿದ್ದರು.

## ಅರ್ಜಿ ಆಹ್ವಾನ

**ಮಂಡ್ಯ:** 2024-25 ನೇ ಸಾಲಿನ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಾದ ಸ್ವಯಂಉದ್ಯೋಗ ನೇರಸಾಲ ಯೋಜನೆ, ಉದ್ಯಮ ಶೀಲತಾ ಯೋಜನೆ, ಮೈಕ್ರೋಕ್ರೆಡಿಟ್ ಯೋಜನೆ, ಗಂಗಾ ಕಲ್ಯಾಣಯೋಜನೆಯಡಿ ಸಾಲ ಸೌಲಭ್ಯಕಲ್ಪಿಸಲುಅರ್ಹ ಫಲಾಪೇಕ್ಷಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಪರಿಶಿಷ್ಟ ಪಂಗಡಗಳಿಗೆ ಸೇರಿದಅರ್ಜಿದಾರರು ವಿವಿಧಯೋಜನೆಯಡಿ 18 ವರ್ಷದಿಂದ 50 ವರ್ಷದ ವಯೋಮಿತಿಯಲ್ಲಿರಬೇಕು. ಕೃಷಿ ಮತ್ತು ಕೃಷಿ ಆಧಾರಿತ ಚಟುವಟಿಕೆಗಳಿಗೆ ಕನಿಷ್ಟ ವಯೋಮಿತಿ 18 ರಿಂದ 60 ವರ್ಷಗಳು.ಅರ್ಜಿದಾರರು ಪರಿಶಿಷ್ಟ ಪಂಗಡದ ನಿಗಮಕ್ಕೆ ಸಂಬಂಧಿಸಿದ/ ವ್ಯಾಪ್ತಿಗೆ ಒಳಪಡುವ ಉಪ ಜಾತಿಯ ಫಲಾಪೇಕ್ಷಿಗಳು ಮಾತ್ರಅರ್ಜಿ ಸಲ್ಲಿಸಬಹುದಾಗಿರುತ್ತದೆ.2023-24 ನೇ ಸಾಲಿನಲ್ಲಿಆನ್ ಲೈನ್ ಮುಖಾಂತರಅರ್ಜಿ ಸಲ್ಲಿಸಿರುವವರು ಮತ್ತೊಮ್ಮೆಅರ್ಜಿ ಸಲ್ಲಿಸುವಅವಶ್ಯಕತೆಇರುವುದಿಲ್ಲ. ಈ ಹಿಂದೆ ನಿಗಮದಿಂದಯಾವುದೇ ಸಾಲ ಸೌಲಭ್ಯ ಪಡೆಯದಕುಟುಂಬದ ಫಲಾಪೇಕ್ಷಿಗಳು ಮಾತ್ರಅಜಿ ಸಲ್ಲಿಸುವುದು.ಸೌಲಭ್ಯಕೋರಿಆನ್ ಲೈನ್ ಮೂಲಜ ಸೇವಾ ಸಿಂಧು ಪೋರ್ಟಲ್ ನಲ್ಲಿ https:// Sevasindu.karnataka.gov.in ಗ್ರಾಮಒನ್, ಕರ್ನಾಟಕಒನ್, ಬೆಂಗಳೂರು ಒನ್ ಸೇವಾ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಲು ನವೆಂಬರ್ 23 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಂಡ್ಯಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ಜಿಲ್ಲಾವ್ಯ ವಸ್ಥಾಪಕರನ್ನು ಖುದ್ದಾಗಿ ಅಥವಾದೂ. ಸಂ: 08232-221157 ಹಾಗೂ ಎಸ್‌ಸಿ/ಎಸ್ ಟಿ ಸಹಾಯವಾಣಿ 9482-300-400 ಮುಖಾಂತರ ಸಂಪರ್ಕಿಸಬಹುದುಎಂದು ಮಂಡ್ಯಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದಜಿಲ್ಲಾವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜೇನುಗಾರಿಕೆ ತರಬೇತಿ

**ಮಂಡ್ಯ:** ತೋಟಗಾರಿಕೆ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾಗಮಂಡಲ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ 2024-25 ನೇ ಸಾಲಿನಲ್ಲಿ ಇಲಾಖಾ ವತಿಯಿಂದ ಮಂಡ್ಯಜಿಲ್ಲೆಯ ಅಭ್ಯರ್ಥಿಗಳಿಗೆ ನವೆಂಬರ್ 5 ರಿಂದ 2025 ನೇ ಫೆಬ್ರವರಿ 4 ರವರೆಗೆರೈತರ ಮಕ್ಕಳಿಗೆ 3 ತಿಂಗಳ ಜೇನುಗಾರಿಕೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಅರ್ಜಿಯನ್ನು ಜಿಲ್ಲೆಯ ತೋಟಗಾರಿಕೆ ಉಪನಿರ್ದೇಶಕರ ಕಚೇರಿ(ಜಿಲ್ಲಾ ಪಂಚಾಯತ್)/ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ (ರಾಜ್ಯವಲಯ) ಕಚೇರಿಅಥವಾ ಇಲಾಖಾ ವೆಬ್ ಸೈಟ್



https:horticulturedir. karnataka.gov.in ನಲ್ಲಿಅಕ್ಟೋಬರ್ 25 ರವರೆಗೆಡೌನ್ ಲೋಡ್ ಮಾಡಿಕೊಳ್ಳಬಹುದು. ಅರ್ಜಿಯ ಶುಲ್ಕವನ್ನು ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಆಯಾ ಜಿಲ್ಲೆಗಳ ತೋಟಗಾರಿಕೆ ಉನಿರ್ದೇಶಕರ ಕಚೇರಿಗೆ ಸಲ್ಲಿಸುವಾಗ ಅರ್ಜಿ ಶುಲ್ಕದ ಬಾಬ್ತು ಸಾಮಾನ್ಯ ಅಭ್ಯರ್ಥಿಗಳಿಗೆ ರೂ.20, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಅಭ್ಯರ್ಥಿಗಳಿಗೆ ರೂ 10 ಮೌಲ್ಯದಇಂಡಿಯನ್ ಪೋಸ್ಟರ್ಆರ್ಡರ್/ಡಿಮ್ಯಾಂಡ್ ಡ್ರಾಫ್ಟ್ ಅನ್ನು ಆಯಾಯ ಜಿಲ್ಲೆಗಳ ತೋಟಗಾರಿಕೆ ಉಪನಿರ್ದೇಶಕರ ಹೆಸರಿನಲ್ಲಿ ಪಡೆದುಅರ್ಜಿಜೊತೆ ಲಗತ್ತಿಸಬೇಕು. ಅರ್ಜಿಗಳನ್ನು ಸ್ವೀಕರಿಸಲು ಅಕ್ಟೋಬರ್ 28 ಕೊನೆಯ ದಿನವಾಗಿದ್ದು, ಅಕ್ಟೋಬರ್ 29 ರಂದು ಸಂದರ್ಶನವನ್ನು ನಡೆಸಲಾಗುವುದುಎಂದು ಮಂಡ್ಯಜಿಲ್ಲಾ ಪಂಚಾಯತ್ ನ ತೋಟಗಾರಿಕೆಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಹ ಫಲಾನುಭವಿಗಳಿಗೆ ಮನೆ ಮಂಜೂರಾತಿ ಮಾಡಲು ಸಚಿವರ ಒಪ್ಪಿಗೆ



**ಮಾಲೂರು:** ಮಾಲೂರಿನಲ್ಲಿ ಆಶ್ರಯ ಯೋಜನೆಯಲ್ಲಿ 1200 ಅರ್ಹ ಫಲಾನುಭವಿಗಳಿಗೆ ವಿತರಿಸಲಾಗುವ ಉಚಿತ ನಿವೇಶನದ ಜೊತೆಯಲ್ಲಿ ರಾಜೀವ ಗಾಂಧಿ ವಸತಿ ನಿಗಮದ ಮೂಲಕ ಮನೆ ಮಂಜೂರಾತಿ ಮಾಡಲು ಸಚಿವ ಜಮೀರ್ ಅಹಮದ್ ಒಪ್ಪಿಗೆ ಸೂಚಿಸಿದ್ದು, ಅವರಿಗೆ ತಾಲೂಕಿನ ಜನತೆ ಪರವಾಗಿ ಕೃತಜ್ಞತೆ ಸಲ್ಲಿಸುವುದಾಗಿ ಶಾಸಕ ಕೆ.ವೈ.ನಂಜೇಗೌಡ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ ಈ ಸಂಬಂಧ ವಿಧಾನಸೌಧದ ರಾಜೀವ ಗಾಂಧಿ ವಸತಿ ನಿಗಮದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಸಚಿವ ಜಮೀರ್ ಅಹಮದ್ ಎರಡು ದಶಕಗಳ ಕಾಲದಿಂದ ನನೆಗುದಿಗೆ ಬಿದಿದ್ದ ಈ ಆಶ್ರಯ ಯೋಜನೆಯನ್ನು ತಾರ್ಕಿಕ ಅಂತ್ಯ ಕಾಣಿಸುವ ಬಗ್ಗೆ ನಡೆಸಿದ ಹೋರಾಟ ಬಗ್ಗೆ ಮಾಹಿತಿ ಪಡೆದರಲ್ಲದೇ ನಮ್ಮ ಪ್ರಯತ್ನವನ್ನು ಶ್ಲಾಘಿಸಿ ಇಲಾಖೆ ಅಧಿಕಾರಿಗಳೊಡನೆ ಸಾಧ್ಯತೆ ಬಾಧ್ಯತೆಯನ್ನು ಚರ್ಚಿಸಿ 30 ಎಕರೆಯಲ್ಲಿ ಬರುವ ಎಲ್ಲ ನಿವೇಶನದಾರರಿಗೆ ಮನೆ ಕಟ್ಟಿಕೊಡಲು ಒಪ್ಪಿಗೆ ಸೂಚಿಸಿದ್ದಾರೆ ಎಂದು ತಿಳಿಸಿದ್ದಾರೆ. ಈಗಾಗಲೇ ನಿವೇಶನಕ್ಕಾಗಿ ಬಡವರು ಈ ಹಿಂದೆ ಕಟ್ಟಿದ್ದ 35 ಸಾವಿರ ರೂ.ಗಳನ್ನು ಬ್ಯಾಂಕ್ ಬಡ್ಡಿ ಸಮೇತ ಫಲಾನುಭವಿಗಳ ಖಾತೆಗೆ ನೇರವಾಗಿ ಹಿಂದುರುಗಿಸಲಾಗಿದೆ. ಇನ್ನೆರಡು ತಿಂಗಳಲ್ಲಿ ಬಡಾವಣೆ ನಿರ್ಮಾಣ ಪೂರ್ಣಗೊಳ್ಳಲಿದ್ದು, ಮುಖ್ಯಮಂತ್ರಿಗಳು ಸೇರಿದಂತೆ ಹಲವು ಮಂತ್ರಿಗಳ ಸಮ್ಮುಖದಲ್ಲಿ ಬಡವರಿಗೆ ನಿವೇಶನ ಹಾಗೂ ಮನೆ ಮಂಜೂರಾತಿ ಪತ್ರ ವಿತರಿಸಲಾಗುವುದು ಎಂದರು. ಮಾಲೂರು ಪುರಸಭೆ ಅಧಿಕಾರಿಗಳಾದ ಮಂಜುನಾಥ್, ಬಿ.ಆರ್.ಶ್ರೀನಿವಾಸ್ ಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು.



**ಮಂಡ್ಯ ನಗರದ ಗುರುಭವನದ ಆವರಣದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಚುನಾವಣೆ ವಿವಿಧ ಇಲಾಖೆ ನೌಕರರ ಚುನಾವಣಾ ಪೂರ್ವಭಾವಿ ಸಭೆ ಶಿಕ್ಷಕರ ಸಂಘಟನೆಯ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಚಂದ್ರಶೇಖರ್ ಉದ್ಘಾಟಿಸಿದರು. ಸಂಘದ ನಾಗೇಶ್, ಶಿವರುದ್ರಯ್ಯ, ಬಸವರಾಜು, ಲೋಕೇಶ್, ತಮ್ಮಣ್ಣಗೌಡ, ಹೇಮಣ್ಣ, ಮಾಗಡಿ ಮೂರ್ತಿ, ವಿಜಿ, ಪ್ರಶಾಂತ್‌ಬಾಬು ಭಾಗವಹಿಸಿದ್ದರು.**

# ನೀರಿನ ತಾಣಗಳಲ್ಲಿ ಎಚ್ಚರವಹಿಸಿ

## ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಮನವಿ | ಮಳೆಹಾನಿ ತ್ವರಿತ ಪರಿಹಾರ ಕ್ರಮ

**ಚಿಕ್ಕಬಳ್ಳಾಪುರ :** ಕಳೆದ ವಾರದಿಂದ ಜಿಲ್ಲೆಯಾದ್ಯಂತ ಮಳೆ ಹೆಚ್ಚಾಗುತ್ತಿದ್ದು ಜಿಲ್ಲೆಯ ಕೆರೆ, ಕುಂಟೆಗಳು, ಜಲಾಶಯಗಳು ತುಂಬಿ ಕೋಡಿ ಹೋಗುತ್ತಿವೆ. ನೀರಿನ ತಾಣಗಳಲ್ಲಿ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಬೇಕು. ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕೈಗೊಂಡು ಅವಗಡಗಳನ್ನು ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಅವರು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿದರು.

ಮಂಗಳವಾರ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ''ವಿಪತ್ತು ನಿರ್ವಹಣಾ ಪ್ರಾಧಿಕಾರದ ಜಿಲ್ಲಾ ಮಟ್ಟದ ಸಭೆಯ ಅಧ್ಯಕ್ಷತೆ ವಹಿಸಿ'' ಮಳೆ ಹಾನಿಯ ವಿವರವನ್ನು ಪಡೆದು ನಂತರ ಮಾತನಾಡಿದರು.

ಕಳೆದ 7 ದಿನಗಳಿಂದ ಜಿಲ್ಲೆಯಲ್ಲಿ 87 ಮಿ.ಮೀಟರ್ ಮಳೆಯಾಗಿದೆ. ವಾಡಿಕೆ ಪ್ರಕಾರ ಕಳೆದ 7 ದಿನಗಳಲ್ಲಿ 25 ಮಿ.ಮೀಟರ್ ಮಳೆ ಆಗಬೇಕಾಗಿತ್ತು. ಕಳೆದ ರಾತ್ರಿ ಬಿದ್ದ ಮಳೆಗೆ ಚಿಕ್ಕಬಳ್ಳಾಪುರ ತಾಲ್ಲೂಕಿನ ಜಕ್ಕಲಮಡಗು, ಗುಡಿಬಂಡೆಯ ಅಮಾನಿ ಭೈರಸಾಗರ ಕೆರೆ ಕೋಡಿ ಹೋಗುತ್ತಿವೆ. ಬಾಗೇಪಲ್ಲಿಯ ಚಿತ್ರಾವತಿ ಜಲಾಶಯ ಬಹುತೇಕ ಪೂರ್ಣಗೊಂಡಿದ್ದು, ಒಂದೆರಡು ದಿನಗಳಲ್ಲಿ ಕೋಡಿ ಹೋಗುವ ಸಾಧ್ಯತೆ ಇದೆ. ಮುಂದಿನ ಒಂದೆರಡು ದಿನಗಳಲ್ಲಿ ಮಳೆ ಪ್ರಮಾಣ ಜಾಸ್ತಿ ಆಗಲಿದೆ. ಉತ್ತರ ಪಿನಾಕಿನಿ ನದಿಯು ಉಕ್ಕಿ ಹರಿಯುತ್ತಿದೆ. ಬಹುತೇಕ ಜಿಲ್ಲೆಯ ಕೆರೆಗಳು, ಕುಂಟೆಗಳು ತುಂಬಿ ಹರಿಯುತ್ತಿವೆ. ನೀರು ಹರಿಯುವ ತಾಣಗಳಲ್ಲಿ, ಕೋಡಿ ಪ್ರದೇಶಗಳಲ್ಲಿ, ನದಿ ಪಾತ್ರ ಪ್ರದೇಶಗಳಲ್ಲಿ ಸಾರ್ವಜನಿಕರು, ಮಕ್ಕಳು ಈಜಾಡಲು, ಆಟವಾಡಲು ಹಾಗೂ ಮೀನು ಹಿಡಿಯಲು ಮುಂದಾಗುವ ಸಾಧ್ಯತೆಗಳಿರುತ್ತವೆ. ಅಂತಹ ಕಡೆ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಬೇಕು. ತಮ್ಮ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಈ ರೀತಿ ಆಗುವ ಸಾಧ್ಯತೆ ಇದೆ ಮುಂಜಾಗ್ರತೆಯಿಂದ ಸ್ಥಳಗಳನ್ನು ಗುರ್ತಿಸಿ ಅಗತ್ಯ ಕ್ರಮಗಳನ್ನು ತಹಸಿಲ್ದಾರರು, ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು. ಜಿಲ್ಲಾಡಳಿತದ ಎಲ್ಲ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ತಮ್ಮ ಕಾರ್ಯ ಕೇಂದ್ರ ಸ್ಥಳಗಳಲ್ಲಿ ಇದ್ದು 24ಫ7 ಕಾರ್ಯ ನಿರ್ವಹಿಸಬೇಕು. ಮಳೆ ಹಾನಿ ಅವಗಡಗಳನ್ನು ತಡೆಗಟ್ಟಲು ಸಹಾಯವಾಣಿ ಕೇಂದ್ರಗಳನ್ನು ತೆರೆದು ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ತ್ವರಿತವಾಗಿ ಪರಿಹರಿಸಬೇಕು. ಮಳೆಯಿಂದ ಹಾನಿಗೊಳಗಾದ ಮನೆಗಳ ಮಾಲಿಕರಿಗೆ ಹಾಗೂ ಬೆಳೆ ಹಾನಿಗೆ ಒಳಗಾದ ಸಂತ್ರಸ್ತ ರೈತರಿಗೆ ಪರಿಹಾರ ನೀಡಲು ತ್ವರಿತ ಕ್ರಮವಹಿಸಬೇಕು ಎಂದು ಸೂಚನೆ ನೀಡಿದರು.

ಅಕ್ಟೋಬರ್ 1 ರಿಂದ ಈ ವರೆಗೆ ಗೌರಿಬಿದನೂರು ತಾಲ್ಲೂಕಿನಲ್ಲಿ 15 ಮನೆಗಳಿಗೆ ಹಾನಿಯಾಗಿದ್ದು, 5 ಮನೆಗಳಿಗೆ ಪರಿಹಾರ ನೀಡಲಾಗಿದೆ. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ 10 ಮನೆಗಳು ಹಾನಿಯಾಗಿದ್ದು, 5 ಮನೆಗಳ ಸಂತ್ರಸ್ತರಿಗೆ ಪರಿಹಾರ ನೀಡಲಾಗಿದೆ. ಬಾಗೇಪಲ್ಲಿ ತಾಲ್ಲೂಕಿನಲ್ಲಿ 8 ಮನೆಗಳಿಗೆ ಹಾನಿಯಾಗಿದ್ದು, 5 ಸಂತ್ರಸ್ತರಿಗೆ ಪರಿಹಾರ ನೀಡಲಾಗಿದೆ. ಚಿಂತಾಮಣಿ ತಾಲ್ಲೂಕಿನಲ್ಲಿ 04, ಚೇಳೂರು ತಾಲ್ಲೂಕಿನಲ್ಲಿ 04, ಶಿಡ್ಲಘಟ್ಟ ತಾಲ್ಲೂಕಿನಲ್ಲಿ 04 ಮನೆಗಳು ಹಾನಿಯಾಗಿದೆ. ಗುಡಿಬಂಡೆ ತಾಲ್ಲೂಕಿನಲ್ಲಿ 12 ಮನೆಗಳು ಹಾನಿಯಾಗಿದ್ದು, 7 ಸಂತ್ರಸ್ತರಿಗೆ ಪರಿಹಾರ ನೀಡಲಾಗಿದೆ.ನೆನ್ನೆ ಬಿದ್ದ ಮಳೆ ಹಾನಿ ಮತ್ತು ಮುಂದೆ ಬಿಳುವ ಮಳೆಯ ಹಾನಿ ಬಗ್ಗೆ ತ್ವರಿತವಾಗಿ ಕಲೋಚಿತವಾಗಿ ಪರಿಶೀಲಿಸಿ ತುರ್ತು ಪರಿಹಾರವನ್ನು ನೀಡುವ ಕೆಲಸ ತ್ವರಿತವಾಗಿ ಆಗಬೇಕು. ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿರುವ ಕಚ್ಚಾ ಮನೆಗಳನ್ನು ಗುರ್ತಿಸಿ ಅಂತಹ ಮನೆಗಳ ಜನರನ್ನು ಸರ್ಕಾರದ ಸಮುದಾಯ ಭವನಗಳ ಕಟ್ಟಡಗಳಿಗೆ ಅಥವಾ ಇತರ ಕಟ್ಟಡಗಳಿಗೆ ತಾತ್ಕಲಿಕವಾಗಿ ಸ್ಥಳಾಂತರಿಸಿ ಅಗತ್ಯ ಪುನರ್ವಸತಿ ಕ್ರಮಗಳನ್ನು ಕೈಗೊಳ್ಳಬೇಕು. ಸೋರುತ್ತಿರುವ ಶಾಲೆಗಳು, ಕಾಲೇಜುಗಳು, ಅಂಗನವಾಡಿಗಳಲ್ಲಿ ಪಾಠ, ಪ್ರವಚನಗಳನ್ನು ನಡೆಸಬಾರದು,ಮೇಲಾಧಿಕಾರಿಗಳಿಗೆ ಈ ಕುರಿತು ವರದಿ ಮಾಡಬೇಕು. ಪೋಷಕರು, ಶಿಕ್ಷಕರು ಮಕ್ಕಳಿಗೆ ಅರಿವು ಮೂಡಿಸಿ ನೀರು ಹರಿಯುವ ತಾಣಗಳಿಗೆ ಆಟವಾಡಲು ಹೋಗದಂತೆ ತಿಳಿಸಬೇಕು ಜೊತೆಗೆ ಈ ಬಗ್ಗೆ ನಿಗಾ ಇಡಬೇಕು ಎಂದು ತಿಳಿಸಿದರು.



### ಪ್ರಾಣ ಹಾನಿ ಆಗಿಲ್ಲ

**ಅಕ್ಟೊಬರ್ 1ರಿಂದ ಈ ವರಗೆ ಮಳೆಯಿಂದ ಯಾವುದೇ ರೀತಿಯ ಜನರ ಪ್ರಾಣ ಹಾನಿ ಆಗಿಲ್ಲ.3 ಜಾನುವಾರುಗಳ ಪ್ರಾಣಹಾನಿಯಾಗಿದ್ದು ಕೊಡಲೆ ಆಜಾನುವಾರು ಸಂತ್ರಸ್ತರಿಗೆ ಪರಿಹಾರ ಒದಗಿಸಬೇಕು. ಸಾರ್ವಜನಿಕರು ಸುರಕ್ಷತಾ ಕ್ರಮಗಳೊಂದಿಗೆ ಸುರಕ್ಷಿತ ಸ್ಥಳಗಳಲ್ಲಿರಬೇಕು. ಮಳೆ ಹಾನಿಗೆ ಒಳಗಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಅವರು ಮನವಿ ಮಾಡಿದರು. ಈ ವರ್ಷ ಜಿಲ್ಲೆಯಲ್ಲಿ 361 ಡೆಂಗ್ಯೊ ಪ್ರಕರಣಗಳು ದಾಖಲೆಯಾಗಿವೆ. ಕಳೆದ ತಿಂಗಳಲ್ಲಿ ಪ್ರಕರಣಗಳು ಇಳಿಮುಖವಾಗಿದ್ದರೂ ಕೂಡ ದಿನ ನಿತ್ಯ ಮಳೆ ಸುರಿಯುತ್ತಿರುವುದರಿಂದ ಮತ್ತೆ ಸೊಳ್ಳೆಗಳ ಉತ್ಪತ್ತಿಯು ಹೆಚ್ಚಾಗಿ ಡೆಂಗ್ಯೊ ಉಲ್ಬಣವಾಗುವ ಸಾಧ್ಯತೆ ಇದೆ. ಸಾರ್ವಜನಿಕರು ಎಚ್ಚರವಹಿಸಬೇಕು ತಮ್ಮ ಸುತ್ತ ಮುತ್ತಲ ಪ್ರದೇಶದಲ್ಲಿ ಅನುಪಯುಕ್ತ ವಸ್ತುಗಳಲ್ಲಿ, ಗುಂಡಿಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಸ್ವಚ್ಚತೆಗೆ ಆದ್ಯತೆ ನೀಡಬೇಕು. ಸೊಳ್ಳೆ ನಿರೋಧಕಗಳನ್ನು ಉಪಯೋಗಿಸಬೇಕು. ಮಳೆಯಿಂದಾಗಿ ಜಲಜನ್ಯ ಮತ್ತು ಕೀಟ ಜನ್ಯ ರೋಗಗಳು ಹೆಚ್ಚಳವಾಗುವ ಸಾಧ್ಯತೆ ಇದೆ. ಆದ್ದರಿಂದ ನೀರನ್ನು ಕುದಿಸಿ, ಆರಿಸಿ ಕುಡಿಯುವುದನ್ನು ಜನರು ಪಾಲಿಸಬೇಕು. ಒಟ್ಟಾರೆ ಯಾವುದೇ ಸಾಂಕ್ರಾಮಿಕ ರೋಗ ರುಜಿನಗಳಿಗೆ ತುತ್ತಾಗದಂತೆ ಹಾಗೂ ಮಳೆ ಹಾನಿಗೆ ಒಳಗಾಗದಂತೆ ಸುರಕ್ಷತಾ ಕ್ರಮಗಳನ್ನು ಪಾಲಿಸಲು ಮನವಿ ಮಾಡಿದರು.**

### 42.88 ಹೆ.ಪ್ರದೇಶಗಳ ಬೆಳೆ ನಷ್ಟ

**ಮಳೆ ಹಾನಿಯಿಂದ ಅಕ್ಟೋಬರ್ 1 ರಿಂದ 21 ರವಗೆ 42.88 ಹೆಕ್ಟೇರ್ ಪ್ರದೇಶಗಳ ಕೃಷಿ ಮತ್ತು ತೋಟಗಾರಿಕಾ ಬೆಳೆಗಳಿಗೆ ಹಾನಿಯಾಗಿದೆ. ನೆನ್ನೆ ಬಿದ್ದ ಬಾರಿ ಮಳೆಗೆ ಹಾನಿಯಾಗಿರುವ ಬೆಳೆ ಮಾಹಿತಿಯನ್ನು ತ್ವರಿತವಾಗಿ ಕೃಷಿ, ತೋಟಗಾರಿಕೆ, ಕಂದಾಯ ಹಾಗೂ ಇತರ ಇಲಾಖೆಗಳ ಸಹಯೋಗದಲ್ಲಿ ಜಂಟಿ ಸಮೀಕ್ಷೆ ಮಾಡಿ ಪರಿಹಾರ ತಂತ್ರಾಂಶದಲ್ಲಿ ಮಾಹಿತಿ ನಮೂಧಿಸುವ ಮೂಲಕ ಪರಿಹಾರ ಕ್ರಮಕ್ಕೆ ತುರ್ತಾಗಿ ಸ್ಪಂದಿಸಲು ಸಂಬಂದಪಟ್ಟ ಇಲಾಖೆಗಳ ಮುಖ್ಯಸ್ಥರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕಾಧಿಕಾರಿ ಪ್ರಕಾಶ್ ಜಿ.ಟಿ ನಿಟ್ಟಾಲಿ, ಅಪರ ಜಿಲ್ಲಾಧಿಕಾರಿ ಡಾ. ಎನ್ ಭಾಸ್ಕರ್, ಉಪವಿಭಾಗಾಧಿಕಾರಿ ಡಿ.ಎಚ್. ಅಶ್ವಿನ್, ಜಂಟಿ ಕೃಷಿ ನಿರ್ದೇಶಕಿ ಜಾವೀದಾ ನಸೀಮಾ ಖಾನಂ, ಎಲ್ಲಾ ತಹಸೀಲ್ದಾರರು, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಹಾಜರಿದ್ದರು.**

# ದತ್ತಾಂಶ ಆಧರಿಸಿಯೇ ಒಳಮೀಸಲಾತಿ ಹಂಚಿಕೆಗೆ ಮುಂದಾಗಿ

**ಬೆಂಗಳೂರು :** ರಾಜ್ಯ ಸರ್ಕಾರವು ಸೂಕ್ತ ಅಧ್ಯಯನ ಇಲ್ಲದೆ ಪರಿಶಿಷ್ಟ ಜಾತಿಗಳಲ್ಲಿ ಒಳ-ಮೀಸಲಾತಿ ಜಾರಿಗೊಳಿಸಲು ನಡೆಯುತ್ತಿರುವ ಷಡ್ಯಂತ್ರ ಎಂದು ಸೈನಾ ಭಗತ್ ಗುರೂಜಿ ರವರು ತಿಳಿಸಿದರು.

ಬಂಜಾರ ಧರ್ಮ ಗುರುಗಳ ಮಹಾಸಭಾ ವತಿಯಿಂದ ಫ್ರೀಡಂ ಪಾರ್ಕ್ ನಲ್ಲಿ ಹಮ್ಮಿಕೊಂಡಿದ್ದ ಹಮ್ಮಿಕೊಳ್ಳಲಾಗಿದ್ದ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಮಾತನಾಡಿದ ಅವರು ಪರಿಶಿಷ್ಟರ ಒಳಮೀಸಲಾತಿ ಕಲ್ಪಿಸುವ ಸಂಬಂಧ ರಾಜ್ಯದಲ್ಲಿ ಇರುವ ಎಲ್ಲ ಸಮುದಾಯಗಳ ಸರಿಯಾದ ಅಧ್ಯಯನ ಇಲ್ಲದೆ ಮತ್ತು ವೈಜ್ಞಾನಿಕವಾಗಿ ದತ್ತಾಂಶವನ್ನು ಸಂಗ್ರಹಿಸದೆ ತರಾತುರಿಯಲ್ಲಿ ಮಾಡಬಾರದು. ಪರಿಶಿಷ್ಟರ ಜಾತಿ ಪಟ್ಟಿಯಲ್ಲಿರುವ ವಿವಿಧ ಸಮುದಾಯಗಳ ಜನರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ದೊರಕಿರುವ ಅವಕಾಶಗಳು, ಆರ್ಥಿಕಸ್ಥಿತಗಳು, ರಾಜಕೀಯ ಸ್ಥಾನಮಾನ ಮತ್ತು ಸಾಮಾಜಿಕ ವ್ಯವಸ್ಥೆಯ ನಿಖರ ಅಂಕಿ ಅಂಶಗಳನ್ನು ಒಳಗೊಂಡ ದತ್ತಾಂಶವನ್ನು ಆಧರಿಸಿಯೇ ಒಳಮೀಸಲಾತಿ ಹಂಚಿಕೆ ನಿರ್ಧಾರ ಕೈಗೆತ್ತಿಕೊಳ್ಳಬೇಕು ಎಂದರು.

ಬಳಿಕ ಶ್ರೀ ಶಿವಪ್ರಕಾಶ್ ಮಹಾರಾಜರು ಮಾತನಾಡಿ 2011ರ ನಂತರ ಜನಗಣತಿ ನಡೆದಿರುವುದಿಲ್ಲ ಬಂಜಾರಾ ಜನಾಂಗದಲ್ಲಿ 'ಗೂಳೆ ಹೋಗುವುದು' ಒಂದು ಪಿಡಗಾಗಿದ್ದು. ಜನಸಂಖ್ಯಾ ಮಾಹಿತಿ ಇಲ್ಲದೆ ಮತ್ತು ಜಾತಿ ಜನಗಣತಿ ಆಗದೆ ಒಳಮೀಸಲಾತಿ ಮತ್ತು ವರ್ಗೀಕರಣದ ವಿಚಾರ ಅಥವಾ ಪ್ರಯತ್ನ ಸಮಂಜಸವಾಗಿರುವುದಿಲ್ಲ. ರಾಜ್ಯ ಸರ್ಕಾರವು ರಾಜ್ಯದಲ್ಲಿ ಇರುವ ಎಲ್ಲ ಬಂಜಾರಾ ಜನಾಂಗದ ಜನಗಣತಿಯನ್ನು ಅಚ್ಚುಕಟ್ಟಾಗಿ ಮತ್ತು ಅತಿ ಹೆಚ್ಚಿನ ಕಾಳಜಿವಹಿಸಿ ನಡೆಸಬೇಕು ಮತ್ತು ಅದರ ದತ್ತಾಂಶವನ್ನು ಯಾವುದೇ ಲೋಪ ವಿಲ್ಲದೆ ಪಾರದರ್ಶಕವಾಗಿ ಬಹಿರಂಗಗೊಳಿಸಬೇಕು ಎಂದರು.



ನಂತರ ಸರ್ದಾರ್ ಸೇವಾಲಾಲ್ ಸ್ವಾಮೀಜಿ ರವರು ಮಾತನಾಡಿ ಪರಿಶಿಷ್ಟ ಸಮುದಾಯಗಳ ನಡುವೆ ಒಳಮಿಸಲಾತಿ ಮತ್ತು ವರ್ಗೀಕರಣದ ವಿಷಯಗಳಲ್ಲಿ ಹುಟ್ಟುತ್ತಿರುವ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಲು ಮತ್ತು ಸಮುದಾಯಗಳ ನಡುವೆ ಯಾವುದೇ ದ್ವೇಷ ಭಾವನೆ ಹುಟ್ಟದೇ ಇರುವ ಹಾಗೆ ರಾಜ್ಯ ಸರ್ಕಾರ ಸರಿಯಾದ ನಿರ್ಧಾರವನ್ನ ತೆಗೆದುಕೊಳ್ಳಬೇಕು. ಮೀಸಲಾತಿ, ಒಳಮೀಸಲಾತಿ ಮತ್ತು ವರ್ಗೀಕರಣದ ಅಧ್ಯಯನ ಪರಿಶಿಷ್ಟರ ನಡುವೆ ಇರುವ ಐಕ್ಯತೆಗೆ ಯಾವುದೇ ಧಕ್ಕೆ ತರಬಾರದು. ಎಲ್ಲ ಪರಿಶಿಷ್ಟರ ಹಿತವನ್ನ ಕಾಪಾಡಲು ಸರ್ಕಾರ ಸರಿಯಾದ ಕ್ರಮವಹಿಸಬೇಕು ಎಂದರು.

ಈ ಧರಣಿ ಸತ್ಯಾಗ್ರಹದಲ್ಲಿ ಕರ್ನಾಟಕ ರಾಜ್ಯದ ಬಂಜಾರಾ ಧರ್ಮಗುರುಗಳ ಮಹಾಸಭಾ, ಮತ್ತು ನೂರಾರು ಗೋರ್ಜನಾಂಗದ ಕಾರ್ಯಕರ್ತರು ಮತ್ತು ಸ್ವಾಭಿಮಾನಿ ಗೋರ್ಬಂಜಾರಾ ಜನಾಂಗದ, ಹಿತ ಚಿಂತಕರು ಭಾಗವಹಿಸಿದ್ದರು.

## ಜಾಗೃತ ಅರಿವು ಸಪ್ತಾಹ

**ಬೆಂಗಳೂರು:** ಭಾರತ ಸರ್ಕಾರದ ಕೇಂದ್ರೀಯ ಜಾಗೃತ ಆಯೋಗವು ಜಾಗೃತ ಅರಿವು ಸಪ್ತಾಹ-2024 ನ್ನು ಹಮ್ಮಿಕೊಂಡಿದೆ. ಈ ಸಪ್ತಾಹದಂತೆ ನಗರದ ಜಾಲಹಳ್ಳಿಯ ಬಿಇಎಲ್ ಬೆಂಗಳೂರು ಸಂಕೀರ್ಣದ ವತಿಯಿಂದ ಸತ್ಯ ನಿಷ್ಠೆಯ ಸಂಸ್ಕೃತಿಯಿಂದ ರಾಷ್ಟ್ರದ ಸಮೃದ್ಧಿ ಎಂಬ ವಾಕ್ಯದಡಿ ಜಾಗೃತಿ ಅರಿವು ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು.ಈ ಮ್ಯಾರಥಾನ್ ನಲ್ಲಿ ಭಾರತ ಎಲೆಕ್ಟ್ರಾನಿಕ್ಸ್ ನ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಈ ಅರಿವು ಕಾರ್ಯಕ್ರಮ ಆಯೋಜಿಸಲಾಗಿತ್ತು.ಈ ಜಾಥಾದಲ್ಲಿ ಬಿಇಎಲ್ ಶಿಕ್ಷಣ ಸಂಸ್ಥೆಗಳ ಸುಮಾರು 350 ಕ್ಕೂ ಹೆಚ್ಚು ಮಕ್ಕಳು ಭಾಗಿಯಾಗಿದ್ದರು. ಬಿಇಎಲ್ ಸರ್ಕಲ್, ವಿದ್ಯಾರಣ್ಯಪುರ, ದೊಡ್ಡಬೊಮ್ಮಸಂದ್ರ ಕೆರೆ ಸೇರಿದಂತೆ ಹಲವೆಡೆ ಸಾಗಿ ಜನರಿಗೆ ಅರಿವು ಮೂಡಿಸಲಾಯಿತು. ಈ ಅರಿವು ಜಾಥಾದಲ್ಲಿ ಪ್ರಮುಖವಾಗಿ ಭ್ರಷ್ಟಾಚಾರದ ವಿರೋಧಿಸಿ ಭಿತ್ತಿಚಿತ್ರ ಪ್ರದರ್ಶಿಸಲಾಯಿತು. ಈ ಜಾಗೃತಿ ಜಾಥಾಕ್ಕೆ ಬಿಇಎಲ್ ನ ಮಿಲ್ಟ್ರಿ ಕಮ್ಯೂನಿಕೇಷನ್ಸ್ ವಿಭಾಗದ ಜನರಲ್ ಮ್ಯಾನೇಜರ್ ಕಾಮೇಶ್ ಕಸಾನಾ ಚಾಲನೆ ನೀಡಿದರು. ವಿಜಿಲನ್ಸ್ ವಿಭಾಗದ ಎಜಿಎಂ ಎಚ್ ಎಸ್ ಕೇಶವರಾಜ್, ಈ ಜಾಗೃತಿ ಜಾಥಾಕ್ಕೆ ವಿಜಿಲನ್ಸ್ ಡಿಪಾರ್ಟ್ಮೆಂಟ್ ನ ಸಿನಿಯರ್ ಡಿಜಿಎಂ ವಾಣಿಶ್ರೀ ಅತಿಥಿಗಳಾಗಿ ಆಗಮಿಸಿದ್ದರು.

**ನಾನೂರಕ್ಕೂ ಹೆಚ್ಚು ಮಂದಿಗೆ ವಾಂತಿಬೇಧಿ**

# ಕಲುತ ನೀರು ಸೇವನೆ ; ಒಂದೇ ವಾರದಲ್ಲಿ ಎರಡು ಸಾವು

**ಹುಳಿಯಾರು:** ಹಂದನಕೆರೆ ಹೋಬಳಿಯ ಸೋರಲಮಾವು ಗ್ರಾಮದಲ್ಲಿ ಕಲುತ ನೀರು ಸೇವನೆಯಿಂದ ಒಂದೇ ವಾರದಲ್ಲಿ ಎರಡು ಸಾವು ಸಂಭಸಿರುವ ಘಟನೆ ನಡೆದಿದೆ. ಸ್ಥಳಕ್ಕೆ ಶಾಸಕ ಸಿ.ಬಿ.ಸುರೇಶ್‌ಬಾಬು, ಉಪ-ಭಾಗಾಧಿಕಾರಿ ಸಪ್ತಶ್ರೀ ಹಾಗೂ ತಹಸೀಲ್ದಾರ್ ಕೆ ಪುರಂದರ್ ಭೇಟಿ ನೀಡಿ ಸಮಸ್ಯೆಯ ಮಾತಿ ಪಡೆದುಕೊಂಡರು. ಹಂದನಕೆರೆ ಪೊಲೀಸ್ ಠಾಣೆಯ ಪಿಎಸ್ಸೈ ಸ್ಸೈಲರೇಂದ್ರರವರು, ಪ್ರಕರಣ ದಾಖಲಿಸಿಕೊಂಡು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ.

ಮೃತ ದುರ್ದೈಗಳು ರಂಗಮ್ಮ (55) ಹಾಗೂ ಭುವನೇಶ್ವರಿ (13) ಇಬ್ಬರೂ ಇದೇ ಗ್ರಾಮದ ಒಂದೇ ಟ್ಯಾಂಕ್ ನಿಂದ ನೀರು ಸೇಸುತ್ತಿದ್ದವರು. ಮಂಗಳವಾರ ಅಸುನೀಗಿದ ರಂಗಮ್ಮನವರು ಅವರ ಮಗ ರಮೇಶ ಮತ್ತು ಇಬ್ಬರು ಮೊಮ್ಮಕ್ಕಳನ್ನು ಅಗಲಿದ್ದಾರೆ. ಈಗ್ಗೆ ಎರಡು ವರ್ಷದ ಂದೆ ರಮೇಶ್ ರವರ ಪತ್ನಿ ಕೂಡ ಕಾಲುಬಿದ್ದು ನಿಧನರಾಗಿದ್ದರು. ಆ ಕುಟುಂಬದ ಗೃಹಕಾರ್ಯಗಳಿಗಿದ್ದ ಏಕೈಕ ಆಧಾರ ಮೃತರಾಗಿರುವ ರಂಗಮ್ಮನೇ ಆಗಿದ್ದರು.

ಮೂರು ದಿನಗಳ ಂದೆ ಅಸುನೀಗಿದ ಭುವನೇಶ್ವರಿ ಎಂಟನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ದ್ಯಾರ್ಥಿನಿ. ಈಕೆಯ ಕುಟುಂಬವೂ ಅದೇ ಟ್ಯಾಂಕ್ ನಿಂದ ನೀರು ಕುಡಿಯುತ್ತಿದ್ದುದಾಗಿ ಅವರ ತಾು ತಿಳಿಸಿದರು. ಭುವನೇಶ್ವರಿ ತನ್ನ ತಮ್ಮ ಹಾಗೂ ತಂದೆ-ತಾುಯನ್ನು ಅಗಲಿದ್ದಾರೆ.

ತಾಲ್ಲೂಕು ಆರೋಗ್ಯಾಧಿಕಾರಿ ಡಾ ಯಶ್ವಂತ್, ಆರಕ್ಷಕ ವೃತ್ತ ನಿರೀಕ್ಷಕ ಎಫ್.ಕೆ.ನದಾಫ್ ಮತ್ತು ಪಂಚಾಯತ್ ಇಲಾಖೆಯ ಇತರೆ ಅಧಿಕಾರಿಗಳು ಭೇಟಿ ಕೊಟ್ಟು ತಡರಾತ್ರಿಯವರೆಗೂ ಪರಿಶೀಲನೆ ನಡೆಸಿದ್ದಾರೆ. ಗ್ರಾಮಸ್ಥರು ಕುಡಿಯುವುದಕ್ಕಾಗಿ ಮತ್ತು ಅಡುಗೆ ಮಾಡುವುದಕ್ಕಾಗಿ ಬಳಸುತ್ತಿದ್ದ ನೀರಿನ ಸ್ಯಾಂಪಲ್‌ಗಳನ್ನು ಸಂಗ್ರಸಿ, ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಸಿಕೊಡುತ್ತಿರುವುದಾಗಿ ಡಾ ಯಶ್ವಂತ್ ತಿಳಿಸಿದರು.

### ಜೆಜೆಎಂ ಕಾಮಗಾರಿ ಅವಾಂತರ





**ಊರಿಗೆ, ಜೆಜೆಎಂ ಯೋಜನೆಯಡಿ ಮನೆ ಮನೆ ಗಂಗೆ ಮೂಲಕ ಗ್ರಾಮದ ಮನೆ ಮನೆಗೂ ನೀರು ಕಲ್ಪಿಸುವ ಕಾಮಗಾರಿಯ ಎಡವಟ್ಟುಗಳೇ ಇಷ್ಟೆಲ್ಲಕ್ಕೂ ಕಾರಣ ಎಂದು ಗ್ರಾಮಸ್ಥರು ದೂರುತ್ತಾರೆ. ಜೆಜೆಎಂ ಕಾಮಗಾರಿಯ ಇಂಜಿನಿಯರ್ ಹಾಗೂ ಗುತ್ತಿಗೆದಾರ ಇಬ್ಬರೂ ಇಷ್ಟೆಲ್ಲ ದುರಂತಕ್ಕೆ ಕಾರಣ ಎಂದು ತಹಸೀಲ್ದಾರ್ ಹಾಗೂ ಉಪ-ಭಾಗಾಧಿಕಾರಿಗಳ ಬಳಿ ಗ್ರಾಮಸ್ಥರು ನೇರವಾಗಿ ದೂರಿದರು. ಒಡೆದ ಪೈಪುಗಳು, ಬಾಯ್ತೆರೆದ ಗುಂಡಿಗಳು, ಪೈಪ್ ಅಳವಡಿಸಲು ಬಗೆದ ಗುಂಡಿಗಳನ್ನು ಸರಿಯಾಗಿ ಮುಚ್ಚದೆ ಹಾಗೇ ಬಿಟ್ಟುಹೋದದ್ದರ ಪರಿಣಾಮ ಗ್ರಾಮದ ಶುದ್ಧ ಕುಡಿಯುವ ನೀರಿನ ಸಂಸ್ಕರಣಾ ಘಟಕಕ್ಕೆ ಪೈಪುಗಳ ಮೂಲಕ ಹರಿಯುವ ನೀರಿನಲ್ಲಿ ಉದ್ದಕ್ಕೂ ಕಲ್ಮಶಮಿಶ್ರಿತಗೊಂಡಿದೆ. ಉದ್ದಕ್ಕೂ ಕಲುತಗೊಂಡಿರುವ ಆ ನೀರನ್ನು ಸಂಸ್ಕರಣಾ ಘಟಕ ಇನ್ನೆಷ್ಟು ಶುದ್ಧಗೊಳಿಸೀತು ಎಂದು ಗ್ರಾಮಸ್ಥರು ಪ್ರಶ್ನಿಸುತ್ತಿದ್ದಾರೆ. ಶುದ್ಧ ಕುಡಿಯುವ ನೀರಿನ ಸಂಸ್ಕರಣಾ ಘಟಕಕ್ಕೆ ತಹಸೀಲ್ದಾರ್ ಕೆ ಪುರಂದರ್ ರವರು ಭೇಟಿಕೊಟ್ಟು, ಈ ನೀರಿನ ಮಾದರಿಗಳನ್ನು ಸಂಗ್ರಸಿ ಪ್ರಯೋಗಾಲಯಕ್ಕೆ ಕಳಿಸಿ, ಪರೀಕ್ಷಿಸಿದ ನಂತರ ಇದರ ಬಗ್ಗೆ ಸ್ಪಷ್ಟ ಮಾತಿ ಸಿಗಲಿದೆ ಎಂದರು.**

### ಆರೋಗ್ಯ ತಪಾಸಣಾ ಶಿಬಿರ

**ಹಂದನಕೆರೆ ಹೋಬಳಿಗೇ ದೊಡ್ಡ ಊರಾಗಿರುವ ಸೋರಲಮಾವು ಗ್ರಾಮದಲ್ಲಿ ಸರಿಸುಮಾರು 900 ಕುಟುಂಬಗಳಿದ್ದು, ಸುಮಾರು 400 ಕುಟುಂಬಗಳ ಸದಸ್ಯರು ತೀವ್ರತರವಾದ ವಾಂತಿ-ಬೇಧಿಗೆ ತುತ್ತಾಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಇನ್ನೂ ಕೆಲವರು ಈಗಲೂ ವಾಂತಿ-ಬೇಧಿಯಿಂದ ಬಳಲುತ್ತಿದ್ದಾರೆ. ಕಲುತ ನೀರಿನ ಸೇವನೆಯೇ ಇದಕ್ಕೆ ಕಾರಣ ಎಂದು ಗ್ರಾಮಸ್ಥರು, ಗ್ರಾಮ ಆಡಳಿತ ಅಧಿಕಾರಿ ಹಾಗೂ ಕಂದಾಯ ನಿರೀಕ್ಷಕ ಮತ್ತು ಪಿಡಿಒ ನೇನ್ ರುದ್ದ ಆಕ್ರೋಶ ವ್ಯಕ್ತಪಡಿಸಿದರು. ಉಪ-ಭಾಗಾಧಿಕಾರಿ ಸಪ್ತಶ್ರೀಯವರು, ಗ್ರಾಮದ ಎರಡೂ ಸಾವುಗಳಿಗೆ ಕಾರಣ ಕಲುತ ನೀರಿನ ಸೇವನೆ ಎಂದು ಮೇಲ್ನೋಟಕ್ಕೆ ಹೇಳಲಾಗುತ್ತಿದೆ. ಆದರೆ, ಸೂಕ್ತ ಕಾರಣ ಇನ್ನೂ ಸಿಕ್ಕಿಲ್ಲ. ನಾವು ಆಸ್ಪತ್ರೆ ಮತ್ತು ಸಂಬಂಧಿಸಿದ ಎಲ್ಲ ಇಲಾಖೆಗಳಿಂದ ವರದಿ ಕೇಳಿದ್ದೇವೆ. ವರದಿ ಬಂದ ನಂತರ ಸ್ಪಷ್ಟ ಮಾತಿ ಕೊಡಲಾಗುವುದು. ಅದಕ್ಕೂ ಮೊದಲು ಕೂಡಲೇ ಗ್ರಾಮದ ಪ್ರತಿ ಸದಸ್ಯರ ಆರೋಗ್ಯ ತಪಾಸಣೆ ನಡೆಸುವುದು ಮತ್ತು ಸೂಕ್ತ ಚಿಕಿತ್ಸೆ ಹಾಗೂ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವುದು ನಮ್ಮ ಆದ್ಯತೆಯಾಗಿದೆ ಎಂದರು.**

# ಸ್ವಯಂ ಸೇವಕ ಗೃಹರಕ್ಷಕರ ನೇಮಕಾತಿಗೆ ಅರ್ಜಿ

**ಬೆಂಗಳೂರು ಗ್ರಾಮಾಂತರ:** ಗೃಹರಕ್ಷಕ ದಳದ ವತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಖಾಲಿ ಇರುವ 586 ಸ್ವಯಂ ಸೇವಕ ಗೃಹರಕ್ಷಕರ ಸ್ಥಾನಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 14 ಘಟಕಗಳಿದ್ದು, ಅದರಲ್ಲಿ ಹೊಸದಾಗಿ ಪರಪ್ಪನ ಅಗ್ರಹಾರ, ವರ್ತೂರು, ಚಿಕ್ಕಜಾಲ, ಚಿಕ್ಕಬಾಣಾವರ, ಕೊತ್ತನೂರು, ವೈಟ್ ಫೀಲ್ಡ್, ಹೆಬ್ಬಗೋಡಿ ಈ ಘಟಕಗಳು ನೂತವಾಗಿ ಆರಂಭಿಸಬೇಕಾಗಿರುತ್ತದೆ.

ಘಟಕಗಳ ಹೆಸರುಗಳು ಮತ್ತು ಖಾಲಿ ಇರುವ ಗೃಹರಕ್ಷಕದ ಸಂಖ್ಯೆ ಹಾಗೂ ಖಾಲಿ ಇರುವ ಸ್ಥಳಗಳು:- ಹೊಸಕೋಟೆ- 06, ದೊಡ್ಡಬಳ್ಳಾಪುರ- 09, ನೆಲಮಂಗಲ -09, ದಾಬಸ್ಪೇಟೆ -09 ರಾಜಾನುಕುಂಟೆ -11, ಆವಲಹಳ್ಳಿ - 08, ದೊಡ್ಡಬೆಳವಂಗಲ - 23, ದೇವನಹಳ್ಳಿ - 05, ಆನೇಕಲ್- 04, ಅತ್ತಿಬೆಲೆ- 03, ಮಾದನಾಯಕನಹಳ್ಳಿ- 03, ಸರ್ಜಾಪುರ- 07, ವಿಜಯಪುರ 07 ಹಾಗೂ ನೂತನ ಘಟಕಗಳು:- ಪರಪ್ಪನ ಅಗ್ರಹಾರ- 70, ವರ್ತೂರು- 70, ಚಿಕ್ಕಜಾಲ- 65, ಚಿಕ್ಕಬಾಣಾವರ- 70, ಕೊತ್ತನೂರು- 65, ವೈಟ್‌ಫೀಲ್ಡ್- 70, ಹೆಬ್ಬಗೋಡಿ- 70 ಸೇರಿದಂತೆ ಒಟ್ಟು 586 ಸ್ಥಳಗಳು ಖಾಲಿ ಇರುತ್ತವೆ.

ಕಂಪ್ಯೂಟರ್ ಟೈಪಿಂಗ್ (ಕನ್ನಡ ಮತ್ತು ಇಂಗ್ಲೀಷ್), ಡ್ರೈವರ್ಸ್, ಅಡುಗೆ ಭಟ್ಟರು. ಕಾರ್ಪೆಂಟರ್, ಎಲೆಕ್ಟ್ರೀಷಿಯನ್, ಪೇಂಟರ್, ಜೆಸಿಬಿ ಡ್ರೈವರ್ಸ್, ಟೆಂಟಪಿಕ್ಕಿಂಗ್, ಸ್ವಿಮ್ಮರ್ಸ್. ವೆಲ್ಡರ್ಸ್, ಗಾರ್ಡನರ್ಸ್, ಮೆಕಾನಿಕ್, ದೋಬಿ ಮತ್ತು ಸ್ಕಬಾ ಡೈವಿಂಗ್, ಪ್ಲಂಬರ್ ರವರುಗಳಿಗೆ ಆದ್ಯತೆ ನೀಡಲಾಗುವುದು.

ವಿದ್ಯಾರ್ಹತೆ:- 10ನೇ ತರಗತಿ ಉತ್ತೀರ್ಣ ಆಗಿರಬೇಕು. 19 ವರ್ಷದಿಂದ 50 ವರ್ಷದೊಳಗಿರಬೇಕು. ದೈಹಿಕ ದೃಢಕಾಯರಾಗಿರಬೇಕು. ಯಾವುದೇ ದೈಹಿಕ ನ್ಯೂನತೆ ಇರಬಾರದು. ಅರ್ಜಿ ನಮೂನೆ ಪಡೆಯುವ ಸಂದರ್ಭದಲ್ಲಿ ಜನ್ಮ ದಿನಾಂಕವುಳ್ಳ ಶಾಲೆಯ ಒರಿಜಿನಲ್ ಟಿ.ಸಿ ಅಥವಾ ಒರಿಜಿನಲ್ ಅಂಕಪಟ್ಟಿ ತರಬೇಕು.

ಬೆಂಗಳೂರಿನ ಸಮಾದೇಷ್ಟರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಗೃಹರಕ್ಷಕದಳ ಕಛೇರಿ, ಶೇಷಾದ್ರಿ ರಸ್ತೆ, ಸ್ವಾತಂತ್ರ್ಯ ಉದ್ಯಾನವನ ಎದುರು, ಬೆಂಗಳೂರು-560009 ಇಲ್ಲಿ ಅಕ್ಟೋಬರ್ 18 ರಿಂದ ನವ್ಹೆಂಬರ್ 16 ರ ವರೆಗೆ ಮಧ್ಯಾಹ್ನ 2:30 ರಿಂದ ಸಂಜೆ 5:00 ಗಂಟೆಯ ವರೆಗೆ ಉಚಿತವಾಗಿ ಅರ್ಜಿಗಳನ್ನು ವಿತರಿಸಲಾಗುವುದು.

ವಿಶೇಷ ಸೂಚನೆ:- ಗೃಹರಕ್ಷಕದಳದ ಸಂಸ್ಥೆಯು ಸ್ವಯಂ ಸೇವಕ ಸಂಸ್ಥೆಯಾಗಿದ್ದು, ಈ ಸಂಸ್ಥೆಯಲ್ಲಿ 03 ವರ್ಷಗಳ ಅವಧಿಗೆ ಮಾತ್ರ ಸೇವೆ ಸಲ್ಲಿಸಬಹುದಾಗಿರುತ್ತದೆ. ಇದು ಖಾಯಂ ನೌಕರಿಯಾಗಿರುವುದಿಲ್ಲ. ಯಾವುದೇ ರೀತಿಯ ಮಾಸಿಕ ಸಂಬಳ/ವಿಶೇಷ ಭತ್ಯೆಗಳನ್ನು ಈ ಸಂಸ್ಥೆಯು ನೀಡುವುದಿಲ್ಲ. ಸರ್ಕಾರವು ನಿಗಧಿ ಪಡಿಸಿರುವ ಗೌರವ ಧನವನ್ನು ಕರ್ತವ್ಯ ನಿರ್ವಹಿಸುವ ಅವಧಿಗೆ ಮಾತ್ರ ಪಾವತಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ- 080-22263447 ಗೆ ಸಂಪರ್ಕಿಸಬಹುದು ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಗೃಹರಕ್ಷಕದಳದ ಕಮಾಂಡೆಂಟ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೂ.4000 ಕೋಟಿವರೆಗಿನ ಐಪಿಓಗೆ ಸೆಬಿಯಲ್ಲಿ ಡಿಆರ್‌ಎಚ್ಪಿ ಸಲ್ಲಿಸಿದ ಎಸ್‌ಎಂಪಿಪಿ




ಯುದ್ದಸಾಮಗ್ರಿ, ಘಟಕಗಳು, ವೈಯಕ್ತಿಕ ರಕ್ಷಣಾ ಉತ್ಪನ್ನಗಳು ಮತ್ತು ಭೂಮಿ, ವಾಯು ಹಾಗೂ ನೌಕಾ ವಿಭಾಗಗಳಿಗೆ ರಕ್ಷಣಾ ಕಿಟ್ ಗಳು ಸೇರಿದಂತೆ ರಕ್ಷಣಾ ಸಾಧನಗಳನ್ನು ಒದಗಿಸುವ ಭಾರತೀಯ ವಿನ್ಯಾಸಕರು ಮತ್ತು ತಯಾರಕರು ಆಗಿರುವ ಎಸ್‌ಎಂಪಿಪಿ ಲಿಮಿಟೆಡ್ ಕಂಪನಿಯು ತನ್ನ ಡ್ರಾಫ್ಟ್ ರೆಡ್ ಹೆರಿಂಗ್ ಪ್ರಾಸ್ಪೆಕ್ಟಸ್ (ಡಿಆರ್‌ಎಚ್ಪಿ) ಅನ್ನು ಮಾರುಕಟ್ಟೆ ನಿಯಂತ್ರಕರಾದ ಸೆಕ್ಯುರಿಟೀಸ್ ಅಂಡ್ ಎಕ್ಸ್ ಚೇಂಜ್ ಬೋರ್ಡ್ ಆಫ್ ಇಂಡಿಯಾಗೆ (ಸೆಬಿ) ಸಲ್ಲಿಸಿದೆ. ಕಂಪನಿಯು 40000 ಮಿಲಿಯನ್ (4000 ಕೋಟಿ) ವರೆಗಿನ ಒಟ್ಟು ಮೊತ್ತದ ಈಕ್ವಿಟಿ ಷೇರುಗಳ (ಪ್ರತಿ ಮುಖಬೆಲೆ 2) ಮಾರಾಟದಿಂದ ಇನಿಷಿಯಲ್ ಪಬ್ಲಿಕ್ ಆಫರಿಂಗ್ ಮೂಲಕ ಹಣವನ್ನು ಸಂಗ್ರಹಿಸಲು ಯೋಜಿಸಿದೆ. ಈ ಕೊಡುಗೆಯು 5800 ಮಿಲಿಯನ್ (580 ಕೋಟಿ) ವರೆಗಿನ ಹೊಸ ಈಕ್ವಿಟಿ ಷೇರುಗಳನ್ನು ಒಳಗೊಂಡಿದೆ (ತಾಜಾ ಸಂಚಿಕೆ) ಮತ್ತು ಒಟ್ಟು 34200 ಮಿಲಿಯನ್ (3420 ಕೋಟಿ) ವರೆಗಿನ ಮಾರಾಟ ಮಾಡುವ ಷೇರುದಾರರ (ಸೆಲ್ಲಿಂಗ್ ಷೇರ್ ಹೋಲ್ಡರ್ ಗಳು) ಮಾರಾಟದ ಆಫರ್ (ಆಫರ್ ಫಾರ್ ಸೇಲ್) ಹೊಂದಿದೆ. ರೆಡ್ ಹೆರಿಂಗ್ ಪ್ರಾಸ್ಪೆಕ್ಟಸ್ ಮೂಲಕ ನೀಡಲಾಗುವ ಈಕ್ವಿಟಿ ಷೇರುಗಳನ್ನು ಬಿಎಸ್‌ಇ ಲಿಮಿಟೆಡ್ (ಬಿಎಸ್‌ಇ) ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (ಎನ್‌ಎಸ್‌ಇ) ನಲ್ಲಿ ಪಟ್ಟಿ ಮಾಡಲು ಪ್ರಸ್ತಾಪಿಸಲಾಗಿದೆ. ಆಕ್ಸಿಸ್ ಕ್ಯಾಪಿಟಲ್ ಲಿಮಿಟೆಡ್, ಐಸಿಐಸಿಐ ಸೆಕ್ಯುರಿಟೀಸ್ ಲಿಮಿಟೆಡ್, ಐಐಎಫ್ಎಲ್ ಸೆಕ್ಯುರಿಟೀಸ್ ಲಿಮಿಟೆಡ್, ಜೆಎಂ ಫೈನಾನ್ಶಿಯಲ್ ಲಿಮಿಟೆಡ್ ಮೋತಿಲಾಲ್ ಓಸ್ವಾಲ್ ಇನ್ವೆಸ್ಟ್ಮೆಂಟ್ ಅಡ್ವೈಸರ್ಸ್ ಲಿಮಿಟೆಡ್ ಈ ಸಂಚಿಕೆಯ ಬುಕ್ ರನ್ನಿಂಗ್ ಲೀಡ್ ಮ್ಯಾನೇಜರ್‌ಗಳು ಆಗಿದ್ದಾರೆ.

## ಡಾರ್ಕ್ ಚಾಕಲೇಟ್ ಕೇಕ್

### ಪಾಕ ಶಾಲೆ



### ಬೇಕಿರುವ ಸಾಮಗ್ರಿ

ಮೈದಾ 1/2 ಕೆಜಿ, ಅಡುಗೆ ಸೋಡಾ 3/4 ಚಮಚ, ಮೊಟ್ಟೆ 2, ಎಣ್ಣೆ 6 ಚಮಚ, ನೀರು ಬೇಕಾದಷ್ಟು, ಕೋಕಾ ಪೌಡರ್ 1/4 ಚಮಚ, ಉಪ್ಪು 2 ಚಿಟಿಕೆಯಷ್ಟು, ಸಕ್ಕರೆ 75 ಗ್ರಾಂ, ವೆನಿಲ್ಲಾ ರಸ 1 ಚಮಚ, ಟಾಪಿಂಗ್, ಸಕ್ಕರೆ ಸ್ವಲ್ಪ, ವಿಪ್ಪಡ್ ಕ್ರೀಮ್ 1/4 ಕಪ್, ಡಾರ್ಕ್ ಚಾಕಲೇಟ್ 2 ಚಮಚ

### ಮಾಡುವ ವಿಧಾನ

ಒಂದು ಬೌಲ್ಗೆ ಮೈದಾ, ಕೋಕಾ ಪೌಡರ್, ಅಡುಗೆ ಸೋಡಾ, ಉಪ್ಪು ಹಾಕಿ ಮಿಕ್ಸ್ ಮಾಡಿ ಇಡಿ. ಮತ್ತೊಂದು ಬೌಲ್ನಲ್ಲಿ ಮೊಟ್ಟೆಯ ಬಿಳಿ ಹಾಕಿ 3-5 ನಿಮಿಷ ಚೆನ್ನಾಗಿ ಬೀಟ್ ಮಾಡಿ. ನಂತರ ಪುಡಿ ಮಾಡಿಟ್ಟ ಸಕ್ಕರೆ ಹಾಕಿ ಮತ್ತೆ 5 ನಿಮಿಷ ಮಿಕ್ಸ್ ಮಾಡಿ. ನಂತರ ಎಣ್ಣೆ, ವೆನಿಲ್ಲಾ ರಸ, ಮೊಟ್ಟೆಯ ಹಳದಿ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ. ಈಗ ಕೇಕ್ ಮಿಶ್ರಣವನ್ನು ಮೊಟ್ಟೆಯ ಮಿಶ್ರಣ ಜೊತೆ ಹಾಕಿ ಮಿಕ್ಸ್ ಮಾಡಿ. ಮೈಕ್ರೋವೇವ್ ಅನ್ನು 180 ಡಿಗ್ರಿಗೆ ಬಿಸಿ ಮಾಡಿ. ಈಗ ಬೇಕಿಂಗ್ ಟಿನ್ಗೆ ಪಾರ್ಚ್ ಮೆಂಟ್ ಪೇಪರ್ ಹಾಕಿ ಅದರ ಮೇಲೆ ಕೇಕ್ ಮಿಶ್ರಣ ಸುರಿದು 20-25 ನಿಮಿಷ ಬೇಯಿಸಿ. ಈಗ ಕಡಿಮೆ ಉರಿಯಲ್ಲಿ ಸಕ್ಕರೆ ಪಾಕ ತಯಾರಿಸಿ. ಕೇಕ್ ಬೆಂದ ಮೇಲೆ ಅದನ್ನು ತೆಗೆದು ತಣ್ಣಗಾಗಲು ಬಿಡಿ. ನಂತರ ಕೇಕ್ ಮೇಲೆ ಗೆರೆ ಎಳೆದು ಸಕ್ಕರೆ ಪಾಕವನ್ನು ಸುರಿಯಿರಿ. ಸಕ್ಕರೆ ಪಾಕ ಸುರಿದ ಮೇಲೆ ವಿಪ್ಪಡ್ ಕ್ರೀಮ್ ಅನ್ನು ದಪ್ಪವಾಗಿ ಹರಡಿ. ಅದರ ಮೇಲೆ ಚೆರ್ರಿ ಹಾಗೂ ಚಾಕಲೇಟ್ ಚಿಪ್ಸ್ ಇಡಿ. ನಂತರ ಕರಗಿದ ಡಾರ್ಕ್ ಚಾಕಲೇಟ್ ಹಾಕಿ 10 ನಿಮಿಷ ಬಿಟ್ಟು ಫ್ರಿಡ್ಜ್ನಲ್ಲಿಡಿ. ನಂತರ ಕೇಕ್ ಮೇಲೆ ಕೋಕಾಪುಡಿ ಹಾಗೂ ಚಾಕಲೇಟ್ ಹೂವಿನಿಂದ ಅಲಂಕರಿಸಿದರೆ ಕೇಕ್ ರೆಡಿ.

## ಮಧುಮೇಹಕ್ಕೆ ಮನೆ ಮದ್ದು ಮಜ್ಜಿಗೆ..

### ಹೆಲ್ತ್ ಟಿಪ್ಸ್



ಮಧುಮೇಹ.. ಇದು ಇತ್ತೀಚೆಗೆ ಎಲ್ಲರನ್ನು ಕಾಡುತ್ತಿರುವ ಸಮಾನ್ಯ ಆರೋಗ್ಯ ಸಮಸ್ಯೆಯಾಗಿ ಪರಣಮಿಸಿದೆ. ಹುಟಗ್ಗಿದ ಮಗುವಿನಿಂದ ಹಿಡಿದು, ವಯಸ್ಸಾದವರ ತನಕ ಮಧುಮೇಹ ವಯಸ್ಸಿನ ಭೇದವಿಲ್ಲದೆ ಕಾಡುತ್ತಿದೆ. ಮಧುಮೇಹವನ್ನು ಕಂಟ್ರೋಲ್ಗೆ ತರಲು ಔಷಧಿಗಳಿವೆಯಾದರೂ, ಇದನ್ನು ಗುಣಪಡಿಸಲು ಯಾವುದೇ ಔಷಧಿಗಳಿಲ್ಲ. ಇದು ಒಮ್ಮೆ ದೇಹವನ್ನು ಒಕ್ಕರಿಸಿದ ಮೇಲೆ ಇದರಿಂದ ಶಾಶ್ವತ ಮುಕ್ತಿ ಪಡೆಯಲು ಸಾಧ್ಯವಿಲ್ಲ. ಮಧುಮೇಹ ಇರುವವರು, ಎಷ್ಟೆ ಪ್ರಯತ್ನ ಪಟ್ಟರು ಶುಗರ್ ಕಂಟ್ರೋಲ್ಗೆ ಬರುವುದಿಲ್ಲ. ಹೀಗೆ ಶುಗರ್ ಕಂಟ್ರೋಲ್ಗೆ ಬರದೆ ಹೋದಾಗ ಜನರು ಅನೇಕ ಅತ್ಯಂತ ಭಯಾನಕ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗಬೇಕಾಗುತ್ತದೆ. ಶುಗರ್ ಕಂಟ್ರೋಲ್ ಮಾಡಲು ಸಾಧ್ಯವಿಲ್ಲದೆ ಹೋದಾಗ ಹೃದಯಾಘಾತ ಹಾಗೂ ಕಿಡಿ ವೈಪಲ್ಯದಂತಹ ಸಮಸ್ಯೆಗಳಿಗೆ ನೀವು ತುತ್ತಾಗಬಹುದು. ಅದರಿಂದಾಗಿ ಸಮಸಯ ಮೀರುವ ಮುನ್ನ ಮಧುಮೇಹವನ್ನು ಕಂಟ್ರೋಲ್ನಲ್ಲಿಡಿವುದು ಹೇಗೆ? ಔಷಧಿ ಸೇವಿಸಿದ ನಂತರವೂ ಕೂಡ ಕಂಟ್ರೋಲ್ಗೆ ಬರದ ಬ್ಲಡ್ ಶುಗರ್ ಅನ್ನು ಮನೆ ಮದ್ದುಗಲನ್ನು ಬಲಸಿ ಕಂಟ್ರೋಲ್ಗೆ ತರಬಹುದು ಅದು ಹೇಗೆ ತಿಳಿಯಲು ಮುಂದೆ ಓದಿ...

ಕೇವಲ ಔಷಧಗಳನ್ನು ಬಳಸಿ ಶುಗರ್ ಕಂಟ್ರೋಲ್ಗೆ ತರಬಲ್ಲೆವು ಅಂದರೆ ಅದು ತಪ್ಪು ಕಲ್ಪನೆ. ಕೆಲವೊಮ್ಮೆ ಔಷದಿ ಬಳಸಿದ ನಂತರವೂ ಕೂಡ ಶುಗರ್ ಹೆಚ್ಚಾಗಿರುತ್ತದೆ. ಇಂತಹ ಸಮಸಯದಲ್ಲಿ ಕೆಲವು ಟಿಪ್ಸ್ ಪಾಲಿಸುವುದರಿಂದ ನೀವು ಶುಗರ್ ಅನ್ನು ಕಂಟ್ರೋಲ್ಗೆ ತರಬಹುದು. ಆದರೆ, ನೀವು ಯಾವುದೇ ವೈದ್ಯರು ನೀಡಿರುವ ಔಷಧಿಗಳನ್ನು ತಪ್ಪಿಸದೆ ಈ ಮನೆ ಮದ್ದುಗಳನ್ನು ಪಾಲಿಸಬೇಕು. ಔಷಧಿ ಸೇವಿಸಿದ ನಂತರವೂ ಕೂಡ ನಿಮಗೆ ಶುಗರ್ ಕಂಟ್ರೋಲ್ಗೆ ಬರದೆ ಹೋದಾಗಿ ಈ ಮನೆಮದ್ದನ್ನು ಪ್ರಯತ್ನಿಸಿ.

ಕಂಡಿತಾ ಬೆಸ್ಟ್ ರಿಸಲ್ಟ್ಸ್ ಸಿಗುತ್ತದೆ. ಸಾಮಾನ್ಯವಾಗಿ ಎಲ್ಲರಿಗೂ ಮಜ್ಜಿಗೆ ಸೇವಿಸುವ ಅಭ್ಯಾಸವಿರುತ್ತದೆ. ಪ್ರತಿನಿತ್ಯ ಮಜ್ಜಿಗೆಯನ್ನು ಸೇವಿಸುವುದರಿಂದ ಅನೇಕ ಆರೋಗ್ಯ ಪ್ರಯೋಜನಗಳಿವೆ ಎಂಬುದು ಗೊತ್ತಿರುವ ಸಂಗತಿಯಾದರೂ, ಮಜ್ಜಿಗೆ ಮಧುಮೇಹಕ್ಕೂ ರಾಮಬಾಣ ಎಂಬ ಸತ್ಯ ನಿಮಗೆ ಗೊತ್ತಾ? ಹೌದು, ಮುಧುಮೇಹವನ್ನು ಪ್ರತಿನಿತ್ಯ ಈ ರೀತಿ ಸೇವಿಸುವುದರಿಂದ ನೀವು ಶುಗರ್ ಅನ್ನು ಕಂಟ್ರೋಲ್ನಲ್ಲಿ ಇಡಬಹುದು. ಅದಕ್ಕೆ ಕೇವಲ ಮಜ್ಜಿಗೆ ಅಲ್ಲ, ಮಜ್ಜಿಗೆಯೊಂದಿಗೆ ಈ ಪುಡಿಯನ್ನು ಬೆರೆಸಿ ಸೇವಿಸಬೇಕು. ಯಾವುದು ಆ ಪುಡಿ? ತಯಾರಿಸುವ ವಿಧಾನವನ್ನು ,ಮುಂದೆ ಓದಿ... ಹಾಗಲಕಾಯಿ ಕೂಡ ಶುಗರ್ ಕಂಟ್ರೋಲ್ ಮಾಡುವಲ್ಲಿ ಬೆಸ್ಟ್ ಅಂತಲೇ ಹೇಳಬಹುದು, ವೈದ್ಯರು ಕೂಡ ಶುಗರ್ ಅನ್ನು ಕಂಟ್ರೋಲ್ನಲ್ಲಿಡಲು ಪ್ರತಿನಿತ್ಯ ಒಂದು ಲೋಟ ಹಾಗಲಕಾಯಿ ಜ್ಯೂಸ್ ಸೇವಿಸಿ ಎಂದು ಹೇಳುತ್ತಾರೆ. ಆದ್ದರಿಂದ ಹಾಗಲಕಾಯಿಯನ್ನು ನೀವು ಸೇವಿಸುವ ಆಹಾರದಲ್ಲಿ ಪ್ರತಿನಿಗತ್ಯ ಸೇರಿಸುವುದು ಉತ್ತಮ. ಕೆಲಕವೊಬ್ಬರಿಗೆ ಹಾಗಲಕಾಯಿಯನ್ನು ಡೈರೆಕ್ಟ್ ಆಗಿ ಸೇವಿಸಲು ಕ್ಷಟ ಆಗುತ್ತದೆ. ಅದಕ್ಕಾಗಿಯೇ ಹಾಗಲಕಾಯಿಯನ್ನು ಈ ರೀತಿ ಸೇವಿಸಿ ನಿಮ್ಮ ಬ್ಲಡ್ ಶುಗರ್ ಅನ್ನು ಕಂಟ್ರೋಲ್ಗೆ ತರಬಹುದು.

## ಚಳಿಗಾಲದಲ್ಲಿ ಪುರುಷರ ಚರ್ಮದ ಆರೈಕೆ

### ಬ್ಯೂಟಿ ಟಿಪ್ಸ್



ಚಳಿ ಶುರುವಾಗಿದೆ. ಚರ್ಮದ ಆರೈಕೆ ಚಳಿಗಾಲದಲ್ಲಿ ಅತಿ ಮುಖ್ಯ. ಹುಡುಗಿಯರು ಚಳಿಗಾಲವಿರಲಿ ಮಳೆಗಾಲವಿರಲಿ ಚರ್ಮದ ಆರೈಕೆ ಮಾಡಿಕೊಳ್ತಾರೆ. ಆದ್ರೆ ಪುರುಷರು ಚರ್ಮದ ಆರೈಕೆಗೆ ಹೆಚ್ಚು ಮಹತ್ವ ನೀಡೋದಿಲ್ಲ. ಇದೇ ಕಾರಣಕ್ಕೆ ಚರ್ಮ ಸಂಬಂಧಿ ಸಮಸ್ಯೆಗೊಳಗಾಗ್ತಾರೆ. ಹಾಗಾಗಿ ಪುರುಷರು ಕೂಡ ಚಳಿಗಾಲದಲ್ಲಿ ಚರ್ಮದ ಆರೈಕೆ ಮಾಡಿಕೊಳ್ಳೋದು ಅಗತ್ಯ.

**ಸನ್ ಸ್ಕ್ರೀನ್:** ಮನೆಯಿಂದ ಹೊರಗೆ ಹೋಗುವ ಮೊದಲು ಸನ್ ಸ್ಕ್ರೀನ್ ಬಳಸಿ. ಸೂರ್ಯನ ಹಾನಿಕಾರಕ ಕಿರಣಗಳಿಂದ ರಕ್ಷಿಸಲು ಇದು ನೆರವಾಗುತ್ತದೆ.

**ಚಾರ್ಕೋಲ್ ಫೇಸ್ ವಾಶ್ ಬಳಸಿ:** ಚಾರ್ಕೋಲ್ ಫೇಸ್ ವಾಶ್ ಚರ್ಮದಲ್ಲಿರುವ ಕೊಳಕನ್ನು ಹೊರಹಾಕುತ್ತದೆ. ಫೇಸ್ ವಾಶ್ ಜೊತೆ ನೀವು ಚಾರ್ಕೋಲ್ ಸ್ಕಬ್ ಹಾಗೂ ಕ್ರೀಂ ಕೂಡ ಬಳಸಬಹುದು.

ಚರ್ಮದ ಆರೋಗ್ಯ ಕಾಪಾಡಲು ಆಗಾಗ ಮುಖವನ್ನು ತೊಳೆಯುತ್ತಿರಬೇಕು. ಹೊರಗಿನಿಂದ ಮನೆಗೆ ಬಂದ ಮೇಲೆ ತಕ್ಷಣ ಮುಖವನ್ನು ನೀರಿನಲ್ಲಿ ತೊಳೆಯಿರಿ. ಮುಖವನ್ನು ಸ್ವಚ್ಚಗೊಳಿಸುವುದ್ರಿಂದ ಚರ್ಮದ ಮೇಲಿರುವ ಕೊಳಕು ಹೊರ ಹೋಗುತ್ತದೆ. ಶುಷ್ಕ ಚರ್ಮ ಹೊಂದಿರುವ ಹುಡುಗ್ರು ಮಾಯಿಶ್ಚರೈಸರ್ ಕ್ರೀಂ ಹಚ್ಚಿ. ಇದು ಚರ್ಮದ ಆರೋಗ್ಯ ಕಾಪಾಡುವ ಜೊತೆಗೆ ಚರ್ಮ ತೇವಾಂಶದಿಂದ ಕೂಡಿರುವಂತೆ ಮಾಡುತ್ತದೆ.

## ಇಯರ್ ಆಫ್ ಲೆಜೆಂಡ್ಸ್ ಸಂಭ್ರಮಿಸಲು ಮೇಘಾಲಯ ಸಿದ್ಧ - 'ಶಿಲ್ಲಾಂಗ್ ಚರ್ರಿ ಬ್ಲಾಸಮ್ ಫೆಸ್ಟಿವಲ್' ಆರಂಭ




ಮೇಘಾಲಯವು ''ಇಯರ್ ಆಫ್ ಲೆಜೆಂಡ್ಸ್'' ಸಂಭ್ರಮಾಚರಣೆಗೆ ಸಿದ್ದವಾಗಿದ್ದು, ''ಶಿಲ್ಲಾಂಗ್ ಚರ್ರಿ ಬ್ಲಾಸಮ್ ಫೆಸ್ಟಿವಲ್ 2024'' ಹೊಸ ಆವೃತ್ತಿಯು ನವೆಂಬರ್ 15-16 ರಂದು ಶಿಲ್ಲಾಂಗ್ನ ಆರ್‌ಬಿಎಸ್‌ಎ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ನಡೆಯಲಿದೆ. ಸಂಸ್ಕೃತಿ, ಸಂಗೀತ ಮತ್ತು ನಿಸರ್ಗದ ಸಮ್ಮಿಳನವಾಗಿರುವ ಈ ಕಾರ್ಯಕ್ರಮವು ಭಾರತದ ಅತ್ಯಂತ ಆಕರ್ಷಕ ಸಾಂಸ್ಕೃತಿಕ ಕಾರ್ಯಕ್ರಮವಾಗಿದೆ. ಈ ವರ್ಷ ಚರ್ರಿ ಬ್ಲಾಸಮ್ ಸೌಂದರ್ಯವಷ್ಟೇ ಅಲ್ಲ, ಅಂತಾರಾಷ್ಟ್ರೀಯ ಸಂಗೀತಗಾರರು ಮತ್ತು ದೇಸೀ ಸ್ಟಾರ್‌ಗಳು ಕೂಡಾ ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿರುವುದರಿಂದ ವಿಶಿಷ್ಟ ಅನುಭವವನ್ನು ಇದು ಒದಗಿಸಲಿದೆ. ಹಬ್ಬದ ಮೊದಲ ದಿನದಂದು ಜನಪ್ರಿಯ ಸಂಗೀತಗಾರರ ಸಂಗೀತ ಕಾರ್ಯಕ್ರಮ ಇರಲಿದೆ. ಫೇರ್‌ವೆಲ್ ಟೂರ್ ಭಾಗವಾಗಿ ಬೋನೀ ಎಂ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ. ಈ ಜನಪ್ರಿಯ ಬ್ಯಾಂಡ್ ಲೈವ್ ಅನ್ನು ವೀಕ್ಷಿಸುವುದು ಜೀವನದಲ್ಲಿ ಒಮ್ಮೆ ಸಿಗುವ ಅವಕಾಶವಾಗಿದೆ. ಜಸ್ಲೀನ್ ರಾಯಲ್ ಮತ್ತು ಅಂತಾರಾಷ್ಟ್ರೀಯ ಗಾಯಕ ಲುಕಾಸ್ ಅವರ ಕಾರ್ಯಕ್ರಮವನ್ನು ಆಸ್ವಾದಿಸಬಹುದು. 2ನೇ ದಿನದಂದು ಕಾರ್ಯಕ್ರಮ ಇನ್ನಷ್ಟು ಕಳೆಕಟ್ಟಲಿದೆ. ಏಕಾನ್ ತನ್ನ ಸೂಪರ್‌ಫ್ಯಾನ್ ಟೂರ್ ಅನ್ನು ಹಮ್ಮಿಕೊಂಡಿದ್ದು, ಅವರ ನಂತರದಲ್ಲಿ ಡಿಜೆ ಆರ್ 3ಹ್ಯಾಬ್ ಕೂಡಾ ಡ್ಯಾನ್ಸ್ ಫ್ಲೋರ್ಗೆ ಹೊಸ ಎನರ್ಜಿ ತುಂಬಲಿದ್ದಾರೆ. ಅಲ್ಲದೆ, ಕನಿಕಾ ಕಪೂರ್ ಕೂಡಾ ಕಾರ್ಯಕ್ರಮವನ್ನು ಇನ್ನಷ್ಟು ಮೆರುಗುಗೊಳಿಸುತ್ತಾರೆ. ಸ್ಥಳೀಯ ಪ್ರತಿಭೆಗಳಾದ ರಿಟೋ ರಿಬಾ, ಕ್ವೀನ್ ಸೆನ್ಸೇಶನ್, ಖಾಸಿ ಬ್ಲಡ್ಸ್ ಮತ್ತು ಮೇಘಾಲಯ ಗ್ರಾಸ್‌ರೂಟ್ಸ್ ಮ್ಯೂಸಿಕ್ ಪ್ರಾಜೆಕ್ಟ್ (ಎಂಜಿಎಂಪಿ) ವಿವಿಧ ಕಲಾಕಾರರು ಭಾಗವಹಿಸಲಿದ್ದಾರೆ. ಹೀಗಾಗಿ, ಇದೊಂದು ಅಂತಾರಾಷ್ಟ್ರೀಯ ಮತ್ತು ಪ್ರಾದೇಶಿಕ ಸಂಗೀತದ ಸಮ್ಮಿಶ್ರಣವಾಗಿರಲಿದೆ. ಸಂಗೀತದ ಜೊತೆಗೆ, ಜಪಾನ್ ಅನ್ನು ಪಾಲುದಾರ ದೇಶ ಎಂದು ಘೋಷಿಸಿರುವುದರಿಂದ ಶಿಲ್ಲಾಂಗ್ ಚರ್ರಿ ಬ್ಲಾಸಮ್ ಫೆಸ್ಟಿವಲ್ಗೆ ವಿಶೇಷ ಮಹತ್ವ ಬಂದಿದೆ. ಮೇಘಾಲಯ ಮತ್ತು ಜಪಾನ್ನಲ್ಲಿ ಚರ್ರಿ ಬ್ಲಾಸಮ್ ಇದ್ದು, ಇದರಿಂದಾಗಿ ಈ ಸಹಭಾಗಿತ್ವಕ್ಕೆ ಹೊಸ ಹೊಳಪು ಸಿಕ್ಕಿದೆ. 2023 ರಲ್ಲಿ ಮೇಘಾಲಯಕ್ಕೆ ಜಪಾನ್ ರಾಯಭಾರಿ ಭೇಟಿ ನೀಡಿದಾಗ ಇದನ್ನು ಉಲ್ಲೇಖಿಸಲಾಗಿತ್ತು. ಕಾರ್ಯಕ್ರಮದಲ್ಲಿರುವ ಪ್ರತ್ಯೇಕ ಸ್ಟಾಲ್ಗಳಲ್ಲಿ ಜಪಾನ್ನ ಸಂಸ್ಕೃತಿ ಮತ್ತು ಪರಂಪರೆಯನ್ನು ಕಣ್ತುಂಬಿಕೊಳ್ಳುವ ಅವಕಾಶವನ್ನು ಇಲ್ಲಿ ಕಲ್ಪಿಸಲಾಗಿದೆ.ಜಪಾನ್ನಲ್ಲಿ ಹನಮಿ (ಚರ್ರಿ ಬ್ಲಾಸಮ್) ಅನ್ನು ಸಂಭ್ರಮಿಸುವುದಕ್ಕೆ ಸಾವಿರಾರು ವರ್ಷಗಳ ಇತಿಹಾಸವೇ ಇದೆ. 2016 ರಲ್ಲಿ ಆರಂಭಿಸಿದ ಶಿಲ್ಲಾಂಗ್ ಚರ್ರಿ ಬ್ಲಾಸಮ್ ಫೆಸ್ಟಿವಲ್ ವಿಶ್ವದಲ್ಲೇ ಮೊದಲ ಶರದೃತುವಿನ ಚರ್ರಿ ಬ್ಲಾಸಮ್ ಹಬ್ಬವಾಗಿದೆ.ಆರಂಭದಿಂದಲೂ, ಈ ವಿಶಿಷ್ಟ ಹಬ್ಬವು ಭಾರತ ಮತ್ತು ಇತರ ಭಾಗದ ಪ್ರವಾಸಿಗರನ್ನು ಇದು ಆಕರ್ಷಿಸಿದೆ. ಶಿಲ್ಲಾಂಗ್ ಚರ್ರಿ ಬ್ಲಾಸಮ್ ಫೆಸ್ಟಿವಲ್ 2023 ಆವೃತ್ತಿಗೆ ದಾಖಲೆಯ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು. ದೇಶ ವಿದೇಶಗಳಿಂದಲೂ ಜನರು ಆಗಮಿಸಿದ್ದರು. ಈ ವರ್ಷ ಕಾರ್ಯಕ್ರಮ ಇನ್ನಷ್ಟು ಅದ್ದೂರಿಯಾಗಿರಲಿದೆ. ಇಯರ್ ಆಫ್ ಲೆಜೆಂಡ್ಸ್ ಥೀಮ್ ಅಡಿಯಲ್ಲಿ ಜನಪ್ರಿಯ ಕಲಾಕಾರರು ಭಾಗವಹಿಸಲಿದ್ದಾರೆ ಮತ್ತು ಸಾಂಸ್ಕೃತಿಕ ವಿನಿಮಯ ನಡೆಯಲಿದೆ. ಹೀಗಾಗಿ, ಶಿಲ್ಲಾಂಗ್ ಚರ್ರಿ ಬ್ಲಾಸಮ್ ಫೆಸ್ಟಿವಲ್ 2024 ಎಲ್ಲರಿಗೂ ಒಂದು ಅದ್ಭುತ ಅನುಭವವನ್ನು ಕಟ್ಟಿಕೊಡಲಿದೆ. ಪ್ರವಾಸಿಗರು ಸಂಗೀತವಷ್ಟೇ ಅಲ್ಲ, ಹಲವು ಚಟುವಟಿಕೆಗಳನ್ನು ಕೈಗೊಳ್ಳಬಹುದು. ಫ್ಯಾಷನ್ ಶೋಗಳು, ಕಾಸ್ಪ್ಲೇ ಸ್ಪರ್ಧೆಗಳು, ಆರ್ಟ್ ಇನ್ಸ್ಟಾಲೇಶನ್ಗಳು, ಆಹಾರ ಮತ್ತು ವೈನ್ ಸ್ಟಾಲ್ಗಳು ಇನ್ನೂ ಹಲವು ಇವೆ. BookMyShow.com ಮತ್ತು RockskiTickets.comನಲ್ಲಿ ಟಿಕೆಟ್ಗಳು ಲಭ್ಯವಿದ್ದು, ಭಾರತದ ಅತ್ಯಂತ ವಿಶಿಷ್ಟ ಹಬ್ಬಕ್ಕೆ ಕ್ಷಣಗಣನೆ ಆರಂಭವಾಗಿದೆ. ನೀವು ಸಂಗೀತ ಪ್ರಿಯರಾಗಿರಲಿ, ನಿಸರ್ಗ ಪ್ರಿಯರಾಗಿರಲಿ ಅಥವಾ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಗಮನಿಸುವವರಾಗಿರಲಿ, ಶಿಲ್ಲಾಂಗ್ನ ಇಯರ್ ಆಫ್ ಲೆಜೆಂಡ್ಸ್ ನಿಮ್ಮನ್ನು ಅದ್ದೂರಿಯಾಗಿ ಸ್ವಾಗತಿಸುತ್ತದೆ.

## ಮೆರಿಲ್ ಚಿಕಿತ್ಸೆ ಅಗತ್ಯವಿದೆ ಜಾಗೃತಿ ಅಭಿಯಾನದಲ್ಲಿ ಎಂಎಸ್ ಧೋನಿ



ವೈದ್ಯಕೀಯ ಉಪಕರಣಗಳ ಉತ್ಪಾದನೆಯ ಸಂಸ್ಥೆಯಾದ ಮೆರಿಲ್ ಚಿಕಿತ್ಸೆಯ ಅಗತ್ಯವಿದೆ ಎಂಬ ವೀಡಿಯೊ ಅಭಿಯಾನ ಆರಂಭಿಸಿದೆ, ಖ್ಯಾತ ಕ್ರಿಕೆಟಿಗರಾದ ಎಂಎಸ್ ಧೋನಿಯ ಸಂದೇಶಗಳಿಂದ ಕೂಡಿದ ಎಐ (ಂಖ) ಚಾಲಿತ ವೀಡಿಯೊಗಳನ್ನು ಪರಿಚಯಸುತ್ತಿದೆ. ಈ ನವೀನ ಚಿಕಿತ್ಸಾ ವಿಧಾನಗಳು ರೋಗಿಗಳಿಗೆ ಸಕಾಲದಲ್ಲಿ ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುವಲ್ಲಿ ಮತ್ತು ವಿವಿಧ ಚಿಕಿತ್ಸೆಗಳಿಗೆ ಸಂಬಂಧಿಸಿದ ಗೊಂದಲ ಮತ್ತು ಭಯವನ್ನು ನಿವಾರಿಸುವಲ್ಲಿ ರೋಗಿಗಳಿಗೆ ಸಹಾಯಕವಾಗಿದೆ. ಎಐ-ಚಾಲಿತ ತಂತ್ರಜ್ಞಾನವನ್ನು ಬಳಸುವ ಮೂಲಕ ಮೆರಿಲ್ ಸಂಸ್ಥೆ ರೋಗಿಗಳಿಗೆ ಆರೋಗ್ಯಕ್ಷೇತ್ರದಲ್ಲಿ ಬದಲಾಗುತ್ತಿರುವ ಚಿಕಿತ್ಸಾ ವಿಧಾನಗಳು ಮತ್ತು ನವೀನ ಚಿಕಿತ್ಸಾ ಕ್ರಮಗಳನ್ನು ತಿಳಿಸುವ ಮೂಲಕ, ರೋಗಿಗಳಿಗೆ ತಮ್ಮ ಯೋಗಕ್ಷೇಮ ಕಾಪಾಡಕೊಳ್ಳಲು ಉತ್ತೇಜಿಸುತ್ತದೆ.

ಚಿಕಿತ್ಸೆ ಅಗತ್ಯವಿದೆ ಎಂಬ ಅಭಿಯಾನ ಹೃದಯ ರೋಗಗಳು, ಕೃತಕ ಕೀಲು ಅಳವಡಿಕೆ, ಬಾರಿಯಾಟ್ರಿಕ್ ಶಸ್ತ್ರಚಿಕಿತ್ಸೆಗಳ ಮೇಲೆ ಗಮನಹರಿಸುತ್ತದೆ, ಚಿಕಿತ್ಸೆ ಮಾಡದೆ ಇರುವ ಕಾಯಿಲೆ ರೋಗಿಗಳಲ್ಲದೇ ತಮ್ಮ ಕುಟುಂಬದವರಿಗು ತೊಂದರೆ ಆಗಬಹುದು ಎಂಬ ವಿಷಯದಲ್ಲಿ ಪ್ರಾಮುಖ್ಯತೆ ಕೊಡುತ್ತದೆ. ಎಂಎಸ್ ಧೋನಿ ಒಳಗೊಂಡ ವೀಡಿಯೊಗಳು ರೋಗಿಗಳಲಿನ ನವೀನ ಚಿಕಿತ್ಸಾ ವಿಧಾನಗಳಲ್ಲಿರುವ ಆತಂಕ ಮತ್ತು ಸಂದೇಹಗಳನ್ನು ಹೋಗಲಾಡಿಸುವ ಗುರಿಯನ್ನು ಹೊಂದಿದೆ.

ಎರಡನೇ ಹಂತದ ಚಿಕಿತ್ಸೆ ಆಗತ್ಯವಿದೆ ಎಂಬ ಅಭಿಯಾನವು ಎಐ ತಂತ್ರಜ್ಞಾನದೊಂದಿಗೆ ಜೋಡಿಸಿದ್ದು ಚಿಕಿತ್ಸಾ ಕ್ರಮ ಅನುಗುಣವಾಗಿ ಸಂದೇಶಗಳನ್ನು ರೋಗಿಯೋಂದಿಗೆ ಎಂ ಎಸ್ ಧೋನಿ ವ್ಯಕ್ತಿಕವಾಗಿ ಸಂದೇಶಿಸುವ ರೀತಿಯಲ್ಲಿ ಎಐ ತಂತ್ರಜ್ಞಾನದೊಂದಿಗೆ ಈ ಅಭಿಯಾನದ ಸಂದೇಶಗಳನ್ನು ಸಂಯೋಜಿಸಲಾಗಿದೆ. ರೋಗಿಗಳು ವ್ಯಕ್ತಿಕವಾಗಿ ತೊಡಗಿಸಿಕೊಳ್ಳುವಂತೆ ಉತ್ತೇಜಿಸುವ ಉದ್ದೇಶವಾಗಿದೆ. ಉತ್ತಮ ಚಿಕಿತ್ಸಾ ವಿಧಾನಗಳನ್ನು ಆಯ್ಕೆ ಮಾಡಲು ಅವಕಾಶಗಳ ಭರವಸೆ ನೀಡಲಾಗಿದೆ. ಎಐ ಚಾಲಿತ ವೀಡಿಯೊಗಳು ವಿವಿಧ ರೋಗ ಲಕ್ಷಣಗಳ ವಿಚಾರವನ್ನು ಒಂದಿದ್ದು, ರೋಗಿಯ ಅವಶ್ಯಕತೆ ಮತ್ತು ಕಾಳಜಿಗೆ ಅನುಗುಣವಾಗಿವೆ.




ಚಿಕಿತ್ಸೆ ನಿಡದ ಆರೋಗ್ಯ ಸಮಸ್ಯೆಗಳು ತಮ್ಮ ಮೇಲೆ ಅಲ್ಲದೆ ತಮ್ಮ ಪ್ರೀತಿ ಪಾತ್ರರ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎನ್ನುವ ವಿಷಯದ ಬಗ್ಗೆ ಈ ಅಭಿಯಾನವು ಒಂದು ನಿರ್ಣಾಯಕ ಸಂದೇಶ ನೀಡಲು ಹೊರಟಿದೆ. 'ನಿಮ್ಮ ಸಮಸ್ಯೆ ನಿಮ್ಮ ಸಮಸ್ಯೆ ಮಾತ್ರವಲ್ಲ, ಹಾಗಾಗಿ ಚಿಕಿತ್ಸೆ ಅಗತ್ಯ'. ಎಂಬ ಅಡಿಬರಹವಿರುವ ಈ ಅಭಿಯಾನವು ರೋಗಿಯ ಸಂಕಟದ ಪರಿಣಾಮವನ್ನು ರೋಗಿಯ ಪಾಲಕರು ಮತ್ತು ಕುಟುಂಬದ ಸದಸ್ಯರ ನಡುವೆ ಭಾವನಾತ್ಮಕ ವಾಸ್ತವದ ಅರಿವು ಮುಡಿಸುವ ಧ್ವನಿಯಾಗಿದೆ. ಸಕಾಲಕ್ಕೆ ಚಿಕಿತ್ಸೆ ನೀಡುವ ಬಗ್ಗೆ ಸಲಹೆ ನೀಡುವಂತಹ ದೇಶವ್ಯಾಪಿ ವೈದ್ಯರ ಜೊತೆಗೆ ಮತ್ತು ಆಸ್ಪತ್ರೆಗಳೊಂದಿಗೆ ಮೆರಿಲ್ ಸಂಸ್ಥೆಯು ಸಹಭಾಗಿತ್ವವನ್ನು ಹೊದಿದ್ದು. ವೃತ್ತಿಪರ ಆರೋಗ್ಯ ತಜ್ಞರೊಂದಿಗೆ ಸಹಕರಿಸುವ ಮೂಲಕ, ಮೆರಿಲ್ ಸಂಸ್ಥೆ ಸುಧಾರಿತ ಲಭ್ಯವಿರುವ ನವೀನ ಚಿಕಿತ್ಸಾ ಕ್ರಮಗಳ ಆಯ್ಕೆ ಬಗ್ಗೆ ತ್ವರಿತಾ ಚಿಕಿತ್ಸಾ ಅವಶ್ಯಕತೆಯ ಅರಿವನ್ನು ಮುಡಿಸುವ ಉದ್ದೇಶವನ್ನು ಒಳಗೊಂಡಿದೆ. ರೋಗಿಗಳ ಸುಧಾರಿತ ಆರೋಗ್ಯವಂತ ಗುಣಮಟ್ಟದ ಜೀವನ ಅವಶ್ಯಕತೆಯಾಗಿ ಈ ಸಂದೇಶವನ್ನು ತಮ್ಮ ಕುಟುಂಬದ ಒಳಿತಿಗಾಗಿ ಸಂಯೋಜಿಸಲಾಗಿದೆ ಎಂದು ಮೆರಿಲ್ ಸಂಸ್ಥೆಯ ಮಾರ್ಕೆಟಿಂಗ್ ವಿಭಾಗದ ಮುಖ್ಯ ಅಧಿಕಾರಿ ಆದ ಶ್ರೀ ಮನೀಶ್ ದೇಶಮುಖ್ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಧಾರಿತ ವೈದ್ಯಕೀಯ ಚಿಕಿತ್ಸಾ ಪರಿಹಾರಗಳನ್ನು ನೀಡುವ ಮೂಲಕ ಸದಾಕಾಲ ಒಂದು ಆರೋಗ್ಯಕರ ವಿಶ್ವವನ್ನು ಸೃಷ್ಟಿಸಬೇಕೆಂಬುದು ಮೆರಿಲ್ ಸಂಸ್ಥೆಯ ಮುಖ್ಯ ಗುರಿಯಾಗಿದೆ ಎಂದು ಅಭಿಪ್ರಾಯಪಡುತ್ತಾರೆ. ''ಚಿಕಿತ್ಸೆ ಅಗತ್ಯವಿದೆ'' ('ಟ್ರೀಟ್ಮೆಂಟ್ ಜರೂರಿ ಹೈ') ಎನ್ನುವ ಅಭಿಯಾನದೊಂದಿಗೆ, ದೇಶಾದ್ಯಂತ ರೋಗಿಗಳಿಗೆ ಚಿಕಿತ್ಸೆಯಬಗ್ಗೆ ಭರವಸೆ ಮತ್ತು ಧೈರ್ಯ ತುಂಬುವ ಒಂದು ಸಂದೇಶವನ್ನು ಹೊತ್ತುತರುವ ಗುರಿ ನಮಗಿದೆ. ಂಖ ತಂತ್ರಜ್ಞಾನವನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ ಎಂ ಎಸ್ ಧೋನಿಯ ಸಹಭಾಗಿತ್ವದಲ್ಲಿ, ನಾವು ನಮ್ಮ ಸಂದೇಶವನ್ನು ಹೆಚ್ಚು ವೈಯಕ್ತಿಕವಾಗಿ ಮತ್ತು ಪ್ರಭಾವಶಾಲಿಯನ್ನಾಗಿ ಮಾಡುತ್ತಿದ್ದೇವೆ, ತಮ್ಮ ಆರೋಗ್ಯದ ಹೊಣೆಯನ್ನು ಹೊರುವಂತೆ ನಾವು ವ್ಯಕ್ತಿಗಳಿಗೆ ಬಲವರ್ಧನೆ ನೀಡುತ್ತಿದ್ದೇವೆ.

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ-9964739507
www.jyotishyavaastu.com

**ಮೇಷ:** ಮಾನಸಿಕ ಕಿರಿಕಿರಿ, ಕೆಲಸ ಕಾರ್ಯಗಳಲ್ಲಿ ಹಿನ್ನಡೆ, ಅಸಮಾಧಾನ, ನೀರು ಮತ್ತು ವಾಹನಗಳಿಂದ ಎಚ್ಚರಿಕೆ

**ವೃಷಭ:** ಬಂಧು ಬಾಂಧವರಿಂದ ತೊಂದರೆ, ಪೆಟ್ಟು ಮಾಡಿಕೊಳ್ಳುವ ಸಂಭವ, ಪ್ರಯಾಣದಲ್ಲಿ ಎಚ್ಚರಿಕೆ, ಗೃಹ ಬದಲಾವಣೆಯಿಂದ ಸಮಸ್ಯೆ

**ಮಿಥುನ:** ಆರ್ಥಿಕ ಸಂಕಷ್ಟ, ಮಾನಸಿಕ ನೋವು, ಕುಟುಂಬದಲ್ಲಿ ಕಲಹ, ಸ್ತ್ರೀಯರಿಂದ ಅನುಕೂಲ

**ಕಟಕ:** ಪಾಲುದಾರಿಕೆಯಲ್ಲಿ ಅನುಕೂಲ, ಅವಕಾಶ ಕೈತಪ್ಪುವ ಸಂಭವ, ದೃಷ್ಟಿದೋಷ, ಮಕ್ಕಳ ಆರೋಗ್ಯದಲ್ಲಿ ವ್ಯತ್ಯಾಸ

**ಸಿಂಹ:** ಅಧಿಕ ಖರ್ಚು ಮತ್ತು ನಷ್ಟ, ಅನಾರೋಗ್ಯ ಸಮಸ್ಯೆ, ಆತಂಕ ನಿದ್ರಾಭಂಗ, ಬಂಧು ಬಾಂಧವರೊಂದಿಗೆ ಶತ್ರುತ್ವ

**ಕನ್ಯಾ:** ಮಕ್ಕಳಿಂದ ಲಾಭ, ಪ್ರೀತಿ ಪ್ರೇಮದಲ್ಲಿ ಯಶಸ್ಸು, ಮಿತ್ರರಿಂದ ಹಿನ್ನಡೆ, ಅಧಿಕಾರಿಗಳಿಂದ ನಷ್ಟ

**ತುಲಾ:** ಉದ್ಯೋಗದಲ್ಲಿ ನಿರಾಸಕ್ತಿ, ತಂತ್ರದ ಭೀತಿ ಮತ್ತು ಸಮಸ್ಯೆ, ನೀರಿನಿಂದ ಸಮಸ್ಯೆ ಎಚ್ಚರಿಕೆ, ನೋವು

**ವೃಶ್ಚಿಕ:** ತಂದೆ ಆರೋಗ್ಯದಲ್ಲಿ ವ್ಯತ್ಯಾಸ, ದೂರ ಪ್ರಯಾಣ, ಸಂಗಾತಿ ಆರೋಗ್ಯದಲ್ಲಿ ವ್ಯತ್ಯಾಸ, ಕೈಕಾಲುಗಳಿಗೆ ಪೆಟ್ಟು

**ಧನಸ್ಸು:** ಧನಾಗಮನ, ಉತ್ತಮ ಅವಕಾಶಗಳ ಸೂಚನೆ, ಸೋಲು ನಷ್ಟ ನಿರಾಸೆ, ಕುಟುಂಬದಲ್ಲಿ ಆತಂಕ

**ಮಕರ:** ದಾಂಪತ್ಯದಲ್ಲಿ ಸಮಸ್ಯೆ, ಮಕ್ಕಳಿಂದ ಬೇಸರ, ಪ್ರೀತಿ ವಿಷಯಗಳು ಬಯಲು, ವ್ಯಾಪಾರದಲ್ಲಿ ನಷ್ಟ

**ಕುಂಭ:** ಆರೋಗ್ಯದಲ್ಲಿ ವ್ಯತ್ಯಾಸ, ಮೋಸ ಮತ್ತು ವಂಚನೆ, ಅಪವಾದಗಳು, ಆರೋಗ್ಯದಲ್ಲಿ ವ್ಯತ್ಯಾಸ

**ಮೀನ:** ಮಕ್ಕಳ ಜೀವನದಲ್ಲಿ ಏರುಪೇರು, ಸಂತಾನ ಸಮಸ್ಯೆ, ದುಶ್ಚಟಗಳಿಂದ ತೊಂದರೆ, ಗೌರವಕ್ಕೆ ದಕ್ಕೆ

## ವಿಶ್ವ ಪೋಲಿಯೋ ದಿನ

ವಿಶ್ವ ಪೋಲಿಯೊ ದಿನವನ್ನು ವಾರ್ಷಿಕವಾಗಿ ಅಕ್ಟೋಬರ್ 24 ರಂದು ಆಚರಿಸಲಾಗುತ್ತದೆ. ಈ ದಿನವು ಪೋಲಿಯೊ ಮುಕ್ತ ಭವಿಷ್ಯದ ಕಡೆಗೆ ಜಾಗತಿಕ ಪ್ರಯತ್ನಗಳನ್ನು ಸ್ಮರಿಸುತ್ತದೆ, ಹಾಗೆಯೇ ಪ್ರಪಂಚದ ಮೂಲೆ ಮೂಲೆಯಿಂದ ಪೋಲಿಯೊವನ್ನು ನಿರ್ಮೂಲನೆ ಮಾಡುವ ಹೋರಾಟದ ಮುಂಚೂಣಿಯಲ್ಲಿ ಕೆಲಸ ಮಾಡುವವರ ನಿಸ್ವಾರ್ಥ ತ್ಯಾಗವನ್ನು ಸ್ಮರಿಸುತ್ತದೆ. ಪೋಲಿಯೊವೈರಸ್ ಸುಲಭವಾಗಿ ಹರಡುವುದರಿಂದ ಪೋಲಿಯೊ ಸಾಂಕ್ರಾಮಿಕವಾಗಿದೆ. ಆಧುನಿಕ ಮಧ್ಯಸ್ಥಿಕೆಗಳ ಕಾರಣದಿಂದಾಗಿ ವೈರಸ್ ಈಗ ಅತ್ಯಂತ ಅಪರೂಪವಾಗಿದ್ದರೂ, ಇದು ಉಸಿರಾಟವನ್ನು ನಿಯಂತ್ರಿಸುವ ಮೆದುಳಿನ ಪ್ರದೇಶಗಳನ್ನು ದುರ್ಬಲಗೊಳಿಸುತ್ತದೆ, ಇದರಿಂದಾಗಿ ಸಾವಿಗೆ ಕಾರಣವಾಗುತ್ತದೆ. ಯಾವುದೇ ಗುರುತಿಸಲ್ಪಟ್ಟ ಚಿಕಿತ್ಸೆಯನ್ನು ಹೊಂದಿರದ ಪೋಲಿಯೊವನ್ನು ವ್ಯಾಕ್ಸಿನೇಷನ್ ಮೂಲಕ ಮಾತ್ರ ತಪ್ಪಿಸಬಹುದು.

ಸಾವಿರಾರು ವರ್ಷಗಳಿಂದ, ಮಾನವರು ಪೋಲಿಯೊವೈರಸ್ ಸೋಂಕಿಗೆ ಒಳಗಾಗಿದ್ದಾರೆ. ಸುಮಾರು 1400 ಃಅ ಯ ಈಜಿಪ್ಟ್ ಕಲಾಕೃತಿ ಪೋಲಿಯೊ ತರಹದ ಅಂಗ ವಿಕಲತೆ ಹೊಂದಿರುವ ವ್ಯಕ್ತಿಯನ್ನು ಚಿತ್ರಿಸುತ್ತದೆ. 1800 ರ ದಶಕದ ಬಹುಪಾಲು, ಪೋಲಿಯೊವು ಮಾನವ ಜನಸಂಖ್ಯೆಯಲ್ಲಿ ತುಲನಾತ್ಮಕವಾಗಿ ಅಪರೂಪದ ಕಾಯಿಲೆಯಾಗಿ ಕಾಣಿಸಿಕೊಂಡಿತು. 1900 ರ ದಶಕದ ಆರಂಭದಲ್ಲಿ ಡಿಫ್ತೀರಿಯಾ, ಟೈಫಾಯಿಡ್ ಮತ್ತು ಕ್ಷಯರೋಗದಂತಹ ಇತರ ಕಾಯಿಲೆಗಳು ಕ್ಷೀಣಿಸಿದಾಗ, ತುಲನಾತ್ಮಕವಾಗಿ ಉತ್ತಮ ಜೀವನಮಟ್ಟ ಹೊಂದಿರುವ ದೇಶಗಳಲ್ಲಿ ಪೋಲಿಯೊ ಸಾಂಕ್ರಾಮಿಕ ಪ್ರಮಾಣವನ್ನು ತಲುಪಿತು. ವರ್ಧಿತ ನೈರ್ಮಲ್ಯವು ಪೋಲಿಯೊ ಪ್ರಕರಣಗಳಲ್ಲಿ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಸಂಶೋಧಕರು ನಂಬಿದ್ದಾರೆ.

ಒಂದು ಊಹೆಯ ಪ್ರಕಾರ, ಕಲುಷಿತ ನೀರಿನ ಪೂರೈಕೆಯಿಂದಾಗಿ ಮಕ್ಕಳು ಹಿಂದೆ ಅಜಾಗರೂಕತೆಯಿಂದ ಪೋಲಿಯೊಗೆ ಒಡ್ಡಿಕೊಳ್ಳುತ್ತಿದ್ದರು. ಶಿಶುಗಳ ರಕ್ತದಲ್ಲಿ ತಾಯಿಯ ಪ್ರತಿಕಾಯಗಳು ಇನ್ನೂ ಇದ್ದರೆ, ಅವರ ಪ್ರತಿರಕ್ಷಣಾ ವ್ಯವಸ್ಥೆಗಳು ತ್ವರಿತವಾಗಿ ಪೋಲಿಯೊವೈರಸ್ ಮೇಲೆ ದಾಳಿ ಮಾಡಬಹುದು ಮತ್ತು ದೀರ್ಘಾವಧಿಯ ಪ್ರತಿರಕ್ಷೆಯನ್ನು ಸ್ಥಾಪಿಸಬಹುದು. ಹೆಚ್ಚಿದ ನೈರ್ಮಲ್ಯ ಎಂದರೆ ಒಂದು ಮಗು ತಾಯಿಯ ರಕ್ಷಣೆಯನ್ನು ಕಳೆದುಕೊಳ್ಳುವವರೆಗೆ ಮತ್ತು ಪೋಲಿಯೊದ ತೀವ್ರ ಸ್ವರೂಪಕ್ಕೆ ಹೆಚ್ಚು ದುರ್ಬಲವಾಗುವವರೆಗೆ ಪೋಲಿಯೊಗೆ ಒಡ್ಡಿಕೊಳ್ಳುವುದು ಸರಾಸರಿ ವರ್ಷಗಳವರೆಗೆ ವಿಳಂಬವಾಯಿತು.

1994 ರಲ್ಲಿ, ಪಶ್ಚಿಮ ಗೋಳಾರ್ಧವನ್ನು ಪೋಲಿಯೊ ಮುಕ್ತ ಎಂದು ಘೋಷಿಸಲಾಯಿತು ವ್ಯಾಪಕ ವ್ಯಾಕ್ಸಿನೇಷನ್ ಧನ್ಯವಾದಗಳು. ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನ ಮಾತ್ರ ಇದರಿಂದ ಪ್ರಭಾವಿತವಾಗಿದ್ದು, ಸಾಂದರ್ಭಿಕವಾಗಿ ಇತರ ರಾಷ್ಟ್ರಗಳಿಗೆ ಹರಡುತ್ತದೆ. ಕೊನೆಯ ಉಳಿದ ಪಾಕೆಟ್ಗಳನ್ನು ತೊಡೆದುಹಾಕಲು ವ್ಯಾಕ್ಸಿನೇಷನ್ ಅಭಿಯಾನಗಳನ್ನು ಆಕ್ರಮಣಕಾರಿಯಾಗಿ ನಡೆಸಲಾಗುತ್ತಿದೆ. ಪರಿಣಾಮವಾಗಿ, ಪೋಲಿಯೊ ಲಸಿಕೆಗಳನ್ನು ಪ್ರಪಂಚದಾದ್ಯಂತ ಇನ್ನೂ ಶಿಫಾರಸು ಮಾಡಲಾಗಿದೆ, ವಿಶೇಷವಾಗಿ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ, ಅವರು ಸೋಂಕಿನಿಂದ ಹೆಚ್ಚು ದುರ್ಬಲರಾಗಿದ್ದಾರೆ.

# ರಿಲಯನ್ಸ್ ನೇತೃತ್ವದಲ್ಲಿ ಭಾರತದಾದ್ಯಂತ ಸ್ವಚ್ಛತಾ ಜನ ಆಂದೋಲನ

**ಮುಂಬೈ:** ಕೇಂದ್ರ ಸರ್ಕಾರದ ''ಸ್ವಚ್ಛತಾ ಹಿ ಸೇವಾ''ಕಾರ್ಯಕ್ರಮಕ್ಕೆ ಪೂರಕವಾಗಿ ರಿಲಯನ್ಸ್ ನಿಂದ ದೇಶದಾದ್ಯಂತ ನಡೆದ ಸ್ವಚ್ಛತಾ ಪಾಕ್ಷಿಕಕ್ಕಾಗಿ ಜನ್ ಆಂದೋಲನ್ ಅಭಿಯಾನ ಅಮೋಘವಾದ ಯಶಸ್ಸನ್ನು ಕಂಡಿದೆ. ರಿಲಯನ್ಸ್ ನಿಂದ ನಡೆದ ಈ ಅಭಿಯಾನದಲ್ಲಿ 4,100 ಸ್ಥಳಗಳಲ್ಲಿ 75,000 ಕ್ಕೂ ಹೆಚ್ಚು ಸ್ವಯಂಸೇವಕರು ಭಾಗೀ ಆದರು. ರಿಲಯನ್ಸ್ ಉದ್ಯೋಗಿಗಳು, ಅವರ ಕುಟುಂಬ ಸದಸ್ಯರು, ಸಮಾಜದ ವಿವಿಧ ಸ್ತರದ ಜನರು ಈ ಸ್ವಚ್ಛತಾ ಅಭಿಯಾನದಲ್ಲಿ ಜೊತೆಯಾದರು. ಮರಗಳನ್ನು ನೆಟ್ಟರು, ಶಾಲೆಗಳಲ್ಲಿ ಜಾಗೃತಿ ಮೂಡಿಸಿದರು ಹಾಗೂ ಭಾರತದಾದ್ಯಂತ ಸಕಾರಾತ್ಮಕ ಬದಲಾವಣೆಯನ್ನು ತರುವ ನಿಟ್ಟಿನಲ್ಲಿ ಇತರ ಹಲವು ಪ್ರಯತ್ನಗಳನ್ನು ಸಹ ಮಾಡಿದರು.

ಈ ಎಲ್ಲ ಪ್ರಯತ್ನಗಳ ಬಗ್ಗೆ ಮಾತನಾಡಿದ ರಿಲಯನ್ಸ್ ಫೌಂಡೇಶನ್ ಸಿಇಒ ಜಗನ್ನಾಥ ಕುಮಾರ್, ರಿಲಯನ್ಸ್ ಪಾಲಿಗೆ ಸ್ವಚ್ಛ ಭಾರತ್ ಎಂಬುದು ಒಂದು ಮಿಷನ್ ಗಿಂತ ಹೆಚ್ಚು; ಇದು ನಮ್ಮ ಪರಿಸರ ವ್ಯವಸ್ಥೆಯ ಪ್ರತಿ ಸದಸ್ಯರಿಗೂ



ಅದರಲ್ಲೂ ಅವರು ಗ್ರಾಮೀಣ ಭಾಗದಲ್ಲೇ ಇರಲಿ ಅಥವಾ ದೇಶದ ನಗರವಾಸಿಗಳೇ ಇರಲಿ, ನಮ್ಮ ಪರಿಸರದ ಒಳಿತಿಗೆ ಕೊಡುಗೆ ನೀಡಲು ಒಂದು ಅವಕಾಶವಾಗಿದೆ. ಈ ವರ್ಷ ರಿಲಯನ್ಸ್‌ನ WeCare4Swachhata ಅಭಿಯಾನವು ಭಾರತ ಸರ್ಕಾರದ ಸ್ವಚ್ಛತಾ ಹಿ ಸೇವಾ ಅಭಿಯಾನದಲ್ಲಿ ನಮ್ಮ ಭಾಗವಹಿಸುವಿಕೆ ಒಂದು ದಶಕ ಪೂರೈಸುತ್ತದೆ. ರಿಲಯನ್ಸ್ ಪರಿಸರ ವ್ಯವಸ್ಥೆಯಲ್ಲಿ ಆಳವಾಗಿ ಇರುವಂಥ ಸಿದ್ಧಾಂತ 'ವಿ ಕೇರ್' ಜೊತೆಗೆ, ನಮ್ಮ ಅಭಿಯಾನವು ಸ್ವಚ್ಛ ಮತ್ತು ಹಸಿರು ಭಾರತದ ದೃಷ್ಟಿಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ದೇಶದಾದ್ಯಂತ ಸ್ವಚ್ಛತೆಗೆ ಈ ಸ್ವಯಂಸೇವೆ ನಿರ್ಣಾಯಕವಾಗಿದ್ದು, ನಮ್ಮ ಗುರಿಯು ಸಮುದಾಯಗಳನ್ನು ತಲುಪುವುದಕ್ಕೆ ಮತ್ತು ಆಂದೋಲನದಲ್ಲಿ ತೊಡಗಿಕೊಳ್ಳಲು ಪ್ರೇರೇಪಿಸುತ್ತದೆ,'' ಎಂದರು.

ವಸತಿ ಪ್ರದೇಶಗಳು, ಶಾಲೆಗಳು, ಮಾರುಕಟ್ಟೆ ಸ್ಥಳಗಳು, ಬೀಚ್ಗಳು, ಪೂಜಾ ಸ್ಥಳಗಳು, ರೈಲ್ವೆ ನಿಲ್ದಾಣಗಳು ಮತ್ತು ಬಸ್ ನಿಲ್ದಾಣಗಳು, ಐತಿಹಾಸಿಕ ಸ್ಮಾರಕಗಳು, ರಸ್ತೆಗಳು, ಉದ್ಯಾನವನಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಸೆಪ್ಟೆಂಬರ್ 17ರಿಂದ ಅಕ್ಟೋಬರ್ 2ನೇ ತಾರೀಕಿನ ಮಧ್ಯೆ ಸ್ವಚ್ಛತಾ ಅಭಿಯಾನಗಳನ್ನು ನಡೆಸಲಾಯಿತು.

ರಿಲಯನ್ಸ್ ನ 59,000ಕ್ಕೂ ಹೆಚ್ಚು ಉದ್ಯೋಗಿಗಳಿಂದ ಉತ್ತೇಜಿತರಾಗಿ, ಭಾರತದಾದ್ಯಂತ ಸಮುದಾಯದ ಸುಮಾರು 16,000 ಜನರು ಮತ್ತು ರಿಲಯನ್ಸ್ ಫೌಂಡೇಷನ್ ಜೊತೆಗೆ ಕೆಲಸ ಮಾಡುವ ಹಲವಾರು ನಾಗರಿಕ ಸಮಾಜ ಸಂಸ್ಥೆಗಳು ಸಹ ಅಭಿಯಾನಕ್ಕೆ ಸೇರಿಕೊಂಡರು ಮತ್ತು ಸಾಮಾನ್ಯ ಸ್ಥಳಗಳು ಮತ್ತು ಜಲಮೂಲಗಳನ್ನು ಸ್ವಚ್ಛಗೊಳಿಸುವ, ಮರುಬಳಕೆ ಮತ್ತು ಮರುಪೂರಣ ಮತ್ತು ಮರಗಳ ಆರೈಕೆಯನ್ನು ಉತ್ತೇಜಿಸುವುದಕ್ಕೆ ಸ್ವಯಂಸೇವಕರಾಗಿ ದುಡಿದರು. ಇದರ ಜೊತೆಗೆ 30,000ಕ್ಕೂ ಹೆಚ್ಚು ಮಕ್ಕಳು ಜಾಗೃತಿ ರಸಪ್ರಶ್ನೆಗಳು, ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಗಳು ಹಾಗೂ ರಿಲಯನ್ಸ್ ಸ್ವಯಂಸೇವಕರು ಆಯೋಜಿಸಿದ ಇತರ ಚಟುವಟಿಕೆಗಳಲ್ಲಿ ಭಾಗವಹಿಸಿದರು. ಹವಾಮಾನದ ರಕ್ಷಣೆಗೆ ಹಸಿರು ಹೊದಿಕೆ ಹೆಚ್ಚಿಸುವುದಕ್ಕೆ ನಿರಂತರ ಪ್ರಯತ್ನಗಳಾಗಿ ರಿಲಯನ್ಸ್ ಫೌಂಡೇಷನ್ ಒಡಿಶಾ, ಅಸ್ಸಾಂ, ಗುಜರಾತ್ ಮತ್ತು ಪಶ್ಚಿಮ ಬಂಗಾಳದಾದ್ಯಂತ 17,000 ಸಸಿಗಳನ್ನು ನೆಟ್ಟಿದೆ.

## 17ನೇ ವಯಸ್ಸಿನಿಂದಲೇ ಚುನಾವಣಾ ಪ್ರಚಾರ ಮಾಡಿದ್ದೇನೆ: ಪ್ರಿಯಾಂಕಾ ಗಾಂಧಿ

**ತಿರುವನಂತಪುರಂ:** ನಾನು ಕಳೆದ 35 ವರ್ಷಗಳಿಂದ ಚುನಾವಣೆಗಳಿಗೆ ಪ್ರಚಾರ ಮಾಡಿಕೊಂಡು ಬಂದಿದ್ದೇನೆ. ಆದರೆ ನನಗಾಗಿ ಪ್ರಚಾರ ಮಾಡುತ್ತಿರುವುದು ಇದೇ ಮೊದಲು ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿಕೆ ನೀಡಿದ್ದಾರೆ. ವಯನಾಡು ಲೋಕಸಭಾ ಉಪಚುನಾವಣೆಗೆ ಕಾಂಗ್ರೆಸ್ನಿಂದ ಸ್ಪರ್ಧಿಸಲು ಪ್ರಿಯಾಂಕಾ ಗಾಂಧಿ ಇಂದು ತಮ್ಮ ನಾಮಪತ್ರವನ್ನು ಸಲ್ಲಿಸಿದ್ದಾರೆ. ಇದೇ ವೇಳೆ ವಯನಾಡಿನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ನಾನು 1989 ರಲ್ಲಿ 17 ವರ್ಷ ವಯಸ್ಸಿನಳಾಗಿದ್ದಾಗ ನನ್ನ ತಂದೆಯ ಪರವಾಗಿ ಮೊದಲ ಬಾರಿಗೆ ಪ್ರಚಾರ ಮಾಡಿದ್ದೆ ಎಂದು ತಿಳಿಸಿರು. ಕಳೆದ 35 ವರ್ಷಗಳಲ್ಲಿ ನನ್ನ ತಾಯಿ, ನನ್ನ ಸಹೋದರ ಮಾತ್ರವಲ್ಲದೇ ನನ್ನ ಅನೇಕ ಸಹೋದ್ಯೋಗಿಗಳ ಪರವಾಗಿ ವಿವಿಧ ಚುನಾವಣೆಗಳಲ್ಲಿ ಪ್ರಚಾರ ಮಾಡಿದ್ದೇನೆ. ಆದರೆ ಇದೇ ಮೊದಲ ಬಾರಿಗೆ ನಾನೇ ಚುನಾವಣೆಗೆ ನಿಂತು ಪ್ರಚಾರ ಮಾಡುತ್ತಿದ್ದೇನೆ. ಇದೀಗ ನನಗಾಗಿ ಪ್ರಚಾರ ಮಾಡುತ್ತಿರುವುದು ಹಾಗೂ ನಿಮ್ಮ ಬೆಂಬಲವನ್ನು ಕೋರುತ್ತಿರುವುದು ತುಂಬಾ ವಿಭಿನ್ನವಾದ ಭಾವನೆ ನೀಡುತ್ತಿದೆ ಎಂದು ಹೇಳಿದರು.



## ಅಯೋಧ್ಯೆ ವಿವಾದ ಕುರಿತು ತನ್ನ ಕೆಟ್ಟ ತೀರ್ಪಿಗಾಗಿ ನ್ಯಾ.ಚಂದ್ರಚೂಡ್ ದೇವರನ್ನು ದೂಷಣೆ ಸಲ್ಲ

**ದೆಹಲಿ:** ಕಳೆದ ವಾರಾಂತ್ಯದಲ್ಲಿ ಪುಣೆಯಲ್ಲಿ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಸಂದರ್ಭ ಭಾರತದ ಮುಖ್ಯ ನ್ಯಾಯಮೂರ್ತಿ(ಸಿಜೆಐ) ಡಿ.ವೈ.ಚಂದ್ರಚೂಡ್ ಅವರು ತಾನು ಸರ್ವೋಚ್ಚ ನ್ಯಾಯಾಲಯದ ಪೀಠದ ಸದಸ್ಯನಾಗಿದ್ದ ನೀಡಿದ್ದ ಅತ್ಯಂತ ವಿವಾದಾತ್ಮಕ ತೀರ್ಪೊಂದರ ಕುರಿತು ಅಚ್ಚರಿಯ ಅಂಶವೊಂದನ್ನು ಬಹಿರಂಗೊಳಿಸಿದ್ದಾರೆ.



'ನಾವು ತೀರ್ಪು ನೀಡಬೇಕಾದ, ಆದರೆ ಪರಿಹಾರ ವನ್ನು ತಲುಪಲು ಸಾಧ್ಯವಾಗದ ಪ್ರಕರಣಗಳು ಆಗಾಗ್ಗೆ ನಮ್ಮ ಮುಂದಿರುತ್ತವೆ. ಮೂರು ತಿಂಗಳ ಕಾಲ ನನ್ನ ಮುಂದಿದ್ದ ಅಯೋಧ್ಯೆ (ರಾಮ ಜನ್ಮಭೂಮಿ-ಬಾಬ್ರಿ ಮಸೀದಿ) ವಿವಾದದ ಸಂದರ್ಭದಲ್ಲಿಯೂ ಹೀಗೆಯೇ ಆಗಿತ್ತು. ನಾನು ದೇವರೆದುರು ಕುಳಿತು ಪರಿಹಾರವನ್ನು ಒದಗಿಸುವಂತೆ ಪ್ರಾರ್ಥಿಸಿದ್ದೆ' ಎಂದು ನ್ಯಾ.ಚಂದ್ರಚೂಡ್ ಹೇಳಿದ್ದರು. ದೇವರೇ ಸಾಕ್ಷಾತ್ಕಾರಗೊಂಡು 'ಪರಿಹಾರವನ್ನು' ಒದಗಿಸಿದ್ದ ಎಂದು ನಾವು ಕಲ್ಪಿಸಬಹುದಾದ ಎದ್ದುಕಾಣುವ ಚಿತ್ರಣವನ್ನು ಭಾರತದ ಉನ್ನತ ನ್ಯಾಯಾಧೀಶರು ನೀಡಿದ್ದಾರೆ. ನ್ಯಾ.ಚಂದ್ರಚೂಡ್ ಮತ್ತು ಅವರ ಸಹೋದ್ಯೋಗಿಗಳು ಅಂತಿಮವಾಗಿ ನೀಡಿದ ತೀರ್ಪನ್ನು ನೋಡಿದರೆ ''ನಾನು ಇನ್ನೊಂದು ದೇವಸ್ಥಾನವನ್ನು ಹೊಂದಿರಲು ನನಗೆ ಭೂಮಿಯನ್ನು ನೀಡು ಎಂದು ದೇವರು ಹೇಳಿರುವಂತೆ ಕಾಣುತ್ತದೆ.

ದೇವರು ಹೇಳಿದ ಬಳಿಕ ತಮ್ಮ ಸಂಪೂರ್ಣ ಸಾಮರ್ಥ್ಯದೊಂದಿಗೆ ಈ 'ಪರಿಹಾರ'ಕ್ಕೆ ನ್ಯಾಯಾಂಗದ ತಾರ್ಕಿಕತೆಯನ್ನು ಲೇಪಿಸಿ ತೀರ್ಪನ್ನು ಪ್ರಕಟಿಸುವುದು ನ್ಯಾಯಾಧೀಶರಿಗೆ ಉಳಿದಿದ್ದ ಏಕೈಕ ಕೆಲಸವಾಗಿತ್ತು. ತನಗಾಗಿ ದೇವಸ್ಥಾನವು ಭದ್ರಗೊಂಡ ಬಳಿಕ ದೇವರು ತನ್ನ ದೈವಿಕ ತೀರ್ಪಿನಲ್ಲಿ ಐವರು ನ್ಯಾಯಾಧೀಶರು ಹೊಂದಿದ್ದ ನಂಬಿಕೆಗಾಗಿ ಅವರನ್ನು ಗೌರವಿಸಿದ್ದ. ಆ ಸಮಯದಲ್ಲಿ ಸಿಜೆಐ ಆಗಿದ್ದ ರಂಜನ್ ಗೊಗೊಯ್ ಅವರನ್ನು ರಾಜ್ಯಸಭೆಗೆ ಕಳುಹಿಸಿದ್ದ ದೇವರು ಪೀಠದಲ್ಲಿದ್ದ ಇಬ್ಬರು ನ್ಯಾಯಾಧೀಶರನ್ನು ಬಳಿಕ ಸಿಜೆಐ ಹುದ್ದೆಗೇರಿಸಿದ್ದ. ಓರ್ವ ನ್ಯಾಯಾಧೀಶರು ನಿವೃತ್ತಿಯ ಬಳಿಕ ರಾಜ್ಯಪಾಲರಾಗುವಂತೆ ಮತ್ತು ಇನ್ನೋರ್ವ ನ್ಯಾಯಾಧೀಶರು ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯ ಮುಖ್ಯಸ್ಥರಾಗುವಂತೆ ನೋಡಿಕೊಂಡಿದ್ದ. ಪರಿಹಾರವನ್ನು ಒದಗಿಸುವಲ್ಲಿ ದೇವರ ಪಾತ್ರವು ಅಯೋಧ್ಯೆ ತೀರ್ಪಿನ ಕುರಿತು ನಿಗೂಢತೆಗಳ ಪೈಕಿ ಒಂದನ್ನು ಮಾತ್ರ ಬೆಳಕಿಗೆ ತರಲು ನಮಗೆ ನೆರವಾಗುತ್ತದೆ.

# ಕ್ಸಿಜಿನ್ಪಿಂಗ್ ಜತೆ ಮೋದಿ ಮಾತುಕತೆ

**ಕಜಾನ್:** ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್ಪಿಂಗ್ ಅವರು ರಷ್ಯಾದ ಕಜಾನ್ನಲ್ಲಿ ಬುಧವಾರ ಬ್ರಿಕ್ಸ್ ಶೃಂಗಸಭೆಯ ಹಿನ್ನೆಲೆಯಲ್ಲಿ ದ್ವಿಪಕ್ಷೀಯ ಸಭೆ ನಡೆಸಿದರು.

ಐದು ವರ್ಷಗಳ ನಂತರ ಈ ದ್ವಿಪಕ್ಷೀಯ ಸಭೆಯನ್ನು ನಡೆಸಲಾಯಿತು. ಭಾರತವು ಕನಿಷ್ಠ 20 ಭಾರತೀಯ ಸೈನಿಕರ ಸಾವಿಗೆ ಕಾರಣವಾದ ಮಾರಣಾಂತಿಕ ಘರ್ಷಣೆಯಲ್ಲಿ ತೊಡಗಿದ ನಂತರ ಇದು ಮೊದಲನೆಯದಾಗಿದೆ.

ಪೂರ್ವ ಲಡಾಖ್ನಲ್ಲಿ ವಾಸ್ತವಿಕ ನಿಯಂತ್ರಣ ರೇಖೆಯ(ಎಲ್ಎಸಿ) ಉದ್ದಕ್ಕೂ ಗಸ್ತು ತಿರುಗುವ ಕುರಿತು ಉಭಯ ಪಕ್ಷಗಳು ಒಪ್ಪಂದಕ್ಕೆ ಬಂದ ಕೆಲವು ದಿನಗಳ ನಂತರ ನಿರ್ಣಾಯಕ ಸಭೆಯನ್ನು ಆಯೋಜಿಸಲಾಗಿತ್ತು.

ಗಡಿಯಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಕಾಪಾಡುವುದು ಮೊದಲ ಆದ್ಯತೆಯ ಮೇಲೆ ಉಳಿಯಬೇಕು ಎಂದು ಪ್ರಧಾನಿ ಮೋದಿ ಸಭೆಯಲ್ಲಿ ಚೀನಾ ನಾಯಕರಿಗೆ ಹೇಳಿದ್ದಾರೆ.

ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ನೆಮ್ಮದಿಯ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡಲು ಭಾರತ-ಚೀನಾ ಗಡಿ ವಿಶೇಷ ಪ್ರತಿನಿಧಿಗಳು ಮುಂಚಿನ ದಿನಾಂಕದಂದು ಭೇಟಿಯಾಗಲಿದ್ದಾರೆ ಎಂದು ಉಭಯ ನಾಯಕರು ಒಪ್ಪಿಕೊಂಡರು. ಗಡಿ ಪ್ರಶ್ನೆಗೆ ಸಮಂಜಸವಾದ



ಮತ್ತು ಪರಸ್ಪರ ಸ್ವೀಕಾರಾರ್ಹ ಪರಿಹಾರ ಕಂಡುಕೊಳ್ಳಲು ಚರ್ಚೆ ನಡೆಸಿದ್ದಾರೆ.

ದ್ವಿಪಕ್ಷೀಯ ಸಂಬಂಧಗಳನ್ನು ಸ್ಥಿರಗೊಳಿಸಲು ಮತ್ತು ಪುನರ್ನಿರ್ಮಾಣ ಮಾಡಲು ವಿದೇಶಾಂಗ ಮಂತ್ರಿಗಳು ಮತ್ತು ಇತರ ಅಧಿಕಾರಿಗಳ ಮಟ್ಟದಲ್ಲಿ ಸಂಬಂಧಿತ ಸಂವಾದ ಕಾರ್ಯವಿಧಾನಗಳನ್ನು ಸಹ ಬಳಸಿಕೊಳ್ಳಲಾಗುವುದು ಎಂದು ಬಹುನಿರೀಕ್ಷಿತ ದ್ವಿಪಕ್ಷೀಯ ಸಭೆಯಲ್ಲಿ ಪಿಎಂ ಮೋದಿ ಹೇಳಿದರು.

# ಹಿಜಬುಲ್ಲಾ ಉಗ್ರರ ಮುಖಂಡ ಹಶೀಮ್‌ನನ್ನು ಹೊಡೆದುರುಳಿಸಿದ ಇಸ್ರೇಲಿ ಪಡೆ!

**ಇಸ್ರೇಲ್:** ಮಧ್ಯ ಪ್ರಾಚ್ಯ ರಾಷ್ಟ್ರದಲ್ಲಿ ಯುದ್ಧದ ಕಾರ್ಮೋಡ ಹೆಚ್ಚುತ್ತಲೇ ಇದೆ. ಇಸ್ರೇಲ್ ಹಿಜಬುಲ್ಲಾ ಸಂಘಟನೆ ಮೇಲೆ ದಾಳಿ ಮುಂದುವರೆಸಿದ್ದು, ಹಿಜಬುಲ್ಲಾದ ಮತ್ತೋರ್ವ ಮುಖ್ಯಸ್ಥ ಹಶೀಮ್ ಸಫಿದ್ದೀನ್ ರನ್ನ ಹೊಡೆದುರುಳಿಸಲಾಗಿದೆ. ಇಸ್ರೇಲ್ ಸೇನೆಯೇ ಇದನ್ನ ಅಧಿಕೃತಗೊಳಿಸಿದ್ದು, ಇಸ್ರೇಲ್ ಸೇನೆ ರೌದ್ರಾವತಾರಕ್ಕೆ ಹಿಜಬುಲ್ಲಾ ಉಡೀಸ್ ಆಗಿದೆ.

ನಸ್ರಲ್ಲಾ ನಂತ್ರ ಹಿಜಬುಲ್ಲಾ ಉತ್ತರಾಧಿಕಾರಿ ಎಂದೇ ಸಫಿದ್ದೀನ್ ರನ್ನ ಹೋಲಿಕೆ ಮಾಡಲಾಗುತ್ತಿತ್ತು.

ಕಳೆದ 3 ದಿನಗಳ ಹಿಂದೆ ಇಸ್ರೇಲ್ ಕರಾವಳಿಯ ಕೆಸರಿಯಾ ನಗರದಲ್ಲಿರುವ ಬೆಂಜಮಿನ್ ನೆತನ್ಯಾಹು ಖಾಸಗಿ ನಿವಾಸದ ಮೇಲೆ ಹಿಜ್ಬುಲ್ಲಾ ನಡೆಸಿದ ಡ್ರೋನ್ ದಾಳಿಯ ಪ್ರತಿಕಾರವಾಗಿ ಸಫಿದ್ದೀನ್ ಹತ್ಯೆಗೈಯ್ಯಲಾಗಿದೆ.

ನೆತನ್ಯಾಹು ನಿವಾಸದ ಮೇಲೆ ದಾಳಿ ನಡೆಸಿದ ನಂತರ ಸೋಷಿಯಲ್ ಮಿಡಿಯಾದಲ್ಲಿ ಅವರು ಪೋಸ್ಟ್ ಮಾಡಿದ್ದರು.ಹಿಜ್ಬುಲ್ಲಾ ಸಂಘಟನೆಯನ್ನು ಇರಾನ್ನ ಪ್ರಾಕ್ಸಿ ಎಂದು ಉಲ್ಲೇಖಿಸಿದ್ದರು, ನನ್ನ ಮೇಲಿನ ಈ ಹತ್ಯೆ ಪ್ರಯತ್ನವು ನನ್ನನ್ನಾಗಲೀ ಅಥವಾ ಇಸ್ರೇಲ್ ಯುದ್ಧವನ್ನು ಮುಂದುವರೆಸುವುದನ್ನಾಗಲೀ ತಡೆಯಲು ಸಾಧ್ಯವಿಲ್ಲ ಎಂದು ಗುಡುಗಿದ್ದರು. ಈ ಬೆನ್ನಲ್ಲೇ ಈಗ ಸಫಿದ್ದೀನ್ ರನ್ನ ಉರುಳಿಸಿದ್ದಾರೆ.

ಇನ್ನು, ಹಿಜಬುಲ್ಲಾ ನಡೆಸಿದ ಡ್ರೋನ್ ದಾಳಿಯಿಂದ ಬೆಂಜಮಿನ್ ನೆತನ್ಯಾಹು ನಿವಾಸದ ಟೆರೇಸ್ ,ಕಿಟಕಿ ಹಾಗೂ ಬಾಗಿಲುಗಳಿಗೆ ಸಾಕಷ್ಟು ಹಾನಿಯಾಗಿತ್ತು.



## ಟರ್ಕಿಯ ಏರೋಸ್ಪೇಸ್ ಪ್ರಧಾನ ಕಚೇರಿ ಮೇಲೆ ಉಗ್ರರ ದಾಳಿ : ಮೂವರು ಸಾವು

**ಟರ್ಕಿ:** ಅಂಕಾರಾ ಬಳಿಯ ಟರ್ಕಿಶ್ ಏರೋಸ್ಪೇಸ್ ಇಂಡಸ್ಟ್ರೀಸ್ (ಟುಸಾಸ್) ಪ್ರಧಾನ ಕಚೇರಿಯಲ್ಲಿ ಮಾರಣಾಂತಿಕ ದಾಳಿ ನಡೆಸಲಾಗಿದೆ ಎಂದು ಟರ್ಕಿ ಬುಧವಾರ ಹೇಳಿದೆ, ಮಾಧ್ಯಮಗಳು ಸ್ಥಳದಲ್ಲಿ ದೊಡ್ಡ ಸ್ಫೋಟವನ್ನು ವರದಿ ಮಾಡಿವೆ. 'ಅಂಕಾರಾದ ಕಹ್ರಮನ್ಕಜಾನ್ನಲ್ಲಿರುವ ತುಸಾಸ್ ಸೌಲಭ್ಯಗಳ ಮೇಲೆ ಭಯೋತ್ಪಾದಕ ದಾಳಿ ನಡೆಸಲಾಯಿತು. ಮಾಹಿತಿ ಪ್ರಕಾರ ಮೂವರು ಸಾವನ್ನಪ್ಪಿದ್ದಾರೆ ಎಂದು ತಿಳಿದು ಬಂದಿದೆ. ಹಾನಿಗೊಳಗಾದ ಗೇಟ್ ಮತ್ತು ಪಾರ್ಕಿಂಗ್ ಸ್ಥಳದಲ್ಲಿ ಹತ್ತಿರದ ಘರ್ಷಣೆಯನ್ನು ತೋರಿಸಿವೆ. ಟುಸಾಸ್ ಟರ್ಕಿಯ ಪ್ರಮುಖ ರಕ್ಷಣಾ ಮತ್ತು ವಾಯುಯಾನ ಕಂಪನಿಗಳಲ್ಲಿ ಒಂದಾಗಿದೆ. ಈ ದಾಳಿಯ ಹೊಣೆಯನ್ನು ತಕ್ಷಣಕ್ಕೆ ಹೊತ್ತುಕೊಂಡಿಲ್ಲ.ಈ ವಾರ ಉಕ್ರೇನ್ ನ ಉನ್ನತ ರಾಜತಾಂತ್ರಿಕರು ಭೇಟಿ ನೀಡಿದ ಇಸ್ತಾಂಬುಲ್ ನಲ್ಲಿ ರಕ್ಷಣಾ ಮತ್ತು ಏರೋಸ್ಪೇಸ್ ಕೈಗಾರಿಕೆಗಳಿಗೆ ಪ್ರಮುಖ ವ್ಯಾಪಾರ ಮೇಳ ನಡೆಯುತ್ತಿರುವಾಗ ಸ್ಫೋಟ ಸಂಭವಿಸಿದೆ.

## 10 ರೂಪಾಯಿ ನಾಣ್ಯಗಳ ಕುರಿತು RBI ಮಹತ್ವದ ಪ್ರಕಟಣೆ!

**ದೆಹಲಿ:** 10 ರೂಪಾಯಿ ನಾಣ್ಯಗಳನ್ನು ತೆಗೆದುಕೊಳ್ಳಲು ಹಿಂಜರಿಯುವ ಅನೇಕ ಜನರಿದ್ದಾರೆ. ನಾಣ್ಯ ಅಮಾನ್ಯವಾಗಿದೆ ಎಂಬ ಪ್ರಚಾರ ನಡೆಯುತ್ತಿದೆ. ಆರ್ಬಿಐ ಇದುವರೆಗೆ ಈ ನಾಣ್ಯವನ್ನು ಅಧಿಕೃತವಾಗಿ ಅಮಾನ್ಯಗೊಳಿಸಿಲ್ಲ, ಆದ್ರೆ, ಜನರಲ್ಲಿ ತಪ್ಪು ಕಲ್ಪನೆ ಇದ್ದು, 10 ನಾಣ್ಯಗಳನ್ನು ತೆಗೆದುಕೊಳ್ಳಲು ನಿರಾಕರಿಸಿದರೆ ಅದನ್ನು ಅಪರಾಧ ಎಂದು ಪರಿಗಣಿಸಲಾಗುವುದು ಎಂದು ಆರ್ಬಿಐ ಈಗಾಗಲೇ ಘೋಷಿಸಿದೆ.ಈ ಹಿನ್ನೆಲೆಯಲ್ಲಿ ಇತ್ತೀಚಿನ ಇಂಡಿಯನ್ ಬ್ಯಾಂಕ್ 10 ರೂಪಾಯಿ ನಾಣ್ಯಗಳ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಕೈಗೊಂಡಿದೆ. ಆರ್ಬಿಐ ಜನರಲ್ ಮ್ಯಾನೇಜರ್ ರಾಜೇಶ್ವರ್ ರೆಡ್ಡಿ ಮಾತನಾಡಿ, ಈ ನಾಣ್ಯಗಳು ಕಾನೂನುಬದ್ಧವಾಗಿದ್ದು, ದೈನಂದಿನ ವಹಿವಾಟಿಗೆ ಬಳಸಬಹುದು. ಈ ಚಲಾವಣೆಯನ್ನು ವ್ಯಾಪಾರ ವಹಿವಾಟುಗಳಿಗೆ ಬಳಸಿಕೊಳ್ಳಲು ಆರ್ಬಿಐ ಆದೇಶದಂತೆ ಇಂಡಿಯನ್ ಬ್ಯಾಂಕ್ ವ್ಯಾಪಕ ಜಾಗೃತಿ ಮೂಡಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಅವರು ಹೇಳಿದರು. ಹೈದ್ರಾಬಾದ್'ನಲ್ಲಿ 10 ರೂಪಾಯಿ ನಾಣ್ಯಗಳ ಚಲಾವಣೆ ಕುರಿತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. 10 ರೂಪಾಯಿ ನಾಣ್ಯಗಳನ್ನ ಬಳಸಲು ತಮ್ಮ ಗ್ರಾಹಕರಿಗೆ ಸೂಚಿಸುತ್ತಿದ್ದೇವೆ ಎಂದು ಹೇಳಿದರು. ಈ ನಾಣ್ಯಗಳು ಬಸ್ಗಳಲ್ಲಿ ಮಾನ್ಯವಾಗಿರುತ್ತವೆ ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ, ಅನೇಕ ಗ್ರಾಹಕರು ಈ ನಾಣ್ಯಗಳನ್ನು ಅವರ ಕೈಯಿಂದ ಪಡೆದರು. ಇದರೊಂದಿಗೆ 10 ರೂಪಾಯಿ ನಾಣ್ಯದ ತಪ್ಪು ಕಲ್ಪನೆಗಳಿಗೆ ಬ್ರೇಕ್ ಬಿದ್ದಿದೆ. ಆದರೆ, ಇನ್ನೂ ಅನೇಕರು 10 ರೂಪಾಯಿ ನಾಣ್ಯಗಳನ್ನ ತೆಗೆದುಕೊಳ್ಳಲು ಹಿಂಜರಿಯುತ್ತಾರೆ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಇವುಗಳ ಬಗ್ಗೆ ಸರಿಯಾದ ತಿಳುವಳಿಕೆ ಇರುವುದಿಲ್ಲ. ಆದ್ದರಿಂದ, ಈ ನಾಣ್ಯಗಳು ಅಮಾನ್ಯವಾಗಿದೆ ಎಂಬ ಅನುಮಾನದ ಅಡಿಯಲ್ಲಿ ತೆಗೆದುಕೊಳ್ಳಲಾಗುವುದಿಲ್ಲ. ಈ ಕಾರಣದಿಂದಾಗಿ, ಈ ನಾಣ್ಯಗಳ ತಿರುಗುವಿಕೆ ಮಾರುಕಟ್ಟೆಯಲ್ಲಿ ತೀವ್ರವಾಗಿ ಕಡಿಮೆಯಾಗಿದೆ.





## ಮಿಸ್ ವರ್ಲ್ಡ್ ಸ್ಪರ್ಧೆಯಲ್ಲಿ ಪಾಕ್ ಸುಂದರಿ

**ಲಂಡನ್:** ಪಾಕಿಸ್ತಾನಿ ಮಾಡೆಲ್ಒಬ್ಬರು ಬಿಕನಿ ಧರಿಸಿ ಮಿಸ್ ವರ್ಲ್ಡ್ ಗ್ರ್ಯಾಂಡ್ ಶೋನಲ್ಲಿ ಭಾಗವಹಿಸಿದ್ದು, ಇದೀಗ ಚರ್ಚೆಗೆ ಕಾರಣವಾಗಿದೆ.

ಪಾಕಿಸ್ತಾನಿ ಮಾಡೆಲ್ ರೋಮಾ ಮೈಕೆಲ್ ಅವರ ಬಿಕನಿ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಈ ವಿಡಿಯೋದಲ್ಲಿ ಪಾಕಿಸ್ತಾನಿ ಮಾಡೆಲ್ ಯಾವುದೇ ರಿತಿಯ ಹಿಜಬ್ ಅನ್ನು ಧರಿಸಿಲ್ಲ.

ಈ ವಿಡಿಯೋಗೆ ಅನೇಕರು ಪರ ವಿರೋಧ ವ್ಯಕ್ತಪಡಿಸಿದ್ದಾರೆ. ಸಾಂಸ್ಕೃತಿಕ ಹಾಗೂ ಧಾರ್ಮಿಕ ಮೌಲ್ಯಕ್ಕೆ ಮಹತ್ವದ ಪಾತ್ರವನ್ನು ವಹಿಸುವ ಪಾಕಿಸ್ತಾನದಂತಹ ಸಂಪ್ರದಾಯವಾದಿ ಸಮಾಜದಲ್ಲಿ ಈ ರೀತಿಯ ಉಡುಗೆಗೆ ಟೀಕೆ ವ್ಯಕ್ತವಾಗಿದೆ.

ನೆಟ್ಟಿಗರು ಈ ಬಗ್ಗೆ ಟೀಕಿಸಿದ್ದು, ಒಂದು ಅಂತಾರಾಷ್ಟ್ರೀಯ ಸಮಾರಂಭದಲ್ಲಿ ಈ ರೀತಿಯಲ್ಲಿ ಭಾಗವಹಿಸುವುದು ಸಾಂಸ್ಕೃತಿಕ ಹಾಗೂ ಧಾರ್ಮಿಕ ನಂಬಿಕೆಗೆ ಅಗೌರವವನ್ನು ತೋರುತ್ತದೆ ಎಂದು ಕಿಡಿಕಾರಿದರೇ ಇನ್ನೂ ಕೆಲವರು ಇವರು ಪಾಕಿಸ್ತಾನದ ಮಾಡೆಲ್ ಅಲ್ಲ, ಬದಲಿಗೆ ಭಾರತೀಯ ಮಾಡೆಲ್ ಎಂದು ಹೇಳಿದ್ದಾರೆ.



# ರಷ್ಯಾದಲ್ಲಿ ಮೋದಿಗೆ ಸಂಸ್ಕೃತ ಹಾಡಿನ ಸ್ವಾಗತ

**ರಷ್ಯಾ:** ಪ್ರಧಾನಿ ನರೇಂದ್ರ ಮೋದಿ ಬ್ರಿಕ್ಸ್ ಶೃಂಗಸಭೆಯಲ್ಲಿ ಪಾಲ್ಗೊಳುವ ನಿಮಿತ್ತ ಇಂದು ರಷ್ಯಾಗೆ ತಲುಪಿದ್ದು, ವಿಮಾನ ನಿಲ್ದಾಣದಲ್ಲಿ ರೆಡ್ ಕಾರ್ಪೆಟ್ ವೆಲ್ಕಮ್ ನೀಡುವ ಮೂಲಕ ರಷ್ಯಾ ಮೋದಿ ಅವರನ್ನು ಅದ್ದೂರಿಯಾಗಿ ಸ್ವಾಗತಿಸಿಕೊಂಡಿದೆ.



ಈ ನಂತರ ಅಲ್ಲಿನ ರಷ್ಯಾದ ಪಾರಂಪರಿಕ ನಗರವಾದ ಕಜಾನ್ನಲ್ಲಿರುವ ಹೋಟೆಲ್ಗೆ ಮೋದಿ ಆಗಮಿಸಿದಾಗ ಪ್ರಧಾನಿ ಮೋದಿಗೆ ಅಚ್ಚರಿ ಕಾದಿತ್ತು.ಹೀಗೆ ಮೋದಿ ಬರುವಿಕೆಗಾಗಿ ಹೋಟೆಲ್ ನಲ್ಲಿ ನೆರೆದಿದ್ದ ಭಾರತೀಯ ಸಮುದಾಯದ ತಮ್ಮ ನೆಚ್ಚಿನ ನಾಯಕನನ್ನು ವಿಶಿಷ್ಟವಾಗಿ ಸ್ವಾಗತಿಸಿದೆ. ಪ್ರಧಾನಿ ಮೋದಿ ಹೋಟೆಲ್ ಒಳ ಪ್ರವೇಶಿಸುತ್ತಿದ್ದಂತೆ, ಅಲ್ಲಿದ್ದ ಭಾರತೀಯರು ಡೋಲು ಮತ್ತು ಇತರೆ ವಾದ್ಯಗಳನ್ನು ಬಾರಿಸಿ ಮೋದಿ ಸ್ವಾಗತಕ್ಕೆ ಮೆರಗು ನೀಡಿದ್ದು. ಇಷ್ಟು ಮಾತ್ರವಲ್ಲದೆ,ದೇವ ಭಾಷೆ ಸಂಸ್ಕೃತದಲ್ಲಿ ಮೋದಿಗೆ ಸ್ವಾಗತ ಗೀತೆಯನ್ನೂ ಹಾಡಿ ಭಾರತೀಯರು ಖುಷಿಪಟ್ಟಿದ್ದಾರೆ.ಈ ವೇಳೆ ಹೋಟೆಲ್ ತುಂಬೆಲ್ಲಾ ಮೋದಿ, ಮೋದಿ ಮತ್ತು ಭಾರತ್ ಮಾತಾಕಿ ಜೈ ಘೋಷಣೆಗಳು ಜೋರಾಗಿ ಕೇಳಿಬಂದವು.

# ಹಿಂಸಾಚಾರದಿಂದಾಗಿ ಉತ್ತರ ಗಾಝಾ ಪೋಲಿಯೋ ಅಭಿಯಾನ ಮುಂದೂಡಿಕೆ

**ಬರ್ಲಿನ್:** ಇಸ್ರೇಲ್‌ನ ಬಾಂಬ್ ದಾಳಿ, ಸಾಮೂಹಿಕ ಸ್ಥಳಾಂತರ ಹಾಗೂ ಪ್ರವೇಶಕ್ಕೆ ಮುಕ್ತ ಅವಕಾಶದ ಕೊರತೆಯ ಕಾರಣದಿಂದಾಗಿ ಉತ್ತರ ಗಾಝಾದಲ್ಲಿನ ಪೋಲಿಯೊ ಲಸಿಕೆ ಅಭಿಯಾನವನ್ನು ಮುಂದೂಡಿರುವುದಾಗಿ ವಿಶ್ವ ಆರೋಗ್ಯ ಸಂಸ್ಥೆ ಬುಧವಾರ ಹೇಳಿದೆ.

ಬುಧವಾರ ಆರಂಭವಾಗಬೇಕಿದ್ದು ಅಂತಿಮ ಹಂತದಲ್ಲಿ ಸುಮಾರು ಒಂದು ವರ್ಷದಿಂದ ಮುತ್ತಿಗೆಗೆ ಒಳಗಾಗಿರುವ ಫೆಲೆಸ್ತೀನ್ ಪ್ರದೇಶದ 1,29,000ಕ್ಕೂ ಅಧಿಕ ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ. ನಾಗರಿಕ ಮೂಲಸೌಕರ್ಯದ ಮೇಲೆ ಮುಂದುವರಿದ ದಾಳಿ ಸೇರಿದಂತೆ ಪ್ರಸ್ತುತ ಪರಿಸ್ಥಿತಿಗಳು ಉತ್ತರ ಗಾಝಾದಲ್ಲಿನ ಜನರ ಸುರಕ್ಷತೆ ಮತ್ತು ಚಲನೆಗೆ ಅಪಾಯ ಉಂಟು ಮಾಡುವುದನ್ನು ಮುಂದುವರಿಸಿದೆ. ಇದರಿಂದಾಗಿ ಕುಟುಂಬಗಳು ಲಸಿಕೆಗಾಗಿ ತಮ್ಮ ಮಕ್ಕಳನ್ನು ಸುರಕ್ಷಿತವಾಗಿ ಕರೆತರಲು ಮತ್ತು ಆರೋಗ್ಯ ಕಾರ್ಯಕರ್ತರು ಕಾರ್ಯನಿರ್ವಹಿಸಲು ಅಸಾಧ್ಯವಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದ್ದು ಗಾಝಾದಲ್ಲಿ ಕದನ ವಿರಾಮದ ಬೇಡಿಕೆಯನ್ನು ಪುನರುಚ್ಚರಿಸಿದೆ.

ಗಾಝಾದಲ್ಲಿನ ಮಗುವೊಂದು ಟೈಪ್ 2



ಪೋಲಿಯೋದಿಂದ ಭಾಗಶಃ ಪಾರ್ಶ್ವವಾಯುವಿಗೆ ಒಳಗಾಗಿರುವುದನ್ನು ವಿಶ್ವ ಆರೋಗ್ಯ ಸಂಸ್ಥೆ ದೃಢಪಡಿಸಿದ ಬಳಿಕ ಸೆಪ್ಟಂಬರ್ 1ರಂದು ಗಾಝಾ ಪೋಲಿಯೊ ಅಭಿಯಾನಕ್ಕೆ ಚಾಲನೆ ನೀಡಲಾಗಿತ್ತು. ಮಕ್ಕಳಿಗೆ ಎರಡನೇ ಡೋಸ್ನಲ್ಲಿನ ವಿಳಂಬವು ಪ್ರಸರಣವನ್ನು ನಿಲ್ಲಿಸುವ ಪ್ರಯತ್ನಗಳಿಗೆ ಅಪಾಯವನ್ನುಂಟು ಮಾಡುತ್ತದೆ. ಇದು ಗಾಝಾ ಪಟ್ಟಿ ಮತ್ತು ನೆರೆಹೊರೆಯ ದೇಶಗಳಲ್ಲಿ ಪೋಲಿಯೊ ಮತ್ತಷ್ಟು ಹರಡಲು ಕಾರಣವಾಗಬಹುದು ಮತ್ತು ಇನ್ನಷ್ಟು ಮಕ್ಕಳು ಪಾರ್ಶ್ವವಾಯುವಿಗೆ ತುತ್ತಾಗಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಕೆ ನೀಡಿದೆ.

# ಬಾಂಗ್ಲಾದಲ್ಲಿ ಮತ್ತೆ ಭುಗಿಲೆದ್ದ ಆಕ್ರೋಶ

**ಬಾಂಗ್ಲಾದೇಶ :** ಬಾಂಗ್ಲಾದೇಶದಲ್ಲಿ ಮತ್ತೊಮ್ಮೆ ಪ್ರತಿಭಟನೆಗಳು ಆರಂಭವಾಗಿವೆ. ತಡರಾತ್ರಿ ಪ್ರತಿಭಟನಾಕಾರರು ಬಂಗಾ ಭವನಕ್ಕೆ ಮುತ್ತಿಗೆ ಹಾಕಿದ್ದು ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನಾಕಾರರು ಅಧ್ಯಕ್ಷರ ರಾಜೀನಾಮೆಗೆ ಆಗ್ರಹಿಸಿ ಘೋಷಣೆಗಳನ್ನು ಕೂಗುತ್ತಾ ಮುಂದೆ ಸಾಗುತ್ತಿದ್ದರೂ ಈ ವೇಳೆ ಪೊಲೀಸರು ಬ್ಯಾರಿಕೇಡ್ಗಳನ್ನು ಹಾಕಿ ತಡೆದರು.

ಕೆಲವು ಪ್ರತಿಭಟನಾಕಾರರು ಬ್ಯಾರಿಕೇಡ್ಗಳನ್ನು ತಳ್ಳಿ ಮುಂದೆ ಸಾಗಲು ಯತ್ನಿಸಿದರು. ನಂತರ ಪೊಲೀಸರು ಅಶ್ರುವಾಯು ಶೆಲ್ಗಳನ್ನು ಸಿಡಿಸಿ ಅವರನ್ನು ತಡೆದರು. ಪ್ರತಿಭಟನಾಕಾರರನ್ನು ನಿಯಂತ್ರಿಸಲು ಪೊಲೀಸರು ಲಾಠಿ ಚಾರ್ಜ್ ಮಾಡಬೇಕಾಯಿತು. ನಂತರ ಪ್ರತಿಭಟನಾಕಾರರು ಹಿಂದೆ ಸರಿದಿದ್ದಾರೆ. ಲಾಠಿ ಚಾರ್ಜ್ ನಿಂದಾಗಿ ಕೆಲವು ಪ್ರತಿಭಟನಾಕಾರರು ಗಂಭೀರವಾಗಿ ಗಾಯಗೊಂಡಿದ್ದು ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳುಗಳಿಗೆ ಢಾಕಾ ವೈದ್ಯಕೀಯ ಕಾಲೇಜಿನಲ್ಲಿ ಚಿಕಿತ್ಸೆ ಮುಂದುವರಿದಿದೆ.

ವಾಸ್ತವವಾಗಿ, ಇತ್ತೀಚೆಗೆ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ,. ಶೇಖ್



ಹಸೀನಾ ಅವರು ಬಾಂಗ್ಲಾದೇಶದ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ ಎಂಬುದಕ್ಕೆ ತಮ್ಮ ಬಳಿ ಯಾವುದೇ ಪುರಾವೆಗಳಿಲ್ಲ ಎಂದು ಅವರು ಹೇಳಿದ್ದರು. ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರ ಈ ಹೇಳಿಕೆಯ ನಂತರ, ಬಾಂಗ್ಲಾದೇಶದ ಮೊಹಮ್ಮದ್ ಯೂನಸ್ ಅವರ ಮಧ್ಯಂತರ ಸರ್ಕಾರದ ಸಾಂವಿಧಾನಿಕತೆಯ ಬಗ್ಗೆ ಪ್ರಶ್ನೆಗಳು ಏಳಲಾರಂಭಿಸಿದವು. ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ನೀಡಿದ ಹೇಳಿಕೆಗೆ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಂಜೆ ಮುಗಿಲು

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ಸ್ಟೈಲೀಶ್ ಆಗಿ ಸೀರೆಯುಟ್ಟು ಹಾಟ್ ಆಗಿ ಕಾಣಿಸಿಕೊಂಡ ನಿಶ್ವಿಕಾ ನಾಯ್ಡು

ಸ್ಯಾಂಡಲ್‌ವುಡ್ ನಟಿ ನಿಶ್ವಿಕಾ ನಾಯ್ಡು ಅವರು ಸದಾ ಒಂದಲ್ಲಾ ಒಂದು ಫೋಟೋಶೂಟ್ ಮೂಲಕ ಗಮನ ಸೆಳೆಯುತ್ತಾರೆ. ಇದೀಗ ಹೊಸ ಫೋಟೋಶೂಟ್‌ನಲ್ಲಿ ನಿಶ್ವಿಕಾ ಹಾಟ್ ಆಗಿ ಕಾಣಿಸಿಕೊಂಡಿದ್ದಾರೆ.

ಸ್ಟೈಲೀಶ್ ಆಗಿ ಸೀರೆಯುಟ್ಟು ಹಾಟ್ ಆಗಿ ನಿಶ್ವಿಕಾ ಕಾಣಿಸಿಕೊಂಡಿದ್ದಾರೆ. ಕಪ್ಪು ಬಣ್ಣದ ಸೀರೆಯಲ್ಲಿ ನಟಿ ಮಿಂಚಿದ್ದಾರೆ. ಹೇರ್ ಸ್ಟೈಲ್‌ನಲ್ಲಿ ಮಿಂಚುತ್ತಾ ವಿವಿಧ ಭಂಗಿಯಲ್ಲಿ ನಟಿ ಪೋಸ್ ನೀಡಿದ್ದಾರೆ. ನಟಿಯ ಮುದ್ದಾದ ನಗುವಿಗೆ ಪಡ್ಡೆಹುಡುಗರು ಫಿದಾ ಆಗಿದ್ದಾರೆ.

ಇನ್ನೂ 2018ರಲ್ಲಿ 'ಅಮ್ಮ ಐ ಲವ್ ಯೂ' ಚಿತ್ರದ ಮೂಲಕ ನಿಶ್ವಿಕಾ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟರು. ಚಿರಂಜೀವಿ ಸರ್ಜಾಗೆ ನಾಯಕಿಯಾಗಿ ನಟಿಸಿದರು.

ವಾಸು ನಾನು ಪಕ್ಕಾ ಕಮರ್ಷಿಯಲ್, ಪಡ್ಡೆಹುಲಿ, ಜೆಂಟಲ್ ಮ್ಯಾನ್, ರಾಮರ್ಜುನ, ಸಖತ್, ಗಾಳಿಪಟ 2 ಸೇರಿದಂತೆ ಹಲವು ಸಿನಿಮಾಗಳಲ್ಲಿ ನಿಶ್ವಿಕಾ ನಾಯಕಿಯಾಗಿ ನಟಿಸಿದರು.

ಈ ವರ್ಷ ತೆರೆಕಂಡ 'ಕರಟಕ ದಮನಕ' ಸಿನಿಮಾದಲ್ಲಿ 'ಹಿತ್ತಲಕ ಕರಿಬ್ಯಾಡ ಮಾವ' ಹಾಡಿಗೆ ಖ್ಯಾತ ನಟ ಪ್ರಭುದೇವ ಜೊತೆ ನಿಶ್ವಿಕಾ ಹೆಜ್ಜೆ ಹಾಕಿದರು. ಈ ಸಾಂಗ್ ಸೂಪರ್ ಹಿಟ್ ಆಗಿತ್ತು. ಈ ಚಿತ್ರಕ್ಕೆ ಯೋಗರಾಜ್ ಭಟ್ ನಿರ್ದೇಶನ ಮಾಡಿದರು.

ಇದರ ಜೊತೆಗೆ ತೆಲುಗಿನಲ್ಲೂ ನಟಿಗೆ ಉತ್ತಮ ಅವಕಾಶಗಳು ಅರಸಿ ಬರುತ್ತಿವೆ. ಉತ್ತಮ ಕಥೆಗಾಗಿ ನಿಶ್ವಿಕಾ ಎದುರು ನೋಡ್ತಿದ್ದಾರೆ. ಸೂಕ್ತ ಕಥೆ ಸಿಕ್ಕಿದ್ದಲ್ಲಿ ನಟಿ ಟಾಲಿವುಡ್‌ಗೂ ಪಾದಾರ್ಪಣೆ ಮಾಡುತ್ತಾರೆ.

ಈ ವರ್ಷ 'ಮಹಾನಟಿ' ಎಂಬ ಶೋನಲ್ಲಿ ಪ್ರೇಮಾ, ತರುಣ್ ಸುಧೀರ್, ರಮೇಶ್ ಅರವಿಂದ್ ಜೊತೆ ನಿಶ್ವಿಕಾ ಜಡ್ಜ್ ಆಗಿ ಕಾಣಿಸಿಕೊಂಡಿದ್ದರು.



# ಪ್ರೀತಿಸಿ ಮದುವೆಯಾಗೋಕೆ ನನಗೆ ಸಮಯವಿಲ್ಲ



ಕನ್ನಡದ 'ಗಂಗೆ ಬಾರೆ ತುಂಗೆ ಬಾರೆ' ಸಿನಿಮಾದಲ್ಲಿ ಪ್ರಜ್ವಲ್ ದೇವರಾಜ್‌ಗೆ ನಾಯಕಿಯಾಗಿ ನಟಿಸಿದ್ದ ಸುನೈನಾ ಇದೀಗ ತಮಿಳಿನ 'ರಾಕೆಟ್ ಡ್ರೈವರ್' ಚಿತ್ರದ ಪ್ರಚಾರ ಕಾರ್ಯದಲ್ಲಿ ಬ್ಯುಸಿಯಾಗಿದ್ದಾರೆ. ಈ ಚಿತ್ರದ ಪ್ರಚಾರದ ವೇಳೆ, ನನಗೆ ಯಾರನ್ನಾದರೂ ಪ್ರೀತಿಸಲು ಮತ್ತು ಮದುವೆಯಾದಲು ಸಮಯವಿಲ್ಲ ಎಂದು ನಟಿ ಮಾತನಾಡಿದ್ದಾರೆ.

ಸಿನಿಮಾದಿಂದ ಸಿನಿಮಾಗೆ ಸದಾ ಹೊಸ ಪಾತ್ರಗಳ ಮೂಲಕ ಗಮನ ಸೆಳೆಯೋ ನಟಿ ಸುನೈನಾ ಈಗ 'ರಾಕೆಟ್ ಡ್ರೈವರ್' ಕಥೆ ಹೇಳೋಕೆ ಸಜ್ಜಾಗಿದ್ದಾರೆ. ಸಂದರ್ಶನವೊಂದರಲ್ಲಿ ಲವ್, ಮದುವೆ ಬಗ್ಗೆ ನಟಿ ಮಾತನಾಡಿ, ಯಾರನ್ನಾದರೂ ಪ್ರೀತಿಸಲು, ಮದುವೆಯಾಗಲು ನನಗೆ ಸಮಯವಿಲ್ಲ ಎಂದಿದ್ದಾರೆ. ನಾನು ಮೊದಲಿಂದಲೂ ಸಿನಿಮಾವನ್ನು ಮಾತ್ರ ಪ್ರೀತಿಸುತ್ತೇನೆ. ಅದನ್ನು ಬಿಟ್ಟು ಬೇರೇ ಯಾರನ್ನು ಪ್ರೀತಿಸುವುದಿಲ್ಲ. ಬಿಡುವಿನ ವೇಳೆಯಲ್ಲಿ ವೈಬ್‌ಸೈಟ್‌ನಲ್ಲಿ ನೋಡುತ್ತಲೇ ಇರುತ್ತೇನೆ. ಇದರಿಂದ ಹಲವು ವಿಷಯಗಳನ್ನು ಕಲಿಯುತ್ತಿದ್ದೇನೆ ಎಂದಿದ್ದಾರೆ ಸುನೈನಾ.

ಇನ್ನೂ ಕೆಲವು ತಿಂಗಳುಗಳ ಹಿಂದೆ, ತನ್ನ ಬೆರಳಿಗೆ ವಜ್ರದ ಉಂಗುರದ ಫೋಟೋ ಹಾಕಿ ಲಾಕ್ ಎಂದು ಅಡಿಬರಹ ನೀಡಿದ್ದರು. ಇದರಿಂದ ಅವರ ಮದುವೆಯ ಬಗ್ಗೆ ಸುದ್ದಿ ಹಬ್ಬಿತ್ತು. ಖ್ಯಾತ ದುಬೈನ ಯೂಟ್ಯೂಬರ್ ಜೊತೆ ಮದುವೆ ಎಂದು ಹೇಳಲಾಗಿತ್ತು. ಆದರೆ ಈಗ ಎಲ್ಲಾ ವದಂತಿಗಳು ಸುಳ್ಳು ಎಂಬ ಸ್ಪಷ್ಟನೆ ಸಿಕ್ಕಿದೆ. ಈ ಮೂಲಕ ತಾವು ಸಿಂಗಲ್ ಎಂದು ನಟಿ ಕ್ಲ್ಯಾರಿಟಿ ಕೊಟ್ಟಿದ್ದಾರೆ.

# ಆಂಧ್ರ ಸಿಎಂ ಜೊತೆ ಬಾಲಕೃಷ್ಣ ತುಂಟಾಟ, ಸಿನಿಮಾ ಡೈಲಾಗ್ ಹೇಳಿದ ನಾಯ್ಡು



ತೆಲುಗು ಚಿತ್ರರಂಗದ ಸ್ಟಾರ್ ಹೀರೋ, ನಂದಮೂರಿ ಬಾಲಕೃಷ್ಣ ರಾಜಕೀಯದಲ್ಲಿಯೂ ದಶಕಗಳಿಂದಲೂ ಸಕ್ರಿಯರಾಗಿದ್ದಾರೆ. ಕಳೆದ ವಿಧಾನಸಭೆ ಚುನಾವಣೆ ಸಮಯದಲ್ಲಿಯೂ ಸಹ ಹಿಂದೂಪರ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ. ಬಾಲಕೃಷ್ಣ ನಡೆಸಿಕೊಡುವ 'ಅನ್ ಸ್ಟಾಪೆಬಲ್ ಎನ್ ಬಿಕೆ' ಟಾಕ್ ಶೋ ತೆಲುಗಿನ ನಂಬರ್ ಒನ್ ಟಾಕ್ ಶೋ ಸಹ ಆಗಿದೆ. ಈಗ 'ಅನ್ ಸ್ಟಾಪೆನಲ್ ಎನ್ ಬಿಕೆ' ಸೀಸನ್ 4 ಆರಂಭಗೊಂಡಿದ್ದು, ಮೊದಲ ಅತಿಥಿಯಾಗಿ ಆಂಧ್ರ ಸಿಎಂ ಚಂದ್ರಬಾಬು ನಾಯ್ಡು ಅವರನ್ನು ವೇದಿಕೆಗೆ ಕರೆತಂದಿದ್ದಾರೆ ಬಾಲಕೃಷ್ಣ.

ಬಾಲಕೃಷ್ಣಗೆ ಭಾವ ಆಗಿರುವ ನಾರಾ ಚಂದ್ರಬಾಬು ನಾಯ್ಡು ಅವರನ್ನು ಸೀಸನ್ ನ ಮೊದಲ ಅತಿಥಿಯನ್ನಾಗಿ ಕರೆತಂದಿರುವ ಬಾಲಕೃಷ್ಣ, ಭಾವನ ಜೊತೆಗೆ ಸಖತ್ ತುಂಟತನ ಮಾಡಿದ್ದಾರೆ. ಸಿಎಂ ಚಂದ್ರಬಾಬು ನಾಯ್ಡು ಅವರನ್ನು ಹಲವು ಪ್ರಶ್ನೆಗಳನ್ನು ಕೇಳಿ ಇಕ್ಕಟ್ಟಿಗೆ ಸಿಲುಕಿದ್ದಾರೆ, ತಮಾಷೆ ಮಾಡಿದ್ದಾರೆ. ಜೊತೆಗೆ ರಾಜಕೀಯ, ಆಂಧ್ರ ಅಭಿವೃದ್ಧಿ ಕುರಿತು ಕೆಲವು ಗಂಭೀರ ಪ್ರಶ್ನೆಗಳನ್ನು ಸಹ ಕೇಳಿದ್ದಾರೆ. ಒಂದು ಹಂತದಲ್ಲಂತೂ ಸಿಎಂ ಚಂದ್ರಬಾಬು ನಾಯ್ಡು ಭಾವುಕರಾಗಿಬಿಟ್ಟಿದ್ದಾರೆ. ಚಂದ್ರಬಾಬು ನಾಯ್ಡು ಅವರ ಎಪಿಸೋಡ್‌ನ ಪ್ರೋಮೋ ಇದೀಗ ಬಿಡುಗಡೆ ಆಗಿದ್ದು ಶೋ ಶೀಘ್ರವೇ ಪ್ರಸಾರ ಆಗಲಿದೆ.

ಐದು ನಿಮಿಷದ ದೀರ್ಘವಾದ ಪ್ರೋಮೋ ಅನ್ನು ಬಿಡುಗಡೆ ಮಾಡಲಾಗಿದ್ದು, ಶೋನ ಹೈಲೈಟ್ ಸನ್ನಿವೇಶಗಳ ಝಲಕ್ ಅನ್ನು ಪ್ರೋಮೋನಲ್ಲಿ ನೀಡಲಾಗಿದೆ. 'ನನಗೆ ಭಾವ, ಆಂಧ್ರ ಜನರಿಗೆ ಬಾಬು' ಎಂದು ತಮ್ಮದೇ ಶೈಲಿಯಲ್ಲಿ ಸಿಎಂ ಚಂದ್ರಬಾಬು ನಾಯ್ಡು ಅವರನ್ನು ವೇದಿಕೆಗೆ ಆಹ್ವಾನಿಸಿರುವ ಬಾಲಕೃಷ್ಣ, ಶೋನಲ್ಲಿ ಸತ್ಯವನ್ನೇ ಹೇಳುವುದಾಗಿ ಸಿಎಂ ಚಂದ್ರಬಾಬು ನಾಯ್ಡು ಅವರ ಕೈಯಿಂದ ಪ್ರಮಾಣ ಮಾಡಿಸಿದ್ದಾರೆ.

ಚಂದ್ರಬಾಬು ನಾಯ್ಡು ಅವರನ್ನು ಜೈಲಿಗೆ ಹಾಕಿದ ಘಟನೆ, 83 ದಿನಗಳ ಕಾಲ ಜೈಲಿನಲ್ಲಿ ಕಳೆದ ಸಮಯ, ಜೈಲು ಅಧಿಕಾರಿಗಳು ನಡೆದುಕೊಂಡ ರೀತಿ ಹಾಗೂ ಜೈಲಿನಲ್ಲಿ ಪವನ್ ಕಲ್ಯಾಣ್ ಜೊತೆ ನಡೆದ ಐತಿಹಾಸಿಕ ಎರಡು ನಿಮಿಷದ ಸಭೆ ಹಲವು ವಿಷಯಗಳ ಬಗ್ಗೆ ಚಂದ್ರಬಾಬು ನಾಯ್ಡು ಮಾತನಾಡಿದ್ದಾರೆ.



ಜೈಲು ದಿನಗಳನ್ನು ನೆನದು ಭಾವುಕರಾಗಿದ್ದಾರೆ ಚಂದ್ರಬಾಬು ನಾಯ್ಡು. ಆ ನಂತರ ಚಂದ್ರಬಾಬು ನಾಯ್ಡು ಅವರ ಖಾಸಗಿ ಜೀವನದ ಬಗ್ಗೆಯೂ ಬಾಲಕೃಷ್ಣ ಪ್ರಶ್ನೆ ಮಾಡಿದ್ದಾರೆ. ಇಷ್ಟವಾದ ಸಿನಿಮಾ, ಯಾವ ನಗರ ಇಷ್ಟ ಧೋನಿ ಇಷ್ಟವೋ ಕೊಹ್ಲಿ ಇಷ್ಟವೋ ನೋಡಿದ ಸಿನಿಮಾ, ಮಾಡಿದ ತರ್ಲೆ ಕೆಲಸ ಅಡುಗೆ ಇನ್ನಿತರೆ ಹಲವು ವಿಷಯಗಳ ಬಗ್ಗೆ ಚಂದ್ರಬಾಬು ನಾಯ್ಡು ಅವರಿಗೆ ಪ್ರಶ್ನೆ ಕೇಳಿದ್ದಾರೆ ಬಾಲಯ್ಯ. ಸದಾ ಗಂಭೀರವಾಗಿರುವ ಚಂದ್ರಬಾಬು ನಾಯ್ಡು, ಬಾಲಯ್ಯ ಅವರ ಶೋನಲ್ಲಿ ತಮಾಷೆ ಮಾಡುತ್ತಾ, ನಗುತ್ತಾ ಕಾಣಿಸಿಕೊಂಡಿದ್ದಾರೆ. ವಿಶೇಷವೆಂದರೆ ಬಾಲಯ್ಯ ಅವರ ಜನಪ್ರಿಯ ಸಿನಿಮಾ ಡೈಲಾಗ್, 'ಬೋತ್ ಆರ್ ನಾಟ್ ಸೇಮ್' ಎಂದು ಅವರದ್ದೇ ಶೈಲಿನಲ್ಲಿ ಹೇಳಿ ರಂಜಿಸಿದ್ದಾರೆ ಸಿಎಂ ನಾಯ್ಡು. 'ಅನ್ ಸ್ಟಾಪೆಬಲ್ ಎನ್ ಬಿಕೆ' ಸೀಸನ್ 4 ರ ಮೊದಲ ಎಪಿಸೋಡ್ ಆಹಾ ಒಟಿಟಿಯಲ್ಲಿ ಅಕ್ಟೋಬರ್ 25 ರಂದು ಪ್ರಸಾರ ಆಗಲಿದೆ.



## ಲಕ್ನೋ ತಂಡದಿಂದ ಕೆ.ಎಲ್ ರಾಹುಲ್ ರಿಲೀಸ್

# ಆರ್‌ಸಿಬಿ ಸೇರ್ತಾರಾ ಕನ್ನಡಿಗ?

2025ರ ಇಂಡಿಯನ್ ಪ್ರೀಮಿಯರ್ ಲೀಗ್‌ಗೆ ಮೆಗಾ ಹರಾಜು ನಡೆಯುವ ಮುನ್ನವೇ ಕುತೂಹಲ ಮೂಡಿಸಿವೆ. ಲಕ್ನೋ ಸೂಪರ್ ಜೈಂಟ್ಸ್ ಫ್ರಾಂಚೈಸಿಯು ಈ ಬಾರಿ ನಾಯಕ ಕೆ.ಎಲ್ ರಾಹುಲ್ ಅವರನ್ನು ಹರಾಜಿಗೆ ಮುಂಚಿತವಾಗಿ ತಂಡದಿಂದ ಬಿಡುಗಡೆಗೊಳಿಸಲು ನಿರ್ಧರಿಸಿದೆ ಎಂದು ವರದಿಯಾಗಿದೆ.

ಹೌದು. 2025ರ ಐಪಿಎಲ್ ಬೆಳವಣಿಗೆ ಆರಂಭವಾದಾಗಿನಿಂದಲೂ ಕೆ.ಎಲ್ ರಾಹುಲ್ ಆರ್ ಸಿಬಿ ಸೇರಲಿದ್ದಾರೆ ಎಂಬ ಸುದ್ದಿ ದೊಟ್ಟಮಟ್ಟದಲ್ಲಿ ಸದ್ದು ಮಾಡಿತ್ತು. ಕನ್ನಡಿಗರು ಇದರಿಂದ ಸಂತಸಗೊಂಡಿದ್ದರು. ಇದೀಗ ಲಕ್ನೋ ಫ್ರಾಂಚೈಸಿ ರಾಕೆಟ್ ವೇಗಿ ಮಯಾಂಕ್ ಯಾದವ್ ಅವರನ್ನು 14 ಕೋಟಿ ರೂ.ಗೆ ರಿಟೇನ್ ಮಾಡಿಕೊಳ್ಳಲು ಮುಂದಾಗಿದ್ದು, ಕೆ.ಎಲ್ ರಾಹುಲ್ ಅವರನ್ನು ತಂಡದಿಂದ ಕೈಬಿಡುವ ನಿರ್ಧಾರಕ್ಕೆ ಬಂದಿದೆ ಎನ್ನಲಾಗಿದೆ. ಈ ಬೆನ್ನಲ್ಲೇ ಮುಂದಿನ ಐಪಿಎಲ್ ನಲ್ಲಿ ಕನ್ನಡಿಗ ಮತ್ತೆ ಆರ್‌ಸಿಬಿ ಸೇರ್ತಾರೆ ಅನ್ನೋ ಮಾತುಗಳು ಕೇಳಿಬಂದಿವೆ.

**ಕನ್ನಡಿಗನಿಗೆ ಮಣೆಹಾಕಲಿದೆಯೇ ಆರ್‌ಸಿಬಿ?:** 2022ರಲ್ಲಿ ಐಪಿಎಲ್‌ಗೆ ಪದಾರ್ಪಣೆ ಮಾಡಿದ ಲಕ್ನೋ ಸೂಪರ್ ಜೈಂಟ್ಸ್ ತಂಡದ ನಾಯಕನಾಗಿದ್ದ ಕೆ.ಎಲ್ ರಾಹುಲ್ ಸತತ 2 ಬಾರಿ ತಂಡವನ್ನು ಪ್ಲೇ ಆಫ್ ಪ್ರವೇಶಿಸುವಂತೆ ಮಾಡಿದ್ದರು. ಆದ್ರೆ ಈ ಬಾರಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಸೇರಲಿದ್ದಾರೆ ಎಂಬ ಮಾಹಿತಿ ಲಭ್ಯವಾಗಿವೆ. 2024ರ ಐಪಿಎಲ್ ಆವೃತ್ತಿಯಲ್ಲಿ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಲಕ್ನೋ ಹೀನಾಯವಾಗಿ ಸೋತಿತ್ತು. ಈ ವೇಳೆ ಲಕ್ನೋ ಫ್ರಾಂಚೈಸಿ ಮಾಲೀಕರಾದ ಸಂಜೀವ್ ಗೋಯೆಂಕಾ ರಾಹುಲ್ ವಿರುದ್ಧ ಮೈದಾನದಲ್ಲೇ ರೇಗಾಡಿದ್ದರು. ಈ ವೀಡಿಯೋ ಭಾರಿ ಚರ್ಚೆಗೆ ಗ್ರಾಸವಾಗಿತ್ತು. ಈ ಘಟನೆಯಿಂದ ರಾಹುಲ್, ಲಕ್ನೋ ತಂಡದಲ್ಲಿ ಮುಂದುವರಿಯುವ ಆಸಕ್ತಿ ಕಳೆದುಕೊಂಡಿದ್ದು, ಮೆಗಾ ಹರಾಜಿಗೂ ಮುನ್ನ ರಾಹುಲ್ ಆರ್‌ಸಿಬಿ ತಂಡ ಸೇರಲಿದ್ದಾರೆ ಎಂದು ಹೇಳಲಾಗುತ್ತಿದೆ.



**ಐಪಿಎಲ್ ವೃತ್ತಿ ಆರಂಭಿಸಿದ್ದು ಆರ್‌ಸಿಬಿಯಿಂದಲೇ:** 2013ರಿಂದ ಐಪಿಎಲ್ ವೃತ್ತಿ ಬದುಕು ಆರಂಭಿಸಿದ ಕೆ.ಎಲ್ ರಾಹುಲ್ ಮೊದಲು ಸೇರಿದ್ದು ಆರ್ ಸಿಬಿ ತಂಡವನ್ನೇ. 2013ರಲ್ಲಿ ಆರ್‌ಸಿಬಿ ತಂಡದಲ್ಲಿ ಆಡಿದ್ದ ರಾಹುಲ್ 2014 ಮತ್ತು 2015ರಲ್ಲಿ ಸನ್ ರೈಸರ್ಸ್ ಹೈದರಾಬಾದ್ ತಂಡದ ಪಾಲಾಗಿದ್ದರು. ಪುನಃ 2016ರಲ್ಲಿ ಆರ್‌ಸಿಬಿ ತಂಡವನ್ನೇ ಸೇರಿಕೊಂಡಿದ್ದರು. 2017ರಲ್ಲಿ ಆರ್‌ಸಿಬಿಯಲ್ಲೇ ಆಡುವ ಅವಕಾಶವಿದ್ದರೂ ಗಾಯದ ಸಮಸ್ಯೆಯಿಂದ ಹೊರಗುಳಿದ್ದರು. ಬಳಿಕ 2018 ರಿಂದ 2021ರ ವರೆಗೆ ಪಂಜಾಬ್ ಕಿಂಗ್ಸ್ ತಂಡದಲ್ಲಿದ್ದ ಕೆ.ಎಲ್ ರಾಹುಲ್ 2022ರಿಂದ ಲಕ್ನೋ ಸೂಪರ್ ಜೈಂಟ್ಸ್ ತಂಡ ಸೇರಿಕೊಂಡರು. ಈವರೆಗೆ ಐಪಿಎಲ್‌ನಲ್ಲಿ 132 ಪಂದ್ಯಗಳನ್ನಾಡಿರುವ ಕೆ.ಎಲ್ ರಾಹುಲ್ 134.61 ಸ್ಟ್ರೈಕ್ ರೇಟ್‌ನಲ್ಲಿ 4,683 ರನ್ ಗಳಿಸಿದ್ದಾರೆ. ಇದರಲ್ಲಿ 4 ಶತಕ, 37 ಅರ್ಧಶತಕ ಸೇರಿವೆ. ಸದ್ಯ ಈಗಾಗಲೇ 2025 ರಿಂದ 2027ರ ಐಪಿಎಲ್ ಆವೃತ್ತಿಗಳಿಗೆ ಹೊಸ ನಿಯಮಗಳನ್ನು ಘೋಷಣೆ ಮಾಡಿರುವ ಬಿಸಿಸಿಐ, ನವೆಂಬರ್ 24 ಮತ್ತು 25 ರಂದು ರಿಯಾದ್‌ನಲ್ಲಿ ಮೆಗಾ ಹರಾಜು ನಡೆಸಲು ತೀರ್ಮಾನಿಸಿದೆ. ಅದಕ್ಕಾಗಿ ಇದೇ ಅಕ್ಟೋಬರ್ 31ರ ಸಂಜೆ 5 ಗಂಟೆ ಒಳಗೆ ತಂಡದಲ್ಲಿ ಉಳಿಕೊಳ್ಳಬಹುದಾದ ಆಟಗಾರರ ಪಟ್ಟಿಯನ್ನು ಬಿಡುಗಡೆ ಮಾಡುವಂತೆ ಸೂಚನೆ ನೀಡಿದೆ.

## ಮುಲಾಜಿಲ್ಲದೆ ರಾಜಕಾಲುವೆ ಒತ್ತುವರಿ ತೆರವುಗೊಳಿಸಿ

# ಡಿಕೆಶಿ ಖಡಕ್ ವಾರ್ನಿಂಗ್

**ಬೆಂಗಳೂರು:** ಅನೇಕ ಕಡೆ ಖಾಸಗಿಯವರು ರಾಜಕಾಲುವೆ ಒತ್ತುವರಿ ತೆರವುಗೊಳಿಸದಂತೆ ನ್ಯಾಯಲಯದಿಂದ ತಡೆಯಾಜ್ಞೆ ತಂದಿದ್ದಾರೆ. ಇವರು ಕೆಲಸ ಮಾಡಲು ಬಿಡುತ್ತಿಲ್ಲ. ತುರ್ತು ಸಂದರ್ಭದಲ್ಲಿ ಇವುಗಳಿಗೆ ಅವಕಾಶವಿಲ್ಲ. ತೆರವುಗೊಳಿಸಲು ಕಾನೂನಿನಲ್ಲಿ ಅವಕಾಶವಿದೆ. ಯಾವುದನ್ನೂ ಪರಿಗಣಿಸದೇ ಕೂಡಲೇ ಎಲ್ಲಾ ಒತ್ತುವರಿಗಳನ್ನು ತೆರವುಗೊಳಿಸಿ ಹಾಗೂ ಪ್ರವಾಹ ಪರಿಸ್ಥಿತಿ ನಿರ್ವಹಣೆ ಅಡಿಯಲ್ಲಿ ಕೂಡಲೇ ಆದೇಶ ಹೊರಡಿಸಿ ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿರುವುದಾಗಿ ಡಿಸಿಎಂ ಡಿಕೆ ಶಿವಕುಮಾರ್ ಹೇಳಿದರು.

ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿಡಿಎ ಮತ್ತು ಬಿಬಿಎಂಪಿಗೂ ಸೂಚನೆ ನೀಡಿದ್ದೇನೆ. ಯಾರೇ ಖಾಸಗಿಯವರು ಅಡ್ಡಿ ಪಡಿಸಿದರೂ ನಾವು ನಮ್ಮ ಕೆಲಸ ಮಾಡುತ್ತೇವೆ. ಇಂತಹ ಸಂದರ್ಭದಲ್ಲಿ ನ್ಯಾಯಲಯದ ಪ್ರಕರಣ ಮುಖ್ಯವಲ್ಲ. ನಮಗೆ ಸಾರ್ವಜನಿಕರ ಹಿತ ಮುಖ್ಯ. ನೀರು ಸರಾಗವಾಗಿ ಹರಿಯುವ ಕಡೆ ಒತ್ತುವರಿ ತೆರವುಗೊಳಿಸಲು ಕೂಡಲೇ ಕೆಲಸ ಮಾಡಬೇಕು ಎಂದು ಆದೇಶ ನೀಡಿದ್ದೇನೆಂದರು.



ಯಲಹಂಕದ ಕೇಂದ್ರಿಯ ವಿಹಾರದಲ್ಲಿ 8 ಬ್ಲಾಕ್ ಗಳಿದ್ದು ಸುಮಾರು 600ಕ್ಕೂ ಹೆಚ್ಚು ಫ್ಲಾಟ್‌ಗಳಿವೆ. ಇವುಗಳನ್ನು ಸದ್ಯದ ಮಟ್ಟಿಗೆ ಬಿಬಿಎಂಪಿ ರಕ್ಷಣಾ ಕಾರ್ಯಕ್ಕಾಗಿ ಸುಪರ್ಧಿಗೆ ತೆಗೆದುಕೊಂಡಿದೆ. ಶೇ.95 ರಷ್ಟು ನಿವಾಸಿಗಳು ಸ್ಥಳಾಂತರಕ್ಕೆ ಸಹಕಾರ ನೀಡಿದ್ದಾರೆ. 20 ಕುಟುಂಬಗಳು ವಿದ್ಯುತ್ ಸಂಪರ್ಕವಿಲ್ಲದಿದ್ದರೂ ನಾವು ಇರುತ್ತೇವೆ ಎಂದು ಹೇಳಿದ್ದಾರೆ. ಅವರನ್ನು ಇಲ್ಲಿಯೇ ಬಿಡಲು ಆಗುವುದಿಲ್ಲ. ಏಕೆಂದರೆ ಕುಡಿಯಲು ನೀರಿಲ್ಲ, ತಿನ್ನಲು ಆಹಾರವಿಲ್ಲ ಹೀಗಿದ್ದಾಗ ಏನಾದರೂ ತೊಂದರೆ ಆದರೆ ನಾವು ಜವಾಬ್ದಾರರಾಗುತ್ತೇವೆ. ಈ ಕಾರಣಕ್ಕೆ ಅವರ ಮನವೊಲಿಸಿ ಹತ್ತಿರದಲ್ಲಿಯೇ ವಸತಿಗೃಹಗಳಲ್ಲಿ ವ್ಯವಸ್ಥೆ ಮಾಡಿಕೊಡಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದರು.

ಅನೇಕರು ವಯಸ್ಸಾದವರು ಮನೆ ಬಿಟ್ಟು ಹೊರಗೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಮನೆಯ ಬಗ್ಗೆ ಭಾವನಾತ್ಮಕವಾಗಿ ಯೋಚನೆ ಮಾಡುತ್ತಿದ್ದಾರೆ. ಅಂತಹವರಿಗೆ ಒಂದು ವಾರದ ಮಟ್ಟಿಗೆ ಹತ್ತಿರದಲ್ಲಿಯೇ ವಸತಿಗೃಹಗಳಲ್ಲಿ ವ್ಯವಸ್ಥೆ ಮಾಡಿಕೊಡಲಾಗುವುದು. ಇದು ನಮ್ಮ ಜವಾಬ್ದಾರಿ. ಇಲ್ಲಿನ ನಿವಾಸಿಗಳ ಸಂಘದವರೂ ಸಹಕಾರ ನೀಡುತ್ತಿದ್ದಾರೆ. ತೊಂದರೆಗೆ ಒಳಗಾದವರಿಗೆ ಅವರ ಮನೆಯಂತೆಯೇ ಸೌಲಭ್ಯ ಕಲ್ಪಿಸಿಕೊಡಲಾಗುವುದು. ನಿವಾಸಿಗಳು ಮುಜುಗರಕ್ಕೆ ಒಳಗಾಗದೇ ಅಧಿಕಾರಿಗಳ ಬಳಿ ಕೇಳಿ ಸೌಲಭ್ಯ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಮಳೆ ನೀರು ತುಂಬಿಕೊಂಡಿರುವುದಕ್ಕೆ ಭವಿಷ್ಯದಲ್ಲಿ ಪರಿಹಾರವೇನು ಎಂದು ಕೇಳಿದಾಗ, ಬೆಂಗಳೂರಿನ ಹಾಗೂ ಯಲಹಂಕ ಇತಿಹಾಸದಲ್ಲಿಯೇ 115– 120 ವರ್ಷಗಳ ನಂತರ ವಾಡಿಕೆಗಿಂತ ಹೆಚ್ಚು ಮಳೆ ಸುರಿದಿದೆ. ನಮಗೆ ಇಷ್ಟು ಜಾಸ್ತಿ ಮಳೆ ಬರುತ್ತದೆ ಎನ್ನುವ ಕಲ್ಪನೆಯೂ ಇರಲಿಲ್ಲ. ಎಲ್ಲೆಲ್ಲಿ ನೀರು ನುಗ್ಗುತ್ತಿದೆ ಹಾಗೂ ನೀರು ಸರಾಗವಾಗಿ ಹರಿಯುವ ವ್ಯವಸ್ಥೆ ಮಾಡುವುದಕ್ಕೆ ಜಾಗಗಳನ್ನು ಗುರುತಿಸಲಾಗುತ್ತಿದೆ ಎಂದು ಹೇಳಿದರು.

# ಐಪಿಎಲ್‌ನಲ್ಲಿ ಡೆಲ್ಲಿ ಟೀಂ ಬಿಟ್ಟು ಬೇರೆ ತಂಡದ ಕ್ಯಾಪ್ಟನ್ ಆಗ್ತಾರಾ ರಿಷಬ್ ಪಂತ್?

ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ರಿಷಬ್ ಪಂತ್ ಭವಿಷ್ಯ ಸದ್ಯಕ್ಕೆ ತೂಗುಯ್ಯಾಲೆಯಲ್ಲಿದೆ. ಐಪಿಎಲ್‌ನಲ್ಲಿ ಡೆಲ್ಲಿ ಟೀಂ ಬಿಟ್ಟು ಬೇರೆ ತಂಡಕ್ಕೆ ರಿಷಬ್ ಪಂತ್ ಕ್ಯಾಪ್ಟನ್ ಆಗ್ತಾರಾ ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ.

2025 ರ ಇಂಡಿಯನ್ ಪ್ರೀಮಿಯರ್ ಲೀಗ್ ಮೆಗಾ ಹರಾಜಿನ ಮೊದಲು ಪಂತ್ ತಂಡಕ್ಕೆ ಆದ್ಯತೆಯ ಧಾರಣ ಎಂದು ಡಿಸಿ ಸಹ-ಮಾಲೀಕ ಪಾರ್ಥ್ ಜಿಂದಾಲ್ ಈ ಹಿಂದೆ ಭರವಸೆ ನೀಡಿದ್ದರು. ತಮ್ಮ ಫ್ರಾಂಚೈಸಿ ಖಂಡಿತವಾಗಿಯೂ ಪಂತ್ ಅವರನ್ನು ಉಳಿಸಿಕೊಳ್ಳುತ್ತದೆ ಎಂದಿದ್ದರು. ಅದರೆ, ಈಗ ಅವರನ್ನು ಉಳಿಸಿಕೊಳ್ಳುವ ಬಗ್ಗೆ ಯಾವುದೇ ಖಚಿತತೆ ಇಲ್ಲ.

ಆಅ ಫ್ರಾಂಚೈಸಿ, ಪಂತ್ ಅವರನ್ನು ಉಳಿಸಿಕೊಳ್ಳಲು ಉತ್ಸುಕವಾಗಿದೆ. ಆದರೆ, ಜೆಎಸ್‌ಡಬ್ಲ್ಯೂ ಮತ್ತು ಜಿಎಂಆರ್ ಐಪಿಎಲ್ ಗಾಗಿ ಜವಾಬ್ದಾರಿಗಳನ್ನು ವಿಭಜಿಸುವುದರಿಂದ



ಬದಲಾವಣೆ ಆಗಬಹುದು ಎನ್ನಲಾಗಿದೆ. ಜಿಎಂಆರ್ ಮತ್ತು ಜೆಎಸ್‌ಡಬ್ಲ್ಯೂ ತಲಾ ಎರಡು ವರ್ಷಗಳ ಕಾಲ ದೆಹಲಿ ಕ್ಯಾಪಿಟಲ್ಸ್ ಅನ್ನು ನಿರ್ವಹಿಸುತ್ತವೆ ಎಂದು ಘೋಷಿಸಿದ ನಂತರ ಈ ಚರ್ಚೆ ಹುಟ್ಟಿಕೊಂಡಿದೆ.

ಒಪ್ಪಂದದ ಪ್ರಕಾರ, ಜಿಎಂಆರ್ 2025 ಮತ್ತು 2026ರ ಐಪಿಎಲ್ ಋತುಗಳಿಗಾಗಿ ಡೆಲ್ಲಿ ಕ್ಯಾಪಿಟಲ್ಸ್ ಅನ್ನು ನಿರ್ವಹಿಸುತ್ತದೆ. ಈ ಬದಲಾವಣೆಗಳಿಗೆ ಅನುಗುಣವಾಗಿ, ವೇಣುಗೋಪಾಲ್ ರಾವ್ ಮತ್ತು ಹೇಮಂಗ್ ಬದಾನಿ ಅವರನ್ನು ಕ್ರಮವಾಗಿ ಕ್ರಿಕೆಟ್ ನಿರ್ದೇಶಕ ಮತ್ತು ಡಿಸಿ ಮುಖ್ಯ ಕೋಚ್ ಆಗಿ ನೇಮಿಸಲಾಗಿದೆ.

ಏತನ್ಮಧ್ಯೆ, ಲಕ್ನೋ ಸೂಪರ್ ಜೈಂಟ್ಸ್ ಮತ್ತು ಪಂಜಾಬ್ ಕಿಂಗ್ಸ್ ಸೇರಿದಂತೆ ಇತರ ಐಪಿಎಲ್ ತಂಡಗಳು ಪಂತ್ ಅವರನ್ನು ನಾಯಕನನ್ನಾಗಿ ಮಾಡಲು ಆಸಕ್ತಿ ತೋರಿಸಿವೆ. ಇದು ಅವರ ಧಾರಣೆಗೆ ಕರೆ ತೆಗೆದುಕೊಳ್ಳಲು ಡೆಲ್ಲಿ ಕ್ಯಾಪಿಟಲ್ಸ್ ಮೇಲೆ ಮತ್ತಷ್ಟು ಒತ್ತಡವನ್ನು ಉಂಟುಮಾಡುತ್ತದೆ.

# ಕರ್ನಾಟಕ ಫ್ರಾಡ್‌ಗಳ ಸಂತೆಯಾಗಲು ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರಣ

**ಮೈಸೂರು:** ಮುಡಾ ಹಾಗೂ ವಾಲ್ಮೀಕಿ ಹಗರಣ ಪ್ರಕರಣದಲ್ಲಿ ಕಾಂಗ್ರೆಸ್ ಮುಳುಗಿದೆ. ಇದರ ಜೊತೆಗೆ ಯೋಗೇಶ್ವರ್ ಎಂಬ ಮತ್ತೊಬ್ಬ ಫ್ರಾಡ್ ಕಾಂಗ್ರೆಸ್‌ಗೆ ಜೊತೆಯಾಗಿದ್ದಾನೆ. ಕರ್ನಾಟಕ ಫ್ರಾಡ್‌ಗಳ ಸಂತೆಯಾಗಿದೆ, ಇದಕ್ಕೆ ಕಾರಣರು ಸಿಎಂ ಸಿದ್ದರಾಮಯ್ಯ ವಿಧಾನ ಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಲೇವಡಿ ಮಾಡಿದ್ದಾರೆ.



ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸೈನಿಕ ಕುಲಕ್ಕೆ ಯೋಗೇಶ್ವರ್ ಅಪಮಾನ. ಅವನನ್ನ ಸೈನಿಕ ಅಂತ ಕರೆಯಬೇಡಿ. ಹುಣಸೂರು ಉಪ ಚುನಾವಣೆ ವೇಳೆ ಪಾರ್ಟಿ ಕೊಟ್ಟ ಹಣ ತೆಗೆದು ಕೊಂಡು ಓಡಿ ಹೋದ. ಕಾಂಗ್ರೆಸ್‌ಗೆ ಒಬ್ಬ ಫ್ರಾಡ್ ಯೋಗೇಶ್ವರ್ ಅನಿವಾರ್ಯ ಆಗಿಬಿಟ್ನಾ? ಎಂದು ಏಕವಚನದಲ್ಲೇ ವಾಗ್ದಾಳಿ ನಡೆಸಿದ್ದಾರೆ.

ಮುಡಾ ಹಾಗೂ ವಾಲ್ಮೀಕಿ ವಂಚನೆ ಪ್ರಕರಣದಲ್ಲಿ ಕಾಂಗ್ರೆಸ್ ಮುಳುಗಿದೆ. ಇದರ ಜೊತೆಗೆ ಯೋಗೇಶ್ವರ್ ಎಂಬ ಮತ್ತೊಬ್ಬ ಫ್ರಾಡ್ ಕಾಂಗ್ರೆಸ್‌ಗೆ ಜೊತೆಯಾಗಿದ್ದಾನೆ. ಕರ್ನಾಟಕ ಫ್ರಾಡ್ ಗಳ ಸಂತೆಯಾಗಿದೆ, ಇದಕ್ಕೆ ಕಾರಣರು ಸಿಎಂ ಸಿದ್ದರಾಮಯ್ಯ ಎಂದು ಲೇವಡಿ ಮಾಡಿದ್ದಾರೆ.

ಇದೇ ವೇಳೆ ನಾನು ಪ್ರಾಮಾಣಿಕ ಎಂಬ ಸಿದ್ದರಾಮಯ್ಯ ಭಾಷಣಕ್ಕೆ ತಿರುಗೇಟು ನೀಡಿದ ವಿಶ್ವನಾಥ್, ಈ ಉಪಚುನಾವಣೆಯಿಂದ ಸರಕಾರಕ್ಕೆ ಏನೂ ಆಗಲ್ಲ. ಅದಕ್ಕೆ ಯಾಕೆ ಇಷ್ಟು ತಲೆ ಕೆಡಿಸಿಕೊಂಡಿದ್ದಾರೆ? ಸಿದ್ದರಾಮಯ್ಯ ಕಾಂಗ್ರೆಸ್ ಅನ್ನು ಹಾಳು ಮಾಡಿಬಿಟ್ಟರು. ಸಿದ್ದರಾಮಯ್ಯನವರೇ ರಾಜ್ಯದ ಜನ ಮಂಗರಲ್ಲ. ನಿಮ್ಮ ಸುಳ್ಳು ಜನರಿಗೆ ಅರ್ಥವಾಗುತ್ತಿದೆ. ಸಿದ್ದರಾಮಯ್ಯ ಒಬ್ಬ ಭ್ರಷ್ಟ ಎಂಬುದು ಜನರಿಗೆ ಗೊತ್ತಾಗಿದೆ. ಅಹಿಂದ ವರ್ಗಕ್ಕೆ ಸಿದ್ದರಾಮಯ್ಯ ಏನು ಮಾಡಿದ್ದಾರೆ ಎಂದು ಪ್ರಶ್ನೆ ಮಾಡಿದ್ದಾರೆ.

ಸಿದ್ದರಾಮಯ್ಯ ಅವರೇ ನಿಮ್ಮ ಸೊಸೆ ಹೆಸರಿನಲ್ಲಿ ಪಬ್ ಇಲ್ವಾ? ಅದಕ್ಕೆ ಕೋಟ್ಯಂತರ ಬಾಡಿಗೆ ಬರೋದಿಲ್ವಾ? ಭೈರತಿ ಸುರೇಶ್‌ನನ್ನ ಒದ್ದು ಒಳಗೆ ಹಾಕಿ. ಮುಡಾದ ಎಲ್ಲಾ ಹಗರಣ ಬಯಲಾಗುತ್ತದೆ. ಒಳ್ಳೆ ಕೆಲಸಕ್ಕೆ ಕುರುಬರನ್ನು ಕರೆಯಿರಿ ಅಂತಿದ್ದರು. ಈಗ ಅದಕ್ಕೂ ಸಿದ್ದರಾಮಯ್ಯ, ಬೈರತಿ ಸುರೇಶ್ ಅಂತವರು ಮಸಿ ಬಳಿದು ಬಿಟ್ಟರು. ಸಿದ್ದರಾಮಯ್ಯಗೆ ಅಂಟಿರುವ ಕೊಳಕು ತೊಳೆದುಕೊಳ್ಳಲು ಆಗಲ್ಲ ಎಂದು ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಸಿದ್ದರಾಮಯ್ಯ 16ನೇ ಲೂಯಿ ದೊರೆ ಇದ್ದಂಗೆ. ಲೂಯಿ ತನ್ನ ನಂತರ ಜಲಪ್ರಳಯ ಆಗಲಿ ಅಂದಿದ್ದ. ಅದೇ ರೀತಿ ಸಿದ್ದರಾಮಯ್ಯ ತನ್ನ ನಂತರ ಯಾರು ಇರಬಾರದು ಎಂಬ ಮನಃಸ್ಥಿತಿ ಹೊಂದಿದ್ದಾರೆ. ಒಕ್ಕಲಿಗರು, ಲಿಂಗಾಯತರು ಸಿದ್ದರಾಮಯ್ಯಗೆ ಮತ ಹಾಕಿಲ್ವಾ? ಯಾಕೆ ಈಗ ಹಿಂದುಳಿದ ಕಾರ್ಡ್ ಅನ್ನು ಸಿಎಂ ಪ್ಲೇ ಮಾಡುತ್ತಿದ್ದಾರೆ? ಹಿಂದುಳಿದವರ ಮೂಗಿಗೆ ಸಿದ್ದರಾಮಯ್ಯ ಬೆಣ್ಣೆ ಸವರಿದ್ದಾರೆ. ಪ್ರದೇಶ ಕುರುಬರ ಸಂಘ ಒಡೆದಿದ್ದು ಯಾರು? ನಾನು ಕಟ್ಟಿದ ಕುರುಬರ ಮಠ ಒಡೆದಿದ್ದು ಯಾರು? ಇದೇ ಸಿದ್ದರಾಮಯ್ಯ ತಾನೇ ಎಂದು ಆರೋಪ ಮಾಡಿದ್ದಾರೆ.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com